Department of Public Instruction, Mysore

ಶಬ್ದಾದರ್ಶ

ವೆಂಬ

ಹೊಸಗನ್ನಡ ವ್ಯಾಕರಣವು

ಮೈಸೂರು ಶ್ರೀಮನ್ಮಹಾರಾಜರವರ ಕನ್ನಡ ಹೈಸ್ಕೂಲ್ ಹೆಡ್‌ಮಾಸ್ಟರ್

ಬಿ. ಮಲ್ಲಪ್ಪನವರಿಂದ

ರಚಿಸಲ್ಪಟ್ಟಿತು.

Nineteenth Edition—10,000 Copies

MYSORE

PRINTED AT THE GOVERNMENT BRANCH PRESS

1927

Price 0-4-6

1. The maximum time allowed for retention of a book shall be one fortnight. It may be borrowed again if not required by others.

2. No reference books shall be lent out.

3. No borrower shall have more than two volumes out of the Library at one time.

4. Borrowers must not pass books from one to another but must return them to the Librarian.

5. Library books must not be used as class-books.

6. Any one who defaces by writing or otherwise damages any book shall pay the full cost of the book or of the entire works, if it consists of more than one volume.

7. The borrower shall be responsible for the value of the books lent out to him if they are lost, damaged or otherwise cannot be returned to the Library when they are due or recalled.

8. The presence of the voucher with the Librarian shall be considered sufficient proof of the non-return of books.

1615-36 The Bangalore Press

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜ್,

ಬೆಂಗಳೂರು.

1927—1928.

ಬಹುಮಾನ ~~ಜೀವನ ಸಹಾಯ~~.

ಹೆಸರು ಗ್ರಾ. ರಂ. ಗನಾಥ

ತರಗತಿ ಪ್ರೌಢಪರೀ. II.

ಕ್ರಮ ಯಾ ಸ್ಥಿತಿ —

ತಾರೀಖು 18—8—1929.

K. R. Venkata Subba Sastry

ಪ್ರಿನ್ಸಿಪಾಲ್

ಕಾಸ್ಮೊಪಾಲಿಟನ್ ಪ್ರೆಸ್, ಬೆಂಗಳೂರು ಸಿಟಿ—೧೯೨೮.

Department of Public Instruction, Mysore

ಶಬ್ದಾದರ್ಶ

ವೆಂಬ

ಹೊಸಗನ್ನಡ ವ್ಯಾಕರಣವು

ಮೈಸೂರು ಶ್ರೀಮನ್ಮಹಾರಾಜರವರ ಕನ್ನಡ ಹೈಸ್ಕೂಲ್ ಹೆಡ್‌ಮಾಸ್ಟರ್

ಬಿ. ಮಲ್ಲಪ್ಪನವರಿಂದ

ರಚಿಸಲ್ಪಟ್ಟಿತು.

Nineteenth Edition—10,000 Copie

MYSORE
PRINTED AT THE GOVERNMENT BRANCH PRESS
1927.

ಪೀಠಿಕೆ.

"ಟೆಕ್ಸ್ಟ್ ಬುಕ್ ಕಮಿಟಿ" ಎಂಬ ಸಭೆಯ ಅಧ್ಯಕ್ಷರಾದ ಮೆ॥ ಭಾಭಾ, ಎಮ್. ಎ., ಯವರು ಕೇಳಿಕೊಂಡ ಮೇರೆಗೆ ಆ ಸಭಾ ಸಾಮಾಜಿಕರಾದ ಬಿ. ಮಲ್ಲಪ್ಪನವರು, ಎಸ್. ಜಿ. ನರಸಿಂಹಾಚಾರ್ಯರು, ಆರ್. ನರಸಿಂಹಾಚಾರ್ಯರು ಈ ಮೂವರೂ ಒಂದು ಉಪಸಭೆ ಸೇರಿ ಈ ಪುಸ್ತಕವನ್ನು ತಿದ್ದಿದ್ದಾರೆ.

*   *   *   *   *

ಎರಡನೆಯಾವೃತ್ತಿ ಪಂಡಿತ ಕರಿಬಸವಪ್ಪಶಾಸ್ತ್ರಿಗಳು, ಪಂಡಿತ ಶ್ರೀನಿವಾಸರಾಘವಾಚಾರ್ಯರು, ಪಂಡಿತ ಕಾನಕಾನಹಳ್ಳಿ ವರದಾಚಾರ್ಯರು, ಬಿ. ಎಂ. ಶ್ರೀಕಂಠಯ್ಯನವರು (ಅಧ್ಯಕ್ಷರು) ಇವರು ತಿದ್ದಿರುತ್ತಾರೆ. ಗ್ರಂಥದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿರುವರಲ್ಲದೆ, ಷಟ್ಪದಿ ಕಾವ್ಯಗಳನ್ನು ಓದುವ ವಿದ್ಯಾರ್ಥಿಗಳ ಸೌಕರ್ಯಕ್ಕೋಸ್ಕರ ಆ ಕಾವ್ಯಗಳಲ್ಲಿ ಬರುವ ಕೆಲವು ರೂಪವಿಶೇಷಗಳನ್ನು ಕೊನೆಯಲ್ಲಿ ಅನುಬಂಧವಾಗಿ ಸೇರಿಸಿದಾರೆ.

ಮೈಸೂರು,
22—6—1927.

ವಿಷಯಸೂಚಿಕೆ.

4. ಕ್ರಿಯಾಪದ ಪ್ರಕರಣ—

5. ಕೃದಂತ ಪ್ರಕರಣ—

6. ತದ್ಧಿತಾಂತ ಪ್ರಕರಣ—

7. ಸಮಾಸ ಪ್ರಕರಣ—

ಶಬ್ದಾದರ್ಶ

೧. ಅಕ್ಷರ ಪ್ರಕರಣ.

1. ಭಾಷೆಯಲ್ಲಿರುವ ಪದಗಳೆಲ್ಲಾ ಅಕ್ಷರ*ಗಳಿಂದ ಕೂಡಿರುತ್ತವೆ. ಕನ್ನಡದಲ್ಲಿ ಅಕ್ಷರಗಳು ನಾಲ್ವತ್ತೆಂಟು. ಅವುಗಳಲ್ಲಿ ಸ್ವರವೆಂದೂ, ವ್ಯಂಜನವೆಂದೂ, ಎರಡು ವಿಧವು.

2. ಸ್ವರಗಳಲ್ಲಿ ಹ್ರಸ್ವವೆಂದೂ, ದೀರ್ಘವೆಂದೂ ಎರಡು ವಿಧ:–

ಹ್ರಸ್ವಗಳು—ಅ, ಇ, ಉ, ಎ, ಒ.
ದೀರ್ಘಗಳು—ಆ, ಈ, ಊ, ಏ, ಐ, ಓ, ಔ.

ಕನ್ನಡದಲ್ಲಿ ಅನೇಕ ಸಂಸ್ಕೃತ ಶಬ್ದಗಳು ಬೆರೆದಿರುತ್ತವೆ. ಅವುಗಳ ಮೂಲಕ ಕೆಲವು ಸಂಸ್ಕೃತಾಕ್ಷರಗಳು ಕನ್ನಡಕ್ಕೆ ಸೇರಿರುವುವು. ಹೀಗೆ " ಋ " ಎಂಬ ಒಂದು ಹ್ರಸ್ವಸ್ವರವು ಸೇರಿದೆ.

ಉದಾಹರಣೆ—ಋತು, ಋಣ, ಋಷಿ, ಅನೃತ, ಕೃಪೆ, ಮೃದು.

3. ವ್ಯಂಜನಗಳಲ್ಲಿ ವರ್ಗೀಯ ವ್ಯಂಜನಗಳೆಂದೂ, ಅವರ್ಗೀಯ ವ್ಯಂಜನಗಳೆಂದೂ, ಎರಡು ವಿಧ. ವರ್ಗೀಯ ವ್ಯಂಜನಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ, ಅನುನಾಸಿಕ, ಎಂದು ಮೂರು ಬಗೆ.

ವರ್ಗೀಯ–	ಅಲ್ಪ.	ಮಹಾ.	ಅಲ್ಪ.	ಮಹಾ.	ಅನುನಾ.
ಕವರ್ಗ	ಕ್	ಖ್	ಗ್	ಘ್	ಙ್
ಚವರ್ಗ	ಚ್	ಛ್	ಜ್	ಝ್	ಞ್
ಟವರ್ಗ	ಟ್	ಠ್	ಡ್	ಢ್	ಣ್
ತವರ್ಗ	ತ್	ಥ್	ದ್	ಧ್	ನ್
ಪವರ್ಗ	ಪ್	ಫ್	ಬ್	ಭ್	ಮ್

*ಅಕ್ಷರವನ್ನು ವರ್ಣವೆಂದೂ ಕರೆಯುವುದುಂಟು.

ಅವರ್ಗೀಯ—ಯ್, ರ್ ಲ್, ವ್, ಶ್, ಷ್, ಸ್, ಹ್, ಳ್, *
ಂ—ಅನುಸ್ವಾರ ಃ—ವಿಸರ್ಗ

ವ್ಯಂಜನಗಳಲ್ಲಿ ಮಹಾಪ್ರಾಣಗಳೂ, ಶ, ಷ, ಎಂಬ ಅಕ್ಷರಗಳೂ, ವಿಸರ್ಗವೂ, ಸಂಸ್ಕೃತ ಶಬ್ದಗಳ ಮೂಲಕ ಕನ್ನಡಕ್ಕೆ ಸೇರಿರುತ್ತವೆ. ಇವು ಕನ್ನಡದಲ್ಲಿ ಕೆಲವುಕಡೆ ಸಹಜವಾಗಿಯೂ ಇರುವುದುಂಟು.

ಉದಾ.

ಠಕ್ಕು, ಠಾಳಿ, ಅಂಥ, ಇಂಥ, ಎಂಥ, ಛಟ್ಟನೆ, ಭಗ್ಗನೆ, ಫಕ್ಕನೆ, ಧಗಧಗನೆ, ಅಷ್ಟು, ಇಷ್ಟು, ಎಷ್ಟು ಚಿಃ.

4. ಮೇಲೆ ಹೇಳಿದ ಅಕ್ಷರಗಳೆಲ್ಲಾ ಮಾತಾಡುವಾಗ ಕಿವಿಯಿಂದ ಕೇಳತಕ್ಕುವಾಗಿವೆ. ಅವುಗಳನ್ನು ಕಣ್ಣಿಗೆ ತೋರಿಸಿ ಓದುವಂತೆ ಮಾಡುವುದಕ್ಕಾಗಿ ಉಪಯೋಗಿಸುವ ಚಿಹ್ನೆಗಳಿಗೆ “ಲಿಪಿ” ಯೆಂದು ಹೆಸರು. ಈ ಚಿಹ್ನೆಗಳನ್ನು ಅಕ್ಷರವೆಂದೂ ಹೇಳುತ್ತಾರೆ.

ಕನ್ನಡದ ಲಿಪಿಯಲ್ಲಿ ಒಂದು ಅಕ್ಷರಕ್ಕೆ ಎರಡು ಚಿಹ್ನೆಗಳಿರುವುದುಂಟು. ಆ ಲಿಪಿಭೇದಗಳನ್ನೆಲ್ಲಾ ಒಟ್ಟು ಸೇರಿಸಿ ಅಕ್ಷರ ಸಂಖ್ಯೆಯನ್ನು ಮಾಡಬಾರದು.

ಲಿಪಿಭೇದಕ್ಕೆ ಉದಾಹರಣೆ—ಉರಿ, ಇರು, ಇಲ್ಲಿ ಉಕಾರ, ಇಕಾರಗಳಿಗೆ ಎರಡೆರಡು ಚಿಹ್ನೆಗಳಿದ್ದರೂ, ಅಕ್ಷರಗಳು ನಾಲ್ಕಲ್ಲ, ಎರಡೇ. ಹೀಗೆಯೇ ವ್ಯಂಜನಗಳಲ್ಲಿಯೂ ಉಂಟು.

ಉದಾ.

ಹಸ್ತ, ತನ್ನ, ನಮ್ಮ, ಅಯ್ಯ, ದರ್ಪ–ದರ್ಪ, ಧರ್ಮ–ಧರ್ಮ

---

* ವ್ಯಂಜನಗಳನ್ನು ಸುಲಭವಾಗಿ ಉಚ್ಚರಿಸುವುದಕ್ಕೆ ಅಕಾರವನ್ನು ಸೇರಿಸುತ್ತಾರೆ. ಉದಾ.—ಕ್—ಅ—ಕ. ಅಕ್ಷರಗಳನ್ನು ಹೇಳುವಾಗ “ಕಾರ” ಎಂಬ ಪ್ರತ್ಯಯವನ್ನು ಸೇರಿಸುತ್ತಾರೆ. ಉದಾ.—ಅಕಾರ, ಕಕಾರ.

೨. ಸಂಧಿ ಪ್ರಕರಣ.

5. ಅಕ್ಷರಗಳು ಒಂದಕ್ಕೊಂದು ಸೇರುವುದು ಸಂಧಿಯೆನಿಸುವುದು. ಸಂಧಿಯಲ್ಲಿ ಇದ್ದ ಅಕ್ಷರವು ಹೋಗುವುದಕ್ಕೆ ಲೋಪವೆಂದೂ, ಹೊಸ ಅಕ್ಷರವು ಬಂದು ಸೇರುವುದಕ್ಕೆ ಆಗಮವೆಂದೂ, ಒಂದು ಅಕ್ಷರಕ್ಕೆ ಪ್ರತಿಯಾಗಿ ಮತ್ತೊಂದು ಅಕ್ಷರವು ಬರುವುದಕ್ಕೆ ಆದೇಶವೆಂದೂ ಸಂಜ್ಞೆ.

ಉದಾ.

ಲೋಪಕ್ಕೆ—ಊರಿಂದ+ಊರಿಗೆ=ಊರಿಂದೂರಿಗೆ (ಅಕಾರಲೋಪ)
ಆಗಮಕ್ಕೆ—ಜಾತ್ರೆ+ಆಯಿತು=ಜಾತ್ರೆಯಾಯಿತು (ಯಕಾರಾಗಮ)
ಆದೇಶಕ್ಕೆ—ಮುಂಗಾರು. (ಇಲ್ಲಿ ಕಾರು ಎಂಬ ಪದದ ಕಕಾರಕ್ಕೆ ಗಕಾರಾದೇಶ)

6. ಲೋಪಸಂಧಿ.—ಸ್ವರದ ಮುಂದೆ ಸ್ವರವಿದ್ದರೆ ಸಾಮಾನ್ಯವಾಗಿ ಹಿಂದಿನ ಸ್ವರಕ್ಕೆ ಲೋಪ ಬರುವುದು.

ಉದಾ.

ನಮ್ಮ + ಅರಸನು=ನಮ್ಮರಸನು	ಊರು+ಅನ್ನು=ಊರನ್ನು
ಅಲ್ಲಿ+ಒಂದು=ಅಲ್ಲೊಂದು	ಬೇರೆ+ಒಬ್ಬನು=ಬೇರೊಬ್ಬನು

ಹೇಳಬೇಕಾದ ಅರ್ಥವು ತೋರದ ಪಕ್ಷದಲ್ಲಿ ಲೋಪವಿಲ್ಲ.

ಉದಾ.

ಮನೆ+ಇದೆ=ಮನಿದೆ
ಮಡು + ಇದು=ಮಡಿದು } ಎಂದು ಲೋಪಮಾಡಿದರೆ ಬೇಕಾದ ಅರ್ಥವು ತೋರುವುದಿಲ್ಲ.

7. ಆಗಮಸಂಧಿ.—

(1) ಅ, ಇ, ಈ, ಎ, ಏ, ಐ, ಎಂಬ ಅಕ್ಷರಗಳ ಮುಂದೆ ಸ್ವರವಿದ್ದರೆ ನಡುವೆ ಯಕಾರ ಬರುವುದು.

ಉದಾ.

ಕಾ + ಅದೆ=ಕಾಯದೆ	ಮನೆ+ಒಂದು=ಮನೆಯೊಂದು
ಹುಲಿ + ಇಂದ=ಹುಲಿಯಿಂದ	ಪೇ‍ೞ್+ಇಸು=ಪೇೞಿಯಿಸು
ಮಾ + ಅಲು=ಮಾಯಲು	ಕೈ + ಎತ್ತು=ಕೈಯೆತ್ತು

(2) ಉ, ಊ, ಋ, ಓ, ಔ, ಎಂಬ ಅಕ್ಷರಗಳ ಮುಂದೆ ಸ್ವರವಿದ್ದರೆ ನಡುವೆ ವಕಾರ ಬರುವುದು.

ಉದಾ.

ಮಡು+ಇದು=ಮಡುವಿದು	ಗೋ + ಇಗೆ=ಗೋವಿಗೆ
ಹೂ+ಇಂದ=ಹೂವಿಂದ	ನೌ+ಅನ್ನು=ನೌವನ್ನು
ಭ್ರಾತೃ+ಅನ್ನು=ಭ್ರಾತೃವನ್ನು	

ಓಕಾರದ ಮುಂದೆ ಸ್ವರವಿದ್ದರೆ ಕೆಲವು ಕಡೆ ಯಕಾರ ಬರುವುದುಂಟು.

ಉದಾ.

ನೋ+ಅಲು=ನೋಯಲು.

(3) ಆ ಈ, ಎಂಬ ಶಬ್ದಗಳ ಮುಂದೆ ಉ, ಊ, ಒ, ಓ, ಎಂಬ ಸ್ವರಗಳಿದ್ದರೆ ನಡುವೆ ವಕಾರ ಬರುವುದು. ಈ ಎಂಬ ಶಬ್ದದ ಮುಂದೆ ಯಕಾರವೂ ಬರುವುದುಂಟು.

ಉದಾ.

ಆ+ಉಡಿಗೆ=ಆವುಡಿಗೆ	ಈ+ಉಂಗುರ=ಈವುಂಗುರ, ಈಯುಂಗರ
ಆ+ಊರು=ಆವೂರು	ಈ+ಊಟ=ಈವೂಟ, ಈಯೂಟ
ಆ+ಒಲೆ=ಆವೊಲೆ	ಈ+ಒಂಟೆ=ಈವೊಂಟೆ, ಈಯೊಂಟೆ
ಆ+ ಓಲೆ=ಆವೋಲೆ	ಈ+ಓಲಗ=ಈವೋಲಗ, ಈಯೋಲಗ

8. ಆದೇಶಸಂಧಿ.–ಕನ್ನಡದಲ್ಲಿ ಆದೇಶಸಂಧಿಕಾರ್ಯವು ವಿಶೇಷವಾಗಿ ಸಮಾಸದಲ್ಲಿ ಕಾಣಬರುವುದು. ಅದನ್ನು ಸಮಾಸಪ್ರಕರಣದಲ್ಲಿ ತಿಳಿಯಬೇಕು. ಇಲ್ಲಿ ಉದಾಹರಣೆಯನ್ನು ಮಾತ್ರ ಕೊಟ್ಟಿದೆ.

ಉದಾ.

ಮಳೆಯು+ಕಾಲ=ಮಳೆಗಾಲ	ಅದು+ಋತು=ಆ ಋತು
ಬೆಟ್ಟದ+ತಾವರೆ=ಬೆಟ್ಟದಾವರೆ	ಅವನು+ಋಷಿ=ಆ ಋಷಿ
ಕಣ್ಣ+ಪನಿ=ಕಂಬನಿ	ಎಲ್ಲವು+ಋತುಗಳು=ಎಲ್ಲಾ ಋತುಗಳು

9. ಸಂಧಿಯಲ್ಲಿ ನಿತ್ಯವಿಕಲ್ಪಗಳು.—ಸಂಧಿಕಾರ್ಯವು ಪ್ರಕೃತಿಗೆ ಪ್ರತ್ಯಯವನ್ನು ಕೂಡಿಸುವುದರಲ್ಲಿ ನಿತ್ಯವಾಗಿಯೂ, ಒಂದು ಪದವನ್ನು ಮತ್ತೊಂದು ಪದದೊಡನೆ ಕೂಡಿಸುವುದರಲ್ಲಿ ವಿಕಲ್ಪವಾಗಿಯೂ ಬರುವುದು.

ಉದಾ.

ನಿತ್ಯಕ್ಕೆ— ಕನ್ನಡ+ಇಗ=ಕನ್ನಡಿಗ
ಹೊಳೆ+ಅಲ್ಲಿ=ಹೊಳೆಯಲ್ಲಿ
ಆಡು+ಉತ್ತ=ಆಡುತ್ತ
ದೊರೆ+ಅಂತೆ=ದೊರೆಯಂತೆ

ವಿಕಲ್ಪಕ್ಕೆ— ದೊರೆ ಎಲ್ಲಿ? ದೊರೆಯೆಲ್ಲಿ?
ಅಲ್ಲಿಂದ ಅವನು ತನ್ನ ಊರಿಗೆ ಬಂದನು;
ಅಲ್ಲಿಂದವನು ತನ್ನೂರಿಗೆ ಬಂದನು

10. ಪ್ರಕೃತಿಭಾವ.—ದೂರದಿಂದ ಕರೆಯುವಾಗ ಸಂಬೋಧನೆ, ಭಾವಸೂಚಕಾವ್ಯಗಳು, ಅನುಕರಣ ಶಬ್ದಗಳು, ಇವುಗಳ ಮುಂದೆ ಸ್ವರವಿದ್ದರೆ ಸಂಧಿಕಾರ್ಯವು ಬರುವುದಿಲ್ಲ. ಇದಕ್ಕೆ ಪ್ರಕೃತಿಭಾವವೆಂದು ಹೆಸರು.

ಉದಾ.

ಸಂಬೋಧನೆ— ಅಣ್ಣಾ, ಓಡಿಬಾ, ಅಕ್ಕಾ, ಇಲ್ಲಿ ಬಾ.

ಭಾವಸೂಚಕಾವ್ಯಕ್ಕೆ— ಎಲ, ಎಲಾ, ಇವನು ಯಾರು?
ಅಯ್ಯೋ, ಇದೇನು?
ಅವನೋ! ಇವನೋ!
ಓಹೋ! ಅವರಿಗೂ ಹೀಗಾಯಿತೆ?
ಇವನು ಹೋದನೋ ಆ ಕೆಲಸ ಆದ ಹಾಗೆ ಸರಿ!

ಅನುಕರಣಕ್ಕೆ— ಗುಡುಗುಡು ಎಂದು, ಗುಳುಗುಳು ಎಂದು.

11. ಸಂಸ್ಕೃತದಲ್ಲಿರತಕ್ಕ ಕೆಲವು ಸಂಧಿಗಳು ಕನ್ನಡದಲ್ಲಿ ವಿಶೇಷವಾಗಿ ಬಳಕೆಯಲ್ಲಿರುವುವು.

(1) ಸವರ್ಣಸ್ವರಗಳು* ಒಂದಕ್ಕೊಂದು ಸೇರಿದರೆ ಆ ಎರಡು ಸ್ವರಗಳಿಗೂ ಒಂದೇ ದೀರ್ಘಸ್ವರವು ಆದೇಶವಾಗಿ ಬರುವುದು.

ಉದಾ.

ದೈತ್ಯ+ಅರಿ=ದೈತ್ಯಾರಿ	ಕವಿ+ಇಂದ್ರ=ಕವೀಂದ್ರ
ಶರಣ+ಆಗತ=ಶರಣಾಗತ	ಗಿರಿ+ಈಶ=ಗಿರೀಶ
ವಿದ್ಯಾ+ಅಭ್ಯಾಸ=ವಿದ್ಯಾಭ್ಯಾಸ	ಮಹಿ+ಇಂದ್ರ=ಮಹೀಂದ್ರ
ಗಂಗಾ+ಆತ್ಮಜ=ಗಂಗಾತ್ಮಜ	ಗುರು+ಉಪದೇಶ=ಗುರೂಪದೇಶ
	ವಧೂ+ಉಪೇತ=ವಧೂಪೇತ

(2) ಅ, ಆ ಕಾರಗಳ ಮುಂದೆ ಇ, ಈ ಕಾರಗಳು ಇದ್ದರೆ ಏ ಕಾರವೂ, ಉ, ಊ ಕಾರಗಳಿದ್ದರೆ ಓ ಕಾರವೂ, ಋ ಕಾರವಿದ್ದರೆ ಅರ್ ಎಂಬುದೂ, ಏ, ಐ ಕಾರಗಳಿದ್ದರೆ ಐ ಕಾರವೂ, ಓ, ಔ ಕಾರಗಳಿದ್ದರೆ ಔ ಕಾರವೂ, ಆ ಎರಡು ಸ್ವರಗಳಿಗೂ ಆದೇಶವಾಗಿ ಬರುವುವು.

ಉದಾ.

ದೇವ+ಇಂದ್ರ=ದೇವೇಂದ್ರ	ವರ್ಷ+ಋತು=ವರ್ಷರ್ತು
ಪ್ರಾಣ+ಈಶ=ಪ್ರಾಣೇಶ	ಲೋಕ+ಏಕವೀರ=ಲೋಕೈಕವೀರ
ಧರಾ+ಇಂದ್ರ ಧರೇಂದ್ರ	ಮುಕ್ತಾ+ಏಕಾವಳಿ=ಮುಕ್ತೈಕಾವಳಿ
ಚಾಮುಂಡಾ+ಈಶ್ವರಿ=ಚಾಮುಂಡೇಶ್ವರಿ	ನಿತ್ಯ+ಐಶ್ವರ್ಯ=ನಿತ್ಯೈಶ್ವರ್ಯ
ಸೂರ್ಯ+ಉದಯ=ಸೂರ್ಯೋದಯ	ವಿದ್ಯಾ+ಐಶ್ವರ್ಯ=ವಿದ್ಯೈಶ್ವರ್ಯ
ಏಕ+ಊನ=ಏಕೋನ	ವನ+ಓಷಧಿ=ವನೌಷಧಿ
ಗಂಗಾ+ಉದಕ=ಗಂಗೋದಕ	ದೇವತಾ+ಓಘ=ದೇವತೌಘ
ಗಂಗಾ+ಊರ್ಮಿ=ಗಂಗೋರ್ಮಿ	ಘನ+ಔದಾರ್ಯ=ಘನೌದಾರ್ಯ
ದೇವ+ಋಷಿ=ದೇವರ್ಷಿ	ವಿದ್ಯಾ+ಔತ್ಕಣ್ಠ್ಯ=ವಿದ್ಯೌತ್ಕಣ್ಠ್ಯ

* ಸವರ್ಣ ಸ್ವರಗಳೆಂದರೆ ಸಮಾನ ಸ್ವರಗಳು. ಉದಾಹರಣೆ.— "ಅ" ಕಾರಕ್ಕೆ "ಅ" ಅಥವಾ "ಆ" ಇತ್ಯಾದಿ.

(3) ಇ, ಈ, ಉ, ಊ, ಋ ಕಾರಗಳ ಮುಂದೆ ಸವರ್ಣಗಳಲ್ಲದ ಸ್ವರಗಳಿದ್ದರೆ, ಇ ಈ ಕಾರಗಳಿಗೆ ಯ ಕಾರವೂ, ಉ ಊ ಕಾರಗಳಿಗೆ ವಕಾರವೂ ಋ ಕಾರಕ್ಕೆ ರ ವರ್ಣವೂ ಆದೇಶವಾಗಿ ಬರುವುವು.

ಉದಾ.

ಪ್ರತಿ + ಉತ್ತರ=ಪ್ರತ್ಯುತ್ತರ	ಗುರು+ಆಜ್ಞೆ=ಗುರ್ವಾಜ್ಞೆ
ಅಧಿ+ಆತ್ಮ=ಅಧ್ಯಾತ್ಮ	ಭ್ರಾತೃ+ಅಂಶ=ಭ್ರಾತ್ರಂಶ
ಮನು+ಅಂತರ=ಮನ್ವಂತರ	ಪಿತೃ+ಆರ್ಜಿತ=ಪಿತ್ರಾರ್ಜಿತ

(4) ಸಕಾರ ತವರ್ಗಗಳಿಗೆ ಶಕಾರ ಚವರ್ಗಗಳು ಸೇರಿದರೆ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ, ಷಕಾರ ಟವರ್ಗಗಳು ಸೇರಿದರೆ ಸಕಾರಕ್ಕೆ ಷಕಾರವೂ, ತವರ್ಗಕ್ಕೆ ಟವರ್ಗವೂ ಆದೇಶವಾಗಿ ಬರುವುವು.

ಉದಾ.

ಪಯಸ್+ಶಯನ=ಪಯಶ್ಶಯನ	ತಪಸ್+ಷಡ್ಭಾಗ=ತಪಷ್ಷಡ್ಭಾಗ
ಯಶಸ್+ಚಂದ್ರ=ಯಶಶ್ಚಂದ್ರ	ಅಯಸ್+ಟಂಕ+ಅಯಷ್ಟಂಕ
ಸತ್ + ಚಿತ್–ಸಚ್ಚಿತ್	ತತ್+ಟೀಕೆ=ತಟ್ಟೀಕೆ
ತತ್+ಜಲಧಿ=ತಜ್ಜಲಧಿ	ಲಸತ್+ಡಮರುಗ=ಲಸಡ್ಡಮರುಗ

(5) ಪದಾಂತವಾದ ವರ್ಗಪ್ರಥಮವರ್ಣಗಳಿಗೆ ಯಾವ ವರ್ಣ ಪರವಾದರೂ ಆಯಾವರ್ಗದ ತೃತೀಯ ವರ್ಣಗಳು ಪ್ರಾಯಶಃ ಆದೇಶವಾಗಿ ಬರುವುವು.

ಉದಾ.

ವಾಕ್+ಈಶ=ವಾಗೀಶ	ಚಿತ್+ಆನಂದ=ಚಿದಾನಂದ
ವಾಕ್+ದೇವಿ=ವಾಗ್ದೇವಿ	ಸತ್+ವಂಶ=ಸದ್ವಂಶ
ಷಟ್+ಆನನ=ಷಡಾನನ	ಸುಪ್+ಅಂತ=ಸುಬಂತ
ವಿರಾಟ್+ರೂಪ=ವಿರಾಡ್ರೂಪ	ಅಪ್+ಜಾತ=ಅಬ್ಜಾತ

(6) ಪದಾಂತವಾದ ವ್ಯಂಜನದ ಮುಂದೆ ಅನುನಾಸಿಕ ವರ್ಣ ವಿದ್ದರೆ ಆಯಾ ವರ್ಗದ ಅನುನಾಸಿಕವು ಆದೇಶವಾಗಿ ಬರುವುದು.

ಉದಾ.

ವಾಕ್+ಮಯ=ವಾಙ್ಮಯ
ಷಟ್+ಮುಖ=ಷಣ್ಮುಖ
ಭಗವತ್+ನಾಮ=ಭಗವನ್ನಾಮ

2. ನಾಮಪದ ಪ್ರಕರಣ.

12. ನಾಮಪದಗಳು ವಸ್ತುವಾಚಕ, ಭಾವನಾಮ, ಗುಣವಾಚಕ, ಸಂಖ್ಯಾವಾಚಕ, ಸರ್ವನಾಮ ಎಂದು ಐದು ವಿಧ. ವಸ್ತುವಾಚಕದಲ್ಲಿ ವಸ್ತುವಿನ ರೂಢವಾದ ಹೆಸರನ್ನು ತಿಳಿಸುವುದಕ್ಕೆ ರೂಢನಾಮವೆಂದೂ, ಅರ್ಥಕ್ಕೆ ಅನುಸಾರವಾದ ಹೆಸರನ್ನು ತಿಳಿಸುವುದಕ್ಕೆ ಅನ್ವರ್ಥನಾಮವೆಂದೂ, ಅವರವರ ಇಷ್ಟಾನುಸಾರವಾಗಿ ಇಟ್ಟುಕೊಂಡಿರುವ ಹೆಸರನ್ನು ತಿಳಿಸುವುದಕ್ಕೆ ಅಂಕಿತನಾಮವೆಂದೂ ಸಂಜ್ಞೆ.

ಉದಾ.

ವಸ್ತುವಾಚಕಕ್ಕೆ—

ರೂಢನಾಮಕ್ಕೆ—ಅರಸ, ನೆಲ, ಮನುಷ್ಯ, ಧನ.

ಅನ್ವರ್ಥನಾಮಕ್ಕೆ—ಕುಂಟ, ಕುರುಡ, ಕಿವುಡ, ಹೆಳವ.

ಅಂಕಿತನಾಮಕ್ಕೆ—ಮೈಸೂರು, ವಿಂಧ್ಯ, ರಾಮ, ವೆಂಕಟ.

ಭಾವನಾಮಕ್ಕೆ—ತಪ್ಪು, ಕಪ್ಪು, ಆಟ, ನೋಟ.

ಗುಣವಾಚಕಕ್ಕೆ—ಕಿರಿದು, ಹಿರಿದು, ಹೊಸದು, ಹಳದು, ಕರಿದು, ಬಿಳಿದು, ಚಿಕ್ಕದು, ದೊಡ್ಡದು, ಹಲವು, ಕೆಲವು, ಎಲ್ಲ, ಅಷ್ಟು, ಇಷ್ಟು, ಎಷ್ಟು, ಅಂಥದು, ಇಂಥದು, ಎಂಥದು.

ಸಂಖ್ಯಾವಾಚಕಕ್ಕೆ—ಒಂದು, ಎರಡು, ಹತ್ತು, ನೂರು.

ಸರ್ವನಾಮಕ್ಕೆ—ಅದು, ಇದು, ಯಾವುದು, ತಾನು, ನೀನು, ನಾನು.

ಮುಂದಿನ ಪ್ರಕರಣಗಳಲ್ಲಿ ಹೇಳುವ ಕೃದಂತ, ತದ್ಧಿತಾಂತ, ಸಮಾಸ ಶಬ್ದಗಳ ನಾಮಪದವಾದುವುಗಳೆಲ್ಲಾ ಮೇಲಿನ ಐದು ಪಂಗಡಗಳಲ್ಲಿಯೇ ಸೇರುತ್ತವೆ.

ಉದಾ.

ಕೃದಂತಕ್ಕೆ—ಓದುವ, ಆಡಿದ, ಬಂದ.

ತದ್ಧಿತಾಂತಕ್ಕೆ—ಕುಂಬಾರ, ಅರಸಿತಿ, ಬುದ್ಧಿವಂತ, ಹೂವಾಡಿಗ.

ಸಮಾಸಕ್ಕೆ—ಮಳೆಗಾಲ, ಕಾಡುಕುರುಬ, ಎಳೆಯಗಿಡ, ಹಣೆಗಣ್ಣು, ಹಣ್ಣುಕಾಯಿ, ಅಂಗಾಲು, ಒಂಬತ್ತು.

13. ನಾಮಪದದ ಮೂಲಭಾಗಕ್ಕೆ ಪ್ರಾತಿಪದಿಕ ಅಥವಾ ಪ್ರಕೃತಿಯೆಂದೂ, ಅದಕ್ಕೆ ಸೇರುವ ಪ್ರತ್ಯಯಗಳಿಗೆ ವಿಭಕ್ತಿಗಳೆಂದೂ, ಪ್ರಾತಿಪದಿಕವೂ, ವಿಭಕ್ತಿಪ್ರತ್ಯಯವೂ ಕೂಡಿದ ರೂಪಕ್ಕೆ ನಾಮಪದವೆಂದೂ ಸಂಜ್ಞೆ.

ಉದಾ.

	ಪ್ರಾತಿಪದಿಕ	ವಿಭಕ್ತಿ	ಪದ
ವಸ್ತುವಾಚಕ	ನೆಲ	ಅನ್ನು	ನೆಲವನ್ನು
ಭಾವನಾಮ	ಆಟ	ಅನ್ನು	ಆಟವನ್ನು
ಗುಣವಾಚಕ	ಹಿರಿದು	ಇಂದ	ಹಿರಿದರಿಂದ
ಸಂಖ್ಯಾವಾಚಕ	ಒಂದು	ಇಂದ	ಒಂದರಿಂದ
ಸರ್ವನಾಮ	ಅದು	ಅ	ಅದರ
ಕೃದಂತ	ಓದುವ	ಅ	ಓದುವವನ
ತದ್ಧಿತಾಂತ	ಕುಂಬಾರ	ಅಲ್ಲಿ	ಕುಂಬಾರನಲ್ಲಿ
ಸಮಾಸ	ಮಳೆಗಾಲ	ಅಲ್ಲಿ	ಮಳೆಗಾಲದಲ್ಲಿ

14. ಲಿಂಗ.—ಕನ್ನಡದಲ್ಲಿ ಸಾಮಾನ್ಯವಾಗಿ ಪುರುಷವಾಚಕವಾದ ಶಬ್ದವು ಪುಲ್ಲಿಂಗವಾಗಿಯೂ, ಸ್ತ್ರೀವಾಚಕವಾದ ಶಬ್ದವು ಸ್ತ್ರೀಲಿಂಗವಾಗಿಯೂ, ಉಳಿದ ಶಬ್ದಗಳು ನಪುಂಸಕಲಿಂಗಗಳಾಗಿಯೂ ಇರುವುವು.

ಉದಾ.

ಪುಲ್ಲಿಂಗಕ್ಕೆ—ಅರಸ, ತಂದೆ, ಶಿವ, ವಿಷ್ಣು.
ಸ್ತ್ರೀಲಿಂಗಕ್ಕೆ—ಅಕ್ಕ, ತಾಯಿ, ಪಾರ್ವತಿ, ಲಕ್ಷ್ಮಿ.
ನಪುಂಸಕಲಿಂಗಕ್ಕೆ—ನೆಲ, ಹೊಲ, ಹಸುಳೆ, ದಂಡು, ಪರ್ವತ, ನದಿ.

ಕೆಲವು ಶಬ್ದಗಳನ್ನು ಎರಡು ಮೂರು ಲಿಂಗಗಳಲ್ಲಿ ಪ್ರಯೋಗಿಸುವುದುಂಟು.

ಉದಾ.

ಪುಲ್ಲಿಂಗ—ಸೂರ್ಯನು ಹುಟ್ಟಿದನು ; ಅಂಗಾರಕನು ಮೂರನೆಯ ಕಡೆ ಇರುತ್ತಾನೆ.
ನಪುಂಸಕಲಿಂಗ—ಸೂರ್ಯ ಹುಟ್ಟಿತು; ಅಂಗಾರಕ ಹೊಳೆಯುತ್ತಿದೆ. ಹೀಗೆಯೇ ಬುಧ, ಮೊದಲಾದ ಗ್ರಹಗಳ ಹೆಸರುಗಳು.

ಸ್ತ್ರೀಲಿಂಗ—ದೇವತೆ ವರವನ್ನು ಕೊಟ್ಟಳು ; ಹುಡುಗಿ ಓದುತ್ತಾಳೆ.
ನಪುಂಸಕಲಿಂಗ—ಇದು ಗ್ರಾಮದೇವತೆ ; ಈ ಹುಡುಗಿ ಚಿಕ್ಕದು.

ಹೀಗೆಯೇ ತೊತ್ತು ಎಂಬ ಶಬ್ದವು.

ಪುಲ್ಲಿಂಗ—ಆಳು ಬಂದನು ; ನೀನು ತಂದೆ.
ಸ್ತ್ರೀಲಿಂಗ—ಆಳು ಬಂದಳು ; ನೀನು ತಾಯಿ
ನಪುಂಸಕಲಿಂಗ—ಆಳು ಬಂದಿತು ; ನೀನು ಮಗು

ಹೀಗೆಯೇ ಸರ್ವನಾಮ, ಗುಣವಾಚಕ, ಕಾರಕ, ಕೃದನ್ತ, ಮೊದಲಾದ ವಿಶೇಷಣ ಶಬ್ದಗಳು ಮೂರು ಲಿಂಗಗಳಲ್ಲಿಯೂ ಪ್ರಯೋಗಿಸಲ್ಪಡುವುವು.

15. ವಚನ.—ಒಂದು ವಸ್ತುವನ್ನು ಹೇಳುವ ಶಬ್ದಕ್ಕೆ ಏಕವಚನವೆಂದೂ, ಒಂದಕ್ಕಿಂತ ಹೆಚ್ಚಾದ ವಸ್ತುಗಳನ್ನು ಹೇಳುವ ಶಬ್ದಕ್ಕೆ ಬಹುವಚನವೆಂದೂ ಸಂಜ್ಞೆ.

(1) ಸ್ತ್ರೀಪುರುಷವಾಚಕಗಳಾದ ಪ್ರಾತಿಪದಿಕಗಳಿಗೆ ಬಹುವಚನದಲ್ಲಿ "ಅರು" ಎಂಬ ಪ್ರತ್ಯಯವು ಬರುವುದು.

ಉದಾ.

ಅತ್ತೆಯರು, ಸೊಸೆಯರು, ಸ್ತ್ರೀಯರು, ಪುರುಷರು, ಮುದುಕರು, ಹುಡುಗರು.

(2) ಅಕಾರಾಂತಗಳಾದ ಬಂಧುವಾಚಕಗಳಿಗೆ ಬಹುವಚನದಲ್ಲಿ "ಅಂದಿರು"ಎಂಬ ಪ್ರತ್ಯಯವು ಬರುವುದು.

ಉದಾ.

ಅಣ್ಣಂದಿರು, ಮಾವಂದಿರು, ಅಕ್ಕಂದಿರು, ತಮ್ಮಂದಿರು,

(3) ಗುಣವಾಚಕಗಳಿಗೆ ಪುಲ್ಲಿಂಗೈಕವಚನದಲ್ಲಿ "ಅವನು," ಸ್ತ್ರೀಲಿಂಗೈಕವಚನದಲ್ಲಿ "ಅವಳು," ಪುಂ ಸ್ತ್ರೀ, ಬಹುವಚನದಲ್ಲಿ "ಅವರು," ನಪುಂಸಕಲಿಂಗೈಕವಚನದಲ್ಲಿ "ಅದು," ಬಹುವಚನದಲ್ಲಿ "ಅವು," ಎಂಬ ಪ್ರತ್ಯಯಗಳು ಬರುವುವು. ಆಗ ಕೊನೆಯ ಉಕಾರಕ್ಕೆ ಲೋಪ ಬರುವುದು.

ಉದಾ.

ಪುಲ್ಲಿಂಗೈಕವಚನ	—ಕಿರಿಯವನು	ಹಿರಿಯವನು	ಅಂಥವನು
ಸ್ತ್ರೀ ,,	—ಕಿರಿಯವಳು	ಹಿರಿಯವಳು	ಅಂಥವಳು
ಪುಂಸ್ತ್ರೀ. ಬಹು	—ಕಿರಿಯವರು	ಹಿರಿಯವರು	ಅಂಥವರು
ನ. ಏ.	—ಕಿರಿಯದು	ಹಿರಿಯದು	ಅಂಥದು
ನ. ಬ.	—ಕಿರಿಯವು	ಹಿರಿಯವು	ಅಂಥವು

" ಎಳದು, ಹಳದು " ಎಂಬ ಗುಣವಾಚಕಗಳಿಗೆ ಈ ಪ್ರತ್ಯಯಗಳು ಸೇರುವಾಗ ಳಕಾರದ ಮೇಲಿನ ಅಕಾರಕ್ಕೆ ಎಕಾರಾದೇಶವು ಬರುವುದು. ಮತ್ತು ಹೊಸದು, ಹಳದು, ಎಂಬ ಶಬ್ದಗಳ ದುಕಾರಕ್ಕೆ ಪುಂಸ್ತ್ರೀಲಿಂಗಗಳಲ್ಲಿ ಬಕಾರಾದೇಶವೂ ಬರುವುದು.

ಉದಾ.

ಎಕಾರಾದೇಶಕ್ಕೆ—ಹಳೆಯದು, ಹಳೆಯವು, ಎಳೆಯವನು, ಎಳೆಯವಳು, ಎಳೆಯವರು, ಎಳೆಯದು, ಎಳೆಯವು.

ಬಕಾರಾದೇಶಕ್ಕೆ—ಹೊಸಬನು, ಹಳಬನು, ಹೊಸಬಳು, ಹೊಸಬರು, ಹಳಬರು.

(4) ಪ್ರಾತಿಪದಿಕಗಳಿಗೆ ಸಾಮಾನ್ಯವಾಗಿ ನಪುಂಸಕಲಿಂಗ ಬಹುವಚನದಲ್ಲಿ " ಗಳು " ಎಂಬ ಪ್ರತ್ಯಯ ಬರುವುದು.

ಉದಾ.

ಮರಗಳು, ಹಳ್ಳಿಗಳು, ನದಿಗಳು, ಊರುಗಳು, ಮನೆಗಳು.

(5) " ಗಳು " ಎಂಬ ಪ್ರತ್ಯಯವು ಪುಂಸ್ತ್ರೀಲಿಂಗ ಬಹುವಚನದಲ್ಲಿಯೂ, " ಅರು " ಮೊದಲಾದ ಬಹುವಚನ ಪ್ರತ್ಯಯಗಳ ಮೇಲೂ ಬರುವುದುಂಟು.

ಉದಾ.

ದೊರೆಗಳು, ತಂದೆಗಳು, ಹೆಣ್ಣುಗಳು, ಗುರುಗಳು, ಸ್ತ್ರೀಯರುಗಳು, ದೊಡ್ಡವರುಗಳು, ಅಣ್ಣಂದಿರುಗಳು, ಚಿಕ್ಕವುಗಳು, ಇಂಥವುಗಳು, ಸ್ತ್ರೀಯರುಗಳು, ನಾವುಗಳು.

(6) ಮಗನು, ಮಗಳು, ಮಗು, ಎಂಬ ಮೂರು ಲಿಂಗಗಳಿಗೂ ಬಹುವಚನದಲ್ಲಿ ಮಕ್ಕಳು ಎಂಬ ಒಂದೇ ರೂಪವಿರುವುದು.

(7) ಕೆಲವು ಗುಣವಾಚಕ, ಸಂಖ್ಯಾವಾಚಕ ಮತ್ತು ಸರ್ವನಾಮಗಳ ಏಕವಚನ ಬಹುವಚನಗಳಲ್ಲಿ ನಿಷ್ಪನ್ನರೂಪಗಳು ಯಾವುವೆಂದರೆ:—

ಗುಣವಾಚಕಕ್ಕೆ—

ನಪುಂ. ಬಹು		ಪುಂಸ್ತ್ರೀ. ಬಹು
ಹಲವು	..	ಹಲವರು
ಕೆಲವು	..	ಕೆಲವರು
ಎಲ್ಲವು	..	ಎಲ್ಲವರು
ಅಷ್ಟು	..	ಅಷ್ಟರು

ಸಂಖ್ಯಾವಾಚಕಕ್ಕೆ..

	ನಪುಂ.	ಪು.	ಸ್ತ್ರೀ.
ಏಕ.	ಒಂದು	ಒಬ್ಬನು	ಒಬ್ಬಳು
ಬಹು.	ಎರಡು	ಇಬ್ಬರು	
	ಮೂರು	ಮೂವರು*	
	ನಾಲ್ಕು	ನಾಲ್ವರು	
	ಐದು	ಐವರು	

ಗೌರವಾರ್ಥದಲ್ಲಿ ಒಂದು ಎಂಬ ಶಬ್ದಕ್ಕೆ ಪುಂಸ್ತ್ರೀಲಿಂಗಗಳಲ್ಲಿ 'ಒಬ್ಬರು' ಎಂಬ ಬಹುವಚನವುಂಟು.

ಉದಾ.

ಗೌರವಕ್ಕೆ—ನೀವು ಒಬ್ಬರು,

ಕೆಲವರು ಎಂಬರ್ಥಕ್ಕೆ.—ಒಬ್ಬರು ಹಾಗೆ, ಒಬ್ಬರು ಹೀಗೆ.

ಪುಲ್ಲಿಂಗ		ಸ್ತ್ರೀಲಿಂಗ		ನಪುಂಸಕಲಿಂಗ	
ಏಕ	ಬಹು	ಏಕ	ಬಹು	ಏಕ	ಬಹು
ಅವನು	ಅವರು	ಅವಳು	ಅವರು	ಅದು	ಅವು
ಇವನು	ಇವರು	ಇವಳು	ಇವರು	ಇದು	ಇವು
ಯಾವನು	ಯಾರು	ಯಾವಳು	ಯಾರು	ಯಾವುದು	ಯಾವುವು
ತಾನು	ತಾವು	ತಾನು	ತಾವು	ತಾನು	ತಾವು

ಏಕ	ಬಹು	ಏಕ	ಬಹು
ನೀನು	ನೀವು.	ನಾನು,	ನಾವು.

* ಮೂವರು ನಾಲ್ವರು, ಮುಂತಾದ ರೂಪಗಳಿಗೆ ಪ್ರತಿಯಾಗಿ ಮೂರು ಮಂದಿ ನಾಲ್ಕು ಮಂದಿ, ನಾಲ್ಕುಜನ ಎಂಬ ಪ್ರಯೋಗವು ಹೊಸಗನ್ನಡದಲ್ಲಿ ಹೆಚ್ಚಾಗಿದೆ.

16. ವಿಭಕ್ತಿ.—ಎಲ್ಲಾ ಪ್ರಾತಿಪದಿಕಗಳ ಮೇಲೂ ಎಂಟು ವಿಧವಾದ ಪ್ರತ್ಯಯಗಳು ಸೇರುವುವು; ಇವಕ್ಕೆ ವಿಭಕ್ತಿಗಳೆಂದು ಸಂಜ್ಞೆ.

ಉದಾ.

ವಿಭಕ್ತಿ	ಪ್ರತ್ಯಯ	ಏಕ	ಬಹು
ಪ್ರಥಮಾ	ಉ	ಅರಸನು	ಅರಸರು
ದ್ವಿತೀಯಾ	ಅನ್ನು	ಅರಸನನ್ನು	ಅರಸರನ್ನು
ತೃತೀಯಾ	ಇಂದ	ಅರಸನಿಂದ	ಅರಸರಿಂದ
ಚತುರ್ಥೀ	ಇಗೆ	ಅರಸನಿಗೆ	ಅರಸರಿಗೆ
ಪಂಚಮೀ	ದೆಸೆಯಿಂದ	ಅರಸನ ದೆಸೆಯಿಂದ	ಅರಸರ ದೆಸೆಯಿಂದ
ಷಷ್ಠೀ	ಅ	ಅರಸನ	ಅರಸರ
ಸಪ್ತಮೀ	ಅಲ್ಲಿ	ಅರಸನಲ್ಲಿ	ಅರಸರಲ್ಲಿ
ಸಂಬೋಧನ	ಏ	ಅರಸನೇ	ಅರಸರೇ

17. ವಿಭಕ್ತಿಗಳು ಸೇರುವಾಗ ಆಗುವ ಸಂಧಿಕಾರ್ಯಗಳು—

(1) ಅಕಾರಾಂತ ಪುಂಸ್ತ್ರೀಲಿಂಗ ಪ್ರಕೃತಿಗಳಿಗೆ ಏಕವಚನದಲ್ಲಿ ಎಲ್ಲಾ ವಿಭಕ್ತಿ ಪ್ರತ್ಯಯಗಳು ಸೇರುವಾಗಲೂ ನಡುವೆ ನಕಾರಾಗಮವು ಬರುವುದು.

ಅಕಾರಾಂತ ಪುಲ್ಲಿಂಗಕ್ಕೆ—ಅಣ್ಣನು, ಅಣ್ಣನೇ, ಅಣ್ಣನನ್ನು, ಅಣ್ಣನಿಂದ, ಅಣ್ಣನಿಗೆ, ಅಣ್ಣನ ದೆಸೆಯಿಂದ, ಅಣ್ಣನ, ಅಣ್ಣನಲ್ಲಿ.

ಅಕಾರಾಂತ ಸ್ತ್ರೀಲಿಂಗಕ್ಕೆ—ಅಕ್ಕನು, ಅಕ್ಕನೇ, ಅಕ್ಕನನ್ನು, ಅಕ್ಕನಿಂದ, ಅಕ್ಕನಿಗೆ, ಅಕ್ಕನದೆಸೆಯಿಂದ, ಅಕ್ಕನ, ಅಕ್ಕನಲ್ಲಿ.

(2) ಅಕಾರಾಂತ ನಪುಂಸಕಲಿಂಗ ಪ್ರಕೃತಿಗಳಿಗೆ ಏಕವಚನದಲ್ಲಿ ಪ್ರಥಮಾ, ಸಂಬೋಧನ, ದ್ವಿತೀಯಾ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ವಕಾರಾಗಮ ಬರುವುದು.

ಉದಾ.

ಮರವು, ಮರವೇ, ಮರವನ್ನು.

ಆಟವು, ಆಟವೇ, ಆಟವನ್ನು.

ಆದರೆ ಪ್ರಾಣಿವಾಚಕಗಳಾದ ಕೆಲವು ಅಕಾರಾಂತ ನಪುಂಸಕಲಿಂಗ ಗಳಿಗೆ ನಕಾರಾಗಮವೇ ಬರುವುದು.

ಉದಾ.

ಕೋಣನ, ಬಸವನಿಂದ, ಕೋಡಗನಿಗೆ, ಗರುಡನ, ವರಾಹನಲ್ಲಿ.

ತೃತೀಯಾ, ಪಂಚಮಿ, ಷಷ್ಠೀ, ಸಪ್ತಮೀ ವಿಭಕ್ತಿ ಪ್ರತ್ಯಯಗಳು ಸೇರುವಾಗ ನಡುವೆ ದಕಾರಾಗಮ ಬರುವುದು.

ಉದಾ.

ಮರದಿಂದ, ಮರದದೆಸೆಯಿಂದ, ಮರದ, ಮರದಲ್ಲಿ.

ಆಟದಿಂದ, ಆಟದದೆಸೆಯಿಂದ, ಆಟದ, ಆಟದಲ್ಲಿ.

ಚತುರ್ಥೀ ವಿಭಕ್ತಿಯ " ಇಗೆ " ಪ್ರತ್ಯಯಕ್ಕೆ ಪ್ರತಿಯಾಗಿ " ಕ್ಕೆ " ಪ್ರತ್ಯಯವು ಆದೇಶವಾಗಿ ಬರುವುದು.

ಉದಾ.

ಮರಕ್ಕೆ, ಆಟಕ್ಕೆ.

(3) ಇಕಾರ, ಎಕಾರ ಐಕಾರಗಳು ಕೊನೆಯಲ್ಲಿರುವ ಪ್ರಕೃತಿ ಗಳಿಗೆ ಚತುರ್ಥ್ಯೇಕವಚನದಲ್ಲಿ " ಇಗೆ " ಪ್ರತ್ಯಯಕ್ಕೆ ಪ್ರತಿಯಾಗಿ " ಗೆ " ಪ್ರತ್ಯಯವು ಆದೇಶವಾಗಿ ಬರುವುದು.

ಉದಾ.

ಹರಿಗೆ, ಲಕ್ಷ್ಮಿಗೆ, ವಿಧಿಗೆ ; ದೊರೆಗೆ, ಅತ್ತೆಗೆ, ಮನೆಗೆ ; ಕೈಗೆ, ವೈಗೆ.

(4) ಎಲ್ಲಾ ಉಕಾರಾಂತ ಪ್ರಕೃತಿಗಳಿಗೂ ಏಕವಚನದಲ್ಲಿ ತೃತೀಯಾ, ಪಂಚಮಿ, ಷಷ್ಠೀ, ಸಪ್ತಮೀ ವಿಭಕ್ತಿಪ್ರತ್ಯಯಗಳು ಸೇರು ವಾಗ ನಡುವೆ " ಇನ್ " ಎಂಬ ಆಗಮವು ವಿಕಲ್ಪವಾಗಿ ಬರುವುದು.

ಉದಾ.

ಊರಿಂದ, ಊರಿನಿಂದ ; ಊರದೆಸೆಯಿಂದ, ಊರಿನದೆಸೆಯಿಂದ ; ಊರ, ಊರಿನ ; ಊರಲ್ಲಿ ; ಊರಿನಲ್ಲಿ.

ಹೀಗೆಯೇ, ಗುರುವಿಂದ, ಗುರುವಿನಿಂದ ; ಗುರುವ, ಗುರುವಿನ ; ಹೆಣ್ಣ, ಹೆಣ್ಣಿನ ; ಹೆಣ್ಣಲ್ಲಿ, ಹೆಣ್ಣಿನಲ್ಲಿ.

(5) ಉಕಾರಾಂತಗಳಾದ ಗುಣವಾಚಕ, ಸಂಖ್ಯಾವಾಚಕ, ಸರ್ವನಾಮ, ಉದು ಪ್ರತ್ಯಯಾಂತವಾದ ಕೃದಂತ, ಈ ಪ್ರಕೃತಿಗಳಿಗೆ ನಪುಂಸಕೈಕವಚನದಲ್ಲಿ "ಅರ್" ಎಂಬ ಆಗಮವು ಬರುವುದು.

ಉದಾ.

ಗುಣವಾಚಕಕ್ಕೆ—ಕಿರಿದರಿಂದ, ಕಿರಿದರದೆಸೆಯಿಂದ, ಕಿರಿದರ, ಕಿರಿದರಲ್ಲಿ.
ಸಂಖ್ಯಾವಾಚಕಕ್ಕೆ—ಒಂದರಿಂದ, ಒಂದರದೆಸೆಯಿಂದ, ಒಂದರ, ಒಂದರಲ್ಲಿ.
ಸರ್ವನಾಮಕ್ಕೆ—ಅದರಿಂದ, ಅದರದೆಸೆಯಿಂದ, ಅದರ, ಅದರಲ್ಲಿ.
ಕೃದಂತಕ್ಕೆ—ಕೊಡುವುದರಿಂದ, ಕೊಡುವುದರದೆಸೆಯಿಂದ, ಕೊಡುವುದರ, ಕೊಡುವುದರಲ್ಲಿ.

ಬಹುವಚನದಲ್ಲಿ ಸಂಖ್ಯಾವಾಚಕ ಮತ್ತು ಪರಿಮಾಣವನ್ನು ತಿಳಿಸುವ ಗುಣವಾಚಕಗಳಿಗೆ ಮಾತ್ರ "ಅರ್" ಆಗಮವು ಬರುವುದು.

ಉದಾ.

ಸಂಖ್ಯಾವಾಚಕಕ್ಕೆ—ಎರಡರ, ಹತ್ತರಲ್ಲಿ, ನೂರರಿಂದ.
ಪರಿಮಾಣವಾಚಕಕ್ಕೆ—ಅಷ್ಟರಿಂದ, ಎಷ್ಟರಲ್ಲಿ, ಎಷ್ಟರ.

ಮಿಕ್ಕ ಗುಣವಾಚಕ, ಸರ್ವನಾಮಗಳಿಗೆ ಬರುವುದಿಲ್ಲ.

ಉದಾ.

ಕಿರಿಯವುಗಳಿಂದ, ಅವುಗಳದೆಸೆಯಿಂದ, ಅಂಥವುಗಳಲ್ಲಿ.

(6) ಮೇಲೆ ಹೇಳಿದ ಗುಣವಾಚಕ ಮೊದಲಾದುವುಗಳಿಗೆಲ್ಲಾ ನಪುಂಸಕಲಿಂಗದಲ್ಲಿ ಚತುರ್ಥೀ ವಿಭಕ್ತಿಯ "ಇಗೆ" ಪ್ರತ್ಯಯಕ್ಕೆ ಪ್ರತಿಯಾಗಿ "ಅಕ್ಕೆ" ಪ್ರತ್ಯಯವು ಆದೇಶವಾಗಿ ಬರುವುದು. ಬಹುವಚನದಲ್ಲಿ ಗಳಾಗಮವು ಬಂದಾಗ ಇದು ಬರುವುದಿಲ್ಲ.

ಉದಾ.

ಗುಣವಾಚಕಕ್ಕೆ—ಕಿರಿದಕ್ಕೆ, ಕಿರಿಯವಕ್ಕೆ ; ಕಿರಿಯವುಗಳಿಗೆ.
ಸಂಖ್ಯಾವಾಚಕಕ್ಕೆ—ಒಂದಕ್ಕೆ, ಎರಡಕ್ಕೆ, ಅಷ್ಟಕ್ಕೆ, ಕೆಲವಕ್ಕೆ.
ಸರ್ವನಾಮಕ್ಕೆ—ಅದಕ್ಕೆ, ಅವಕ್ಕೆ ; ಅವುಗಳಿಗೆ.
ಕೃದಂತಕ್ಕೆ—ಕೊಡುವುದಕ್ಕೆ ; ಕೊಡುವುವುಗಳಿಗೆ.

(7) ಪಂಚಮೀ ವಿಭಕ್ತಿಪ್ರತ್ಯಯವು ಎಲ್ಲಾ ಶಬ್ದಗಳ ಮೇಲೆ ಸೇರುವಾಗಲೂ ಅಕಾರಪೂರ್ವಕವಾಗಿಯೇ ಸೇರುವುದು.

ಉದಾ.

ಮರ+ದ್+ಅ+ದೆಸೆಯಿಂದ=ಮರದದೆಸೆಯಿಂದ
ಊರು+ಇನ್+ಅ+ದೆಸೆಯಿಂದ=ಊರಿನದೆಸೆಯಿಂದ
ಮನೆ+ಅ+ದೆಸೆಯಿಂದ=ಮನೆಯದೆಸೆಯಿಂದ
ಮನೆಗಳ+ಅ+ದೆಸೆಯಿಂದ=ಮನೆಗಳದೆಸೆಯಿಂದ
ತಾಯಿಯರು+ಅ+ದೆಸೆಯಿಂದ=ತಾಯಿಯರದೆಸೆಯಿಂದ.

(8) ದಿಗ್ವಾಚಕಗಳಾದ ಮೇಲು, ಕೆಳಗು ಮುಂತಾದ ಶಬ್ದಗಳಿಗೆ ಸೇರುವ ಸಪ್ತಮೀ ವಿಭಕ್ತಿ ಪ್ರತ್ಯಯಕ್ಕೆ ಎಕಾರಾದೇಶ ಬರುವುದು.

ಉದಾ.

ಮೇಲೆ, ಕೆಳಗೆ, ಒಳಗೆ, ಹೊರಗೆ, ಹಿಂದೆ, ಮುಂದೆ.

ಇವುಗಳ ಚತುರ್ಥೀವಿಭಕ್ತಿಯಲ್ಲಿ "ಇಗೆ" ಪ್ರತ್ಯಯಕ್ಕೆ "ಅಕ್ಕೆ" ಎಂಬಾದೇಶ ಬರುವುದು ; ಮತ್ತು ಕೊನೆಯ ಗುಕಾರಕ್ಕೆ ಲೋಪ ಬರುವುದು.

ಉದಾ.

ಮೇಲಕ್ಕೆ, ಕೆಳಕ್ಕೆ, ಒಳಕ್ಕೆ. ಹೊರಕ್ಕೆ, ಹಿಂದಕ್ಕೆ, ಮುಂದಕ್ಕೆ,

(9) ಸಂಬೋಧನ ವಿಭಕ್ತಿಪ್ರತ್ಯಯಕ್ಕೆ ಏಕವಚನದಲ್ಲಿ ವಿಕಲ್ಪವಾಗಿ ಲೋಪವು ಬರುವುದು ; ಆಗ ಪ್ರಕೃತಿಯ ಕೊನೆಯ ಸ್ವರಕ್ಕೆ ವಿಕಲ್ಪವಾಗಿ ದೀರ್ಘವು ಆದೇಶವಾಗಿ ಬರುವುದು.

ಉದಾ.

ರಾಮನೇ ; ರಾಮ, ರಾಮಾ ; ಹೀಗೆಯೇ ಅಣ್ಣ, ಅಣ್ಣಾ ; ಹುಡುಗೀ ; ತಂದೇ.

ಬಹುವಚನದಲ್ಲಿ ಅ, ಆ, ಇರ, ಇರಾ, ಎಂಬ ಪ್ರತ್ಯಯಗಳು ಸಂದರ್ಭಾನುಸಾರವಾಗಿ ಬರುವುವು.

ಉದಾ.

ಅಣ್ಣಂದಿರ, ಅಣ್ಣಂದಿರಾ ; ಮಕ್ಕಳಿರ, ಮಕ್ಕಳಿರಾ ; ಹುಡುಗರಿರ, ಹುಡುಗರಿರಾ.

(10) ತಾನು, ನೀನು, ನಾನು, ಏನು, ಎಂಬ ಸರ್ವನಾಮಗಳ ನಿಷ್ಪನ್ನರೂಪಗಳು ಯಾವುವೆಂದರೆ—

ತಾನು	ತಾವು	ನೀನು	ನೀವು	ನಾನು	ನಾವು	ಏನು
ತನ್ನನ್ನು	ತಮ್ಮನ್ನು	ನಿನ್ನನ್ನು	ನಿಮ್ಮನ್ನು	ನನ್ನನ್ನು	ನಮ್ಮನ್ನು	ಏನನ್ನು
ತನ್ನಿಂದ	ತಮ್ಮಿಂದ	ನಿನ್ನಿಂದ	ನಿಮ್ಮಿಂದ	ನನ್ನಿಂದ	ನಮ್ಮಿಂದ	ಏತರಿಂದ
ತನಗೆ	ತಮಗೆ	ನಿನಗೆ	ನಿಮಗೆ	ನನಗೆ	ನಮಗೆ	ಏತಕ್ಕೆ ಏಕೆ
ತನ್ನದೆಸೆ	ತಮ್ಮದೆಸೆ	ನಿನ್ನದೆಸೆ	ನಿಮ್ಮದೆಸೆ	ನನ್ನದೆಸೆ	ನಮ್ಮದೆಸೆ	ಏತರದೆಸೆ
ಯಿಂದ	ಯಿಂದ	ಯಿಂದ	ಯಿಂದ	ಯಿಂದ	ಯಿಂದ	ಯಿಂದ
ತನ್ನ	ತಮ್ಮ	ನಿನ್ನ	ನಿಮ್ಮ	ನನ್ನ	ನಮ್ಮ	ಏತರ
ತನ್ನಲ್ಲಿ	ತಮ್ಮಲ್ಲಿ	ನಿನ್ನಲ್ಲಿ	ನಿಮ್ಮಲ್ಲಿ	ನನ್ನಲ್ಲಿ	ನಮ್ಮಲ್ಲಿ	ಏತರಲ್ಲಿ

18. ಕೆಲವು ಕಾಲವಾಚಕ, ಸ್ಥಾನವಾಚಕ ಶಬ್ದಗಳಿಗೆ ತೃತೀಯಾ, ಪಂಚಮೀ, ಷಷ್ಠೀ ವಿಭಕ್ತಿಗಳ ರೂಪಗಳು ಮಾತ್ರ ಉಂಟು.

ಉದಾ.

ಆಗಿನಿಂದ, ಆಗ್ಗೆ, ಆಗಿನ ; ಈಗಿನಿಂದ, ಈಗ್ಗೆ, ಈಗಿನ ; ಯಾವಾಗಿನಿಂದ, ಯಾವಾಗ್ಗೆ, ಯಾವಾಗಿನ ; ಅಂದಿನಿಂದ, ಅಂದಿಗೆ, ಅಂದಿನ ; ನಾಳೆಯಿಂದ, ನಾಳೆಗೆ, ನಾಳೆಯ ; ಎಲ್ಲಿಂದ, ಎಲ್ಲಿಗೆ, ಎಲ್ಲಿಯ ; ಅಲ್ಲಿಂದ, ಅಲ್ಲಿಗೆ, ಅಲ್ಲಿಯ.

ಸರ್ವನಾಮಗಳಿಗೆ ಸಂಬೋಧನಾವಿಭಕ್ತಿಯ ರೂಪಗಳಿಲ್ಲ.

4. ಕ್ರಿಯಾಪದ ಪ್ರಕರಣ

19. ಕ್ರಿಯಾರ್ಥವನ್ನು ಕೊಡುವುದಾಗಿಯೂ, ಆಖ್ಯಾತ ಪ್ರತ್ಯಯವನ್ನು ಹೊಂದುವುದಾಗಿಯೂ ಇರುವ ಶಬ್ದಕ್ಕೆ ಧಾತುವೆಂದು ಸಂಜ್ಞೆ.

ಧಾತುಗಳಲ್ಲಿ ಮೂಲಧಾತುಗಳು ಕೆಲವು, ಪ್ರತ್ಯಯವು ಸೇರಿ ಆಗಿರುವ ಧಾತುಗಳು ಕೆಲವು.

ಮೂಲಧಾತುಗಳಿಗೆ ಉದಾಹರಣೆ.—

ಕಾ, ಸಾಕು, ಕಲಕು, ಬದುಕು, ಇಕ್ಕು, ಅಳುಕು ; ಮುಗಿ, ಹೋಗು, ಮಿಗು, ತೂಗು, ಮಲಗು, ಹಿಗ್ಗು, ಮರುಗು, ನಡುಗು ; ಮಿಂಚು, ಮೆಚ್ಚು, ನೆಚ್ಚು, ಹಂಚು ; ಅಂಜು, ಈಜು, ಉಜ್ಜು ; ದಾಟು, ಹುಟ್ಟು, ಮೆಟ್ಟು, ಹರಟು ; ನುಡಿ, ಹಿಡಿ, ಕೊಡು, ಇಡು, ಹರಡು, ಒಡ್ಡು, ಪಡೆ, ನಡೆ ; ಕುಣಿ, ಕಾಣು ; ಸುತ್ತು, ಒತ್ತು ; ಮಿದಿ, ಒದೆ, ಓದು, ತಿದ್ದು ; ಈನು, ನೆನೆ, ಎನ್ನು, ನೋ ; ಒಪ್ಪು, ತಪ್ಪು ; ನಂಬು, ತುಂಬು, ಉಬ್ಬು, ಬೇ ; ಮಿ, ಚಿಮ್ಮು, ಮೇ ; ಹೊಯ್, ಬಯ್, ಕೊಯ್ ; ಸುರಿ, ಅರಿ, ಹೀರು, ಸೇರು, ಅದಿರು ; ಸೋಲು ; ಹೊಲಿ, ಒಲಿ ; ಹೇಸು, ಅರಸು, ಬಳಸು, ಗುಡಿಸು, ಬಡಿಸು ; ಇಳಿ, ಹೊಗಳು, ಬಾಳು, ಎಳೆ, ತೊಳೆ ಮುಂತಾದುವು.

ಪ್ರತ್ಯಯಾನ್ತ ಧಾತುಗಳು ಆಗುವುದು ಹೇಗೆಂದರೆ—

(1) ಕಳವಳ ಮೊದಲಾದ ನಾಮವಾಚಕಗಳೂ, ಧಗಧಗ ಮೊದಲಾದ ಅನುಕರಣಶಬ್ದಗಳೂ "ಇಸು" ಪ್ರತ್ಯಯವನ್ನು ಹೊಂದಿ ಧಾತುಗಳಾಗುವುವು.

ಉದಾ.

ಕಳವಳಿಸು, ಅಬ್ಬರಿಸು, ಉಬ್ಬರಿಸು, ಕನ್ನಡಿಸು, ಓಲಗಿಸು ; ಧಗಧಗಿಸು, ಘಟಘಟಿಸು, ಥಳಥಳಿಸು, ಮಘಮಘಿಸು, ಮುಂತಾದುವು.

(2) ಯತ್ನ ಮೊದಲಾದ ಸಂಸ್ಕೃತ ಶಬ್ದಗಳು "ಇಸು" ಪ್ರತ್ಯಯವನ್ನು ಹೊಂದಿ ಧಾತುಗಳಾಗುವುವು.

ಉದಾ.

ಯತ್ನಿಸು, ಭಾವಿಸು, ಸ್ತುತಿಸು, ಪ್ರಲಾಪಿಸು, ಸಿದ್ಧಿಸು, ಭೇದಿಸು, ನಿರ್ಣಯಿಸು, ಸುಖಿಸು, ದುಃಖಿಸು, ಭಿನ್ನಿಸು ಮುಂತಾದುವು.

ರಕ್ಷಣ ಮುಂತಾದ ಸಂಸ್ಕೃತ ಶಬ್ದಗಳಿಗೆ “ ಇಸು ” ಪ್ರತ್ಯಯವನ್ನು ಸೇರಿಸುವಾಗ ಅವುಗಳ “ ಅಣ ” “ ಅನ ” ಎಂಬ ಅಂತ್ಯಭಾಗಕ್ಕೆ ಲೋಪ ಬರುವುದು.

ಉದಾ.

ರಕ್ಷಣ+ಇಸು=ರಕ್ಷಿಸು	ಭಜನ+ಇಸು=ಭಜಿಸು
ಸೇವನ + ಇಸು=ಸೇವಿಸು	ತ್ಯಜನ+ಇಸು=ತ್ಯಜಿಸು
ಸ್ಮರಣ+ಇಸು=ಸ್ಮರಿಸು	ಚಲನ+ಇಸು=ಚಲಿಸು

ಹೀಗೆಯೇ ಪ್ರೇರಿಸು, ಲಾಲಿಸು, ವರ್ಣಿಸು, ಪಾಲಿಸು ಮುಂತಾದುವು.

ಕೆಲವು ಕಡೆ ಅಂತ್ಯಭಾಗಕ್ಕೆ ಲೋಪವಿಲ್ಲ.

ಉದಾ.

ಶಯನಿಸು, ಗಮನಿಸು.

(3) ಎಲ್ಲಾ ಧಾತುಗಳ ಮೇಲೂ ಪ್ರೇರಣಾರ್ಥದಲ್ಲಿ * “ ಇಸು ” ಪ್ರತ್ಯಯ ಸೇರುವುದು. ಅದು ಸೇರುವಾಗ ಹಿಂದೆ ಇರುವ “ ಇಸು ” ಪ್ರತ್ಯಯಕ್ಕೆ ಲೋಪಬರುವುದು.

ಉದಾ.

“ ಇಸು ” ಪ್ರತ್ಯಯಕ್ಕೆ—ಮಾಡಿಸು, ಮಲಗಿಸು, ಕಲಿಸು, ತೆಗೆಯಿಸು, ಆಡಿಸು, ಓಡಿಸು.

ಲೋಪಕ್ಕೆ—ಕಲಿಸು+ಇಸು=ಕಲಿಸು. ಪೂಜಿಸು+ಇಸು=ಪೂಜಿಸು.

ಉಪಾಧ್ಯಾಯನು ಹುಡುಗನಿಗೆ ವಿದ್ಯೆಯನ್ನು ಕಲಿಸಿದನು.

ತಂದೆ ಉಪಾಧ್ಯಾಯನಿಂದ ಹುಡುಗನಿಗೆ ವಿದ್ಯೆಯನ್ನು ಕಲಿಸಿದನು.

ಅರ್ಚಕನು ದೇವರನ್ನು ಪೂಜಿಸಿದನು.

ಅರಸನು ಅರ್ಚಕನಿಂದ ದೇವರನ್ನು ಪೂಜಿಸಿದನು.

---

* ಪ್ರೇರಣ ಎಂದರೆ ಇನ್ನೊಬ್ಬನಿಂದ ಕೆಲಸಮಾಡಿಸುವುದು.

20. ಧಾತುಗಳಲ್ಲಿ ಕರ್ಮವನ್ನು ಅಪೇಕ್ಷಿಸದೆ ಕರ್ತೃವಿನ ವೃದ್ಧಿ ಮೊದಲಾದ ಕ್ರಿಯೆಯನ್ನು ತಿಳಿಸುವುದು ಅಕರ್ಮಕಧಾತು. ಕರ್ಮವನ್ನು ಅಪೇಕ್ಷಿಸಿ ಕ್ರಿಯೆಯನ್ನು ತಿಳಿಸುವುದು ಸಕರ್ಮಕ ಧಾತು.

ಉದಾ.

ಅಕರ್ಮಕಕ್ಕೆ—ಇರು, ಬದುಕು, ಹೋಗು, ಮಲಗು, ಮುಂತಾದುವು.
ಸಕರ್ಮಕಕ್ಕೆ—ಮಾಡು, ಕೊಡು, ಕರೆ, ಬಿಡು, ಮುಂತಾದುವು.

21. ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿದರೆ ಕ್ರಿಯಾಪದಗಳಾಗುವುವು. ಕ್ರಿಯಾಪದಗಳಲ್ಲಿ ವರ್ತಮಾನರೂಪ, ಭೂತರೂಪ, ಭವಿಷ್ಯದ್ರೂಪ, ಸಂಭಾವನಾರೂಪ, ವಿಧ್ಯಾದಿರೂಪ, ನಿಷೇಧರೂಪ ಎಂದು ಆರು ರೂಪಗಳುಂಟು.

22. ವರ್ತಮಾನ, ಭೂತ, ಭವಿಷ್ಯದ್ರೂಪಗಳು:—ನಡೆಯುತ್ತಿರುವ, ಕಳೆದುಹೋದ ಮತ್ತು ಮುಂದೆ ಬರುವ ಕಾಲಗಳು ತೋರಿದರೆ ಕ್ರಮವಾಗಿ ವರ್ತಮಾನ, ಭೂತ, ಭವಿಷ್ಯದ್ರೂಪಗಳು ಉಪಯೋಗಿಸಲ್ಪಡುವುವು.

(1) ಈ ರೂಪಗಳ ಪ್ರತ್ಯಯಗಳು ಯಾವುವೆಂದರೆ—

		ವರ್ತಮಾನ			ಭೂತ, ಭವಿಷ್ಯತ್ತು.	
		ಏಕ.	ಬಹು.		ಏಕ.	ಬಹು.
ಪ್ರಥಮಪುರುಷ.	ಪು.	ಆನೆ	ಆರೆ		ಅನು	ಅರು
	ಸ್ತ್ರೀ.	ಆಳೆ	ಆರೆ		ಅಳು	ಅರು
	ನ.	ಅದೆ	ಅವೆ	ಭೂತ	ಇತು	* ಉವು
				ಭವಿ	*ಉದು	
ಮಧ್ಯಮಪುರುಷ		ಈಯೇ	ಈರಿ		ಎ	ಇರಿ
ಉತ್ತಮಪುರುಷ		ಏನೆ	ಏವೆ		ಎನು	ಎವು

* ಉದು, ಉವು, ಎಂಬ ಪ್ರತ್ಯಯಗಳಿಗೆ ಪ್ರತಿಯಾಗಿ ಅದು, ಅವು, ಎಂಬ ಪ್ರತ್ಯಯಗಳು ವಾಡಿಕೆಯಲ್ಲಿವೆ.

(2) ಈ ಪ್ರತ್ಯಯಗಳಿಗೂ ಧಾತುವಿಗೂ ನಡುವೆ ವರ್ತಮಾನ ಕಾಲದಲ್ಲಿ "ಉತ್ತ" ಭೂತಕಾಲದಲ್ಲಿ "ದ" ಭವಿಷ್ಯತ್ಕಾಲದಲ್ಲಿ* "ವ" ಎಂಬ ವಿಕರಣ ಪ್ರತ್ಯಯಗಳು ಸೇರುತ್ತವೆ,

ಇಕಾರಾಂತ, ಎಕಾರಾಂತ ಧಾತುಗಳಿಗೂ, ಮೂರು ಲಘುಗಳುಳ್ಳ ಧಾತುಗಳಿಗೂ ಆದಿಯಲ್ಲಿ ಗುರುವುಳ್ಳ ಧಾತುಗಳಿಗೂ "ಇತು" ಪ್ರತ್ಯಯ ಬಂದಾಗ "ದ" ಪ್ರತ್ಯಯ ಬರುವುದಿಲ್ಲ. †

ಉದಾ.

ವರ್ತಮಾನಕ್ಕೆ—ತಿಳಿ+ಉತ್ತ+ಆನೆ=ತಿಳಿಯುತ್ತಾನೆ.
ಭೂತಕ್ಕೆ—ಕರೆ+ದ+ಅನು=ಕರೆದನು.
ಭವಿಷ್ಯತ್ತಿಗೆ—ಮಾಡು+ವ+ಅನು=ಮಾಡುವನು.

ದಕಾರ ಬರದೆ ಇರುವುದಕ್ಕೆ—ತಿಳಿಯಿತು, ಹಿಡಿಯಿತು, ಮುರಿಯಿತು, ಕರೆಯಿತು, ಮೆರೆಯಿತು, ಹೊಳೆಯಿತು ; ಕಲಕಿತು, ಬದುಕಿತು, ಉದುರಿತು, ಮಾಡಿತು, ನೋಡಿತು, ಹೇಳಿತು.

ಕೆಲವು ಏಕಾಕ್ಷರ ಧಾತುಗಳಿಗೆ "ದ" ಪ್ರತ್ಯಯವು ಬರುವುದು.

ಉದಾ.

ಬೆಂದಿತು, ನೊಂದಿತು.

ಕೆಲವು ಏಕಾಕ್ಷರದ ಧಾತುಗಳಿಗೆ "ವ" ಪ್ರತ್ಯಯವುಬರದೆಯಿರುವುದಕ್ಕೆ—

ಉದಾ.

ಕಾಯಿತು, ಮೇಯಿತು.

---

* "ವ" ಪ್ರತ್ಯಯಕ್ಕೆ ಪ್ರತಿಯಾಗಿ "ಉವ" ಪ್ರತ್ಯಯವು ವಾಡಿಕೆಯಲ್ಲಿದೆ. "ಉತ್ತ" ಎಂಬುದಕ್ಕೆ "ಉತ" ಎಂತಲೂ ಉಂಟು.

† ಹ್ರಸ್ವಸ್ವರಕ್ಕೆ ಲಘುವೆಂದೂ, ದೀರ್ಘಸ್ವರ, ಸಂಯುಕ್ತಾಕ್ಷರದ ಹಿಂದಿನ ಹ್ರಸ್ವಸ್ವರ, ಅನುಸ್ವಾರ ವಿಸರ್ಗಗಳೊಡನೆ ಕೂಡಿದ ಹ್ರಸ್ವಸ್ವರ ಇವುಗಳಿಗೆ ಗುರುವೆಂದೂ ಸಂಜ್ಞೆ.

ತಿಳಿ ಮತ್ತು ಮಾಡು ಎಂಬ ಧಾತುಗಳ ರೂಪನಿಷ್ಪತ್ತಿ—

		ವರ್ತಮಾನಕಾಲ.		ಭೂತಕಾಲ.		ಭವಿಷ್ಯತ್‌ಕಾಲ	
		ಏಕ	ಬಹು	ಏಕ	ಬಹು	ಏಕ	ಬಹು
ಪ್ರ. ಪು.	ಪು.	ತಿಳಿಯುತ್ತಾನೆ ಮಾಡುತ್ತಾನೆ	ತಿಳಿಯುತ್ತಾರೆ ಮಾಡುತ್ತಾರೆ	ತಿಳಿದನು ಮಾಡಿದನು	ತಿಳಿದರು ಮಾಡಿದರು	ತಿಳಿವನು ಮಾಡುವನು	ತಿಳಿವರು. ಮಾಡುವರು.
	ಸ್ತ್ರೀ.	ತಿಳಿಯುತ್ತಾಳೆ ಮಾಡುತ್ತಾಳೆ	ತಿಳಿಯುತ್ತಾರೆ ಮಾಡುತ್ತಾರೆ	ತಿಳಿದಳು ಮಾಡಿದಳು	ತಿಳಿದರು ಮಾಡಿದರು	ತಿಳಿವಳು ಮಾಡುವಳು	ತಿಳಿವರು. ಮಾಡುವರು.
	ನ.	ತಿಳಿಯುತ್ತದೆ* ಮಾಡುತ್ತದೆ	ತಿಳಿಯುತ್ತವೆ ಮಾಡುತ್ತವೆ	ತಿಳಿಯಿತು ಮಾಡಿತು	ತಿಳಿದುವು ಮಾಡಿದುವು	ತಿಳಿವುದು ಮಾಡುವುದು	ತಿಳಿವುವು. ಮಾಡುವುವು.
ಮ. ಪು.		ತಿಳಿಯುತ್ತೀಯೆ ಮಾಡುತ್ತೀಯೆ	ತಿಳಿಯುತ್ತೀರಿ ಮಾಡುತ್ತೀರಿ	ತಿಳಿದೆ ಮಾಡಿದೆ	ತಿಳಿದಿರಿ ಮಾಡಿದಿರಿ	ತಿಳಿವೆ ಮಾಡುವೆ	ತಿಳಿವಿರಿ. ಮಾಡುವಿರಿ.
ಉ. ಪು.		ತಿಳಿಯುತ್ತೇನೆ ಮಾಡುತ್ತೇನೆ	ತಿಳಿಯುತ್ತೇವೆ ಮಾಡುತ್ತೇವೆ	ತಿಳಿದೆನು ಮಾಡಿದೆನು	ತಿಳಿದೆವು ಮಾಡಿದೆವು	ತಿಳಿವೆನು ಮಾಡುವೆನು	ತಿಳಿವೆವು. ಮಾಡುವೆವು.

* ಇದಕ್ಕೆ ಪ್ರತಿಯಾಗಿ ತಿಳಿಯುತ್ತೆ ಎಂದು ಹೇಳುವುದುಂಟು.

23. ಸಂಭಾವನಾರೂಪ.—ಕ್ರಿಯೆ ನಡೆಯುವುದರಲ್ಲಿ ಸಂಶಯವಾಗಲೀ ಊಹೆಯಾಗಲೀ ತೋರಿದರೆ ಸಂಭಾವನಾರೂಪವಾಗುವುದು. ಈ ರೂಪದಲ್ಲಿ ಏಕಾಕ್ಷರ ಧಾತುಗಳಿಗೂ, ಎರಡು ಲಘುಗಳುಳ್ಳ ಧಾತುಗಳಿಗೂ, "ದ" ಪ್ರತ್ಯಯವು ಬರುವುದು.

ಸಂಭಾವನಾರೂಪದ ಪ್ರತ್ಯಯಗಳ ಮತ್ತು ತಿಳಿ, ಮಾಡು ಎಂಬ ಧಾತುಗಳ ರೂಪನಿಷ್ಪತ್ತಿ.—

		ಏಕ.	ಬಹು.	ಏಕ.	ಬಹು.	ಏಕ.	ಬಹು.
ಪ್ರ. ಪು	ಪು.	ಆನು	ಆರು	ತಿಳಿದಾನು	ತಿಳಿದಾರು	ಮಾಡಾನು*	ಮಾಡಾರು.
	ಸ್ತ್ರೀ.	ಆಳು	ಆರು	ತಿಳಿದಾಳು	ತಿಳಿದಾರು	ಮಾಡಾಳು	ಮಾಡಾರು.
	ನ.	ಈತು	ಆವು	ತಿಳಿದೀತು	ತಿಳಿದಾವು	ಮಾಡೀತು	ಮಾಡಾವು.
ಮ. ಪು.		ಈಯೆ	ಈರಿ	ತಿಳಿದೀಯೆ	ತಿಳಿದೀರಿ	ಮಾಡೀಯೆ	ಮಾಡೀರಿ
ಉ. ಪು.		ಏನು	ಏವು	ತಿಳಿದೇನು	ತಿಳಿದೇವು	ಮಾಡೇನು	ಮಾಡೇವು.

24. ವಿಧ್ಯಾದಿರೂಪ.—ಆಜ್ಞೆ, ವಿಜ್ಞಾಪನೆ, ಆಶೀರ್ವಾದ, ಪ್ರಶ್ನೆ ಮುಂತಾದ ಅರ್ಥಗಳು ತೋರಿದರೆ ವಿಧ್ಯಾದಿರೂಪವಾಗುವುದು.

ವಿಧ್ಯಾದಿರೂಪದಪ್ರತ್ಯಯಗಳು ಮತ್ತು ತಿಳಿ, ಮಾಡು ಎಂಬ ಧಾತುಗಳ ರೂಪನಿಷ್ಪತ್ತಿ:—

	ಏಕ.	ಬಹು.	ಏಕ.	ಬಹು.
ಪ್ರ. ಪು. ಮೂರುಲಿಂಗಕ್ಕೂ	ಅಲಿ†	ಅಲಿ	ತಿಳಿಯಲಿ ಮಾಡಲಿ	ತಿಳಿಯಲಿ ಮಾಡಲಿ
ಮ. ಪು.	‡ವುದು	ಇರಿ	ತಿಳಿವುದು ಮಾಡುವುದು	ತಿಳಿಯಿರಿ ಮಾಡಿರಿ.
ಉ. ಪು.	‡ವೆ	‡ವ	ತಿಳಿವೆ ಮಾಡುವೆ	ತಿಳಿವ. ಮಾಡುವ

* ಮಾಡಿಯಾನು, ಮಾಡಿಯಾಳು, ಮಾಡಿಯಾರು, ಮಾಡಿಯಾವು, ಎಂಬ ರೂಪಗಳು ವಾಡಿಕೆಯಾಗಿವೆ.

† ಶಪಿಸುವಾಗ ಅ ಎಂಬ ಪ್ರತ್ಯಯ ಸೇರುವುದು. ಉದಾ.__ಅವನು ನಾಶವಾಗ.

‡ ಈ ಪ್ರತ್ಯಯಗಳ ಹಿಂದೆ ಉಕಾರವನ್ನು ಸೇರಿಸುವುದು ವಾಡಿಕೆಯಲ್ಲಿದೆ: ಉದಾ.__ತಿಳಿಯುವುದು, ತಿಳಿಯುವೆ, ತಿಳಿಯುವ; "ವ" ಪ್ರತ್ಯಯಕ್ಕೆ ಬದಲು "ಓಣ" ಎಂಬ ಪ್ರತ್ಯಯ ವಾಡಿಕೆಯಲ್ಲಿದೆ: ಉದಾ.__ತಿಳಿಯೋಣ, ಮಾಡೋಣ, "ವುದು" ಎಂಬ ಪ್ರತ್ಯಯ ಬಹುವಚನದಲ್ಲಿಯೂ ಉಂಟು. ಉದಾ.__ತಿಳಿಯುವುದು.

ವಿಶೇಷ ವಿಧಿಗಳು :—

(1) ಮಧ್ಯಮಪುರುಷದ "ವುದು" ಪ್ರತ್ಯಯಕ್ಕೆ ವಿಕಲ್ಪವಾಗಿ ಲೋಪ ಬಂದು ಕ್ರಿಯಾಪದವು ಧಾತುಸ್ವರೂಪದಲ್ಲಿಯೇ ನಿಲ್ಲುವುದು.

ಉದಾ.

ಮಾಡುವುದು, ಮಾಡು ; ತಿಳಿವುದು, ತಿಳಿ.

(2) ಏಕಾಕ್ಷರ ಧಾತುವಿಗೆ ಸೇರಿದ "ವುದು" ಪ್ರತ್ಯಯಕ್ಕೆ ವಿಕಲ್ಪವಾಗಿ ಇಕಾರಾದೇಶ ಬರುವುದು.

ಉದಾ.

ಕಾವುದು, ಕಾಯಿ ; ಮಿಾವುದು, ಮಿಾಯಿ.

(3) ಉಕಾರಾಂತ ಧಾತುವಿಗೆ ಮಧ್ಯಮ ಪುರುಷ ಬಹುವಚನದಲ್ಲಿ "ಇರಿ" ಪ್ರತ್ಯಯಕ್ಕೆ ವಿಕಲ್ಪವಾಗಿ ಇಕಾರಾದೇಶ ಬರುವುದು.

ಉದಾ.

ಮಾಡಿರಿ, ಮಾಡಿ ; ಹೇಳಿರಿ, ಹೇಳಿ.

(4) ತರು, ಬರು, ಎಂಬ ಧಾತುಗಳಿಗೆ ಮಧ್ಯಮಪುರುಷದ ಏಕವಚನದಲ್ಲಿ ತಾ, ಬಾ, ಎಂದೂ ಬಹುವಚನದಲ್ಲಿ ತನ್ನಿ, ಬನ್ನಿ ಎಂದೂ ರೂಪಗಳಾಗುತ್ತವೆ.

(5) ಧಾತುಗಳಿಗೆ ಬೇಕು, ಬಹುದು, ಎಂಬ ಶಬ್ದಗಳು ಸೇರಿ ವಿಧ್ಯಾದ್ಯರ್ಥವನ್ನು ಕೊಡುತ್ತವೆ. ಆಗ ನಡುವೆ ಅಕಾರಾಗಮ ಬರುವುದು.

ಉದಾ.

ಮಾಡಬೇಕು, ತಿಳಿಯಬೇಕು ; ಮಾಡಬಹುದು, ತಿಳಿಯಬಹುದು.

25. ನಿಷೇಧರೂಪ.—ಕ್ರಿಯೆ ನಡೆಯಲಿಲ್ಲವೆಂಬರ್ಥ ತೋರಿದರೆ ನಿಷೇಧರೂಪವಾಗುವುದು.

ನಿಷೇದರೂಪವ ಪ್ರತ್ಯಯಗಳ ಮತ್ತು ತಿಳಿ, ಮಾಡು ಎಂಬ ಧಾತುಗಳ ರೂಪನಿಷ್ಪತ್ತಿ:—

		ಏಕ.	ಬಹು.	ಏಕ.	ಬಹು.
ಪ್ರ. ಪು.	ಪು.	ಅನು	ಅರು	ತಿಳಿಯನು ಮಾಡನು	ತಿಳಿಯರು ಮಾಡರು
	ಸ್ತ್ರೀ.	ಅಳು	ಅರು	ತಿಳಿಯಳು ಮಾಡಳು	ತಿಳಿಯರು ಮಾಡರು
	ನ	ಅದು	ಅವು	ತಿಳಿಯದು ಮಾಡದು	ತಿಳಿಯವು ಮಾಡವು
ಮ. ಪು.		ಎ	*ಇರಿ	ತಿಳಿಯೆ ಮಾಡೆ	ತಿಳಿಯಿರಿ ಮಾಡಿರಿ
ಉ. ಪು.		ಎನು	ಎವು	ತಿಳಿಯೆನು ಮಾಡೆನು	ತಿಳಿಯೆವು ಮಾಡೆವು

ವಿಶೇಷ ವಿಧಿಗಳು:—

(1) ತರು, ಬರು, ಎಂಬ ಧಾತುಗಳ ಆದಿಸ್ವರಕ್ಕೆ ದೀರ್ಘಾದೇಶ ಬರುವುದು.

ಉದಾ

ತಾರೆನು, ಬಾರೆನು ; ತಾರಳು, ಬಾರಳು.

(2) " ಇಲ್ಲ " ಎಂಬ ಶಬ್ದವನ್ನು ಸೇರಿಸಿ ನಿಷೇಧಾರ್ಥವನ್ನು ಹೇಳುವಾಗ ಧಾತುವಿಗೆ ವರ್ತಮಾನ, ಭವಿಷ್ಯತ್ಕಾಲಗಳಲ್ಲಿ " ವುದು " ಎಂಬ ಪ್ರತ್ಯಯವೂ, ಭೂತಕಾಲದಲ್ಲಿ " ಅಲ್ " ಎಂಬ ಪ್ರತ್ಯಯವೂ ಸೇರುವುವು.

ಉದಾ.

ತಿಳಿವುದಿಲ್ಲ, ಮಾಡುವುದಿಲ್ಲ, ತಿಳಿಯಲಿಲ್ಲ, ಮಾಡಲಿಲ್ಲ.

(3) ಕ್ರಿಯೆಗೆ ನಿಷೇಧದ ವಿಧ್ಯಾದಿಗಳು ತೋರಿದರೆ ಧಾತುವಿಗೆ ಬೇಡ, ಬಾರದು, ಕೂಡದು ಎಂಬ ಶಬ್ದಗಳು ಸೇರುವುವು. ಆಗ ನಡುವೆ ಅಕಾರಾಗಮ ಬರುವುದು. ಆಗದು ಎಂಬ ಶಬ್ದವನ್ನು ಸೇರಿಸಿದಾಗ " ಅಲ್ " ಎಂಬ ಆಗಮ ಬರುವುದು.

* ಇದನ್ನು " ಅರಿ " ಎಂದು ವಾಡಿಕೆಯಾಗಿ ಉಚ್ಚರಿಸುವುದುಂಟು. ಉದಾ.—ಮಾಡಿರಿ.

ಉದಾ.

ತಿಳಿಯಬೇಡ ; ಮಾಡಬೇಡ; ತಿಳಿಯಬಾರದು ; ಮಾಡಬಾರದು ; ತಿಳಿಯಕೂಡದು ; ಮಾಡಕೂಡದು ; ತಿಳಿಯಲಾಗದು ; ಮಾಡಲಾಗದು.

(4) ಕ್ರಿಯೆಗೆ ನಿಷೇಧ ಸಂಭಾವನೆ ಅಥವಾ ಸಾಮರ್ಥ್ಯನಿಷೇಧ ತೋರಿದರೆ, ಧಾತುವಿನ ಮೇಲೆ ಆರನು, ಆರರು ಮುಂತಾದ ಶಬ್ದಗಳು ಸೇರುವುವು. ಆಗ ನಡುವೆ " ಅಲ್ " ಎಂಬ ಆಗಮವು ಬರುವುದು.

ಉದಾ.

ತಿಳಿಯಲಾರನು, ತಿಳಿಯಲಾರರು ; ತಿಳಿಯಲಾರಳು, ತಿಳಿಯಲಾರರು, ತಿಳಿಯಲಾರದು, ತಿಳಿಯಲಾರವು ; ತಿಳಿಯಲಾರೆ, ತಿಳಿಯಲಾರಿರಿ ; ತಿಳಿಯಲಾರೆನು, ತಿಳಿಯಲಾರೆವು.

26. ಇರು, ಒಲ್, ಬಲ್, ಎಂಬ ಧಾತುಗಳು.

(1) ಇರು ಎಂಬ ಧಾತುವಿಗೆ ವರ್ತಮಾನಕಾಲದ ರೂಪಗಳಿಗೆ ಪ್ರತಿಯಾಗಿ ಬೇರೆ ಕೆಲವು ರೂಪಗಳು ವಾಡಿಕೆಯಲ್ಲಿವೆ.

ಉದಾ.

ಇದ್ದಾನೆ, ಇದ್ದಾರೆ ; ಇದ್ದಾಳೆ, ಇದ್ದಾರೆ ; ಇದೆ, ಇವೆ ; ಇದ್ದೀಯೆ. ಇದ್ದೀರಿ; ಇದ್ದೇನೆ, ಇದ್ದೇವೆ. * ಇದಾನೆ, ಇದಾರೆ, ಎಂಬಂತೆ ಈ ರೂಪಗಳಲ್ಲಿ ದಕಾರಕ್ಕೆ ದ್ವಿತ್ವವಿಲ್ಲದಿರುವುದೂ ಉಂಟು.

(2) ಅಂಗೀಕಾರಾರ್ಥದ " ಒಲ್ " ಎಂಬ ಧಾತುವಿಗೆ ನಿಷೇಧ ರೂಪ ಮಾತ್ರ ಉಂಟು.

ಉದಾ.

ಒಲ್ಲನು, ಒಲ್ಲರು ; ಒಲ್ಲಳು, ಒಲ್ಲರು ; ಒಲ್ಲದು, ಒಲ್ಲವು ; ಒಲ್ಲೆ, ಒಲ್ಲಿರಿ ; ಒಲ್ಲೆನು, ಒಲ್ಲೆವು.

(3) ಜ್ಞಾನಾರ್ಥದ " ಬಲ್ " ಎಂಬ ಧಾತುವಿಗೆ ವರ್ತಮಾನ ಭೂತರೂಪಗಳು ಮಾತ್ರ ಉಂಟು.

---

* ಇದ್ದಿತು ಎಂಬ ಭೂತರೂಪಕ್ಕೆ ಇತ್ತು, ಎಂಬ ರೂಪವು ವಾಡಿಕೆಯಲ್ಲಿದೆ.

ಉದಾ.

ಬಲ್ಲನು, ಬಲ್ಲರು ; ಬಲ್ಲಳು, ಬಲ್ಲರು ; ಬಲ್ಲುದು, ಬಲ್ಲುವು ; ಬಲ್ಲೆ, ಬಲ್ಲಿರಿ, ಬಲ್ಲೆನು, ಬಲ್ಲೆವು.

27. " ದ " ಪ್ರತ್ಯಯ ಸೇರುವಾಗ ಬರುವ ಸಂಧಿಕಾರ್ಯಗಳು.

(1) ಎರಡು ಲಘುಗಳಿಂದ ಮಾತ್ರ ಕೂಡದಿರುವ ಉಕಾರಾಂತ ಧಾತುಗಳ ಕೊನೆಗೆ ಇಕಾರಾದೇಶ ಬರುವುದು.

ಉದಾ.

ಮಾಡು+ದ+ಅನು=ಮಾಡಿದನು.
ಮಲಗು+ದ+ಅನು=ಮಲಗಿದನು.

ಹೀಗೆಯೇ, ನೋಡು, ಹಾರು, ತೂಗು, ಕಟ್ಟು, ಅಂಜು, ತಳ್ಳು, ಕಾಪಾಡು, ಹರಡು, ಕಿವುಚು, ಕಲಕು, ಹರಟು, ಕರುಬು, ಬೆದರಿಸು, ರಕ್ಷಿಸು, ಯತ್ನಿಸು, ಮುಂತಾದುವು.

(2) ದ್ವಿಲಘುಗಳಾದ ಗು, ಡು, ರು, ವರ್ಣಾಂತ ಧಾತುಗಳ ಗು, ಡು, ರು, ವರ್ಣಗಳಿಗೆ ಕ, ಟ, ತ, ಕಾರಗಳು ಕ್ರಮವಾಗಿ ಆದೇಶ ವಾಗುವುವು. ಆಗ " ದ " ಪ್ರತ್ಯಯಕ್ಕೂ ಅದೇ ರೂಪ ಬರುವುದು.

ಉದಾ.

ಮಿಗು+ದ+ಅನು=ಮಿಕ್ಕನು.
ಕೊಡು+ದ+ಅನು=ಕೊಟ್ಟನು.
ತೆರು+ದ+ಅನು=ತೆತ್ತನು.

ಹೀಗೆಯೇ, ಹೋಗು, ನಗು, ಉಗು ; ಬಿಡು, ಸುಡು, ಇಡು, ಉಡು, ಕೆಡು, ಪಡು ; ಹೊರು, ಹೆರು, ಮುಂತಾದುವು,

ಒಡಂಬಡು, ಬೇರ್ಪಡು, ಏರ್ಪಡು, ಮೊರೆಯಿಡು, ಗೋಳಿಡು, ಮುಂತಾದ ಧಾತುಗಳೂ, ಪಡು, ಇಡು, ಎಂಬ ಧಾತುಗಳಂತೆಯೇ ರೂಪ ಹೊಂದುತ್ತವೆ.

ಹೊರಡು, ಬಿಸುಡು ಎಂಬ ಧಾತುಗಳ ಡುಕಾರಕ್ಕೆ ಟಕಾರಾದೇಶ ಬರುವುದು.

ಉದಾ.

ಹೊರಟನು, ಬಿಸುಟನು.

(3) ಬೀಳು, ಕೀಳು, ಕಾಣು ಮುಂತಾದ ಧಾತುಗಳ ಕೊನೆಯ ಸ್ವರಸಹಿತವರ್ಣಕ್ಕೆ ಕ್ರಮವಾಗಿ ದ, ತ, ಣ ಕಾರಾದೇಶಗಳೂ, ಅದೇ ಕ್ರಮದಲ್ಲಿ ದ ಪ್ರತ್ಯಯಕ್ಕೆ ದ, ತ, ಡ ಕಾರಾದೇಶಗಳೂ ಬರುವುವು. ಧಾತುವಿನ ದೀರ್ಘಸ್ವರವು ಹ್ರಸ್ವವಾಗುವುದು.

ಉದಾ.

ಬೀಳು+ದ+ಅನು=ಬಿದ್ದನು. ಹೀಗೆಯೇ, ಏಳು, ಕಳು, ಗೆಲ್ಲು, ಮೆಲ್ಲು.
ಕೀಳು+ದ+ಅನು=ಕಿತ್ತನು. ಹೀಗೆಯೇ, ಉಳು, ಅಳು, ಎಚ್ಚರು, ಬೇಸರು.
ಕಾಣು+ದ+ಅನು=ಕಂಡನು. ಹೀಗೆಯೇ, ಉಣ್ಣು, ಕೊಳ್ಳು.

ಈ, ಸಾ, ಎಂಬ ಧಾತುಗಳಿಗೆ ನಡುವೆ ತಕಾರಾಗಮವೂ, ದ ಪ್ರತ್ಯಯಕ್ಕೆ ತಕಾರಾದೇಶವೂ, ದೀರ್ಘಕ್ಕೆ ಹ್ರಸ್ವವೂ ಬರುವುವು.—

ಉದಾ.

ಇತ್ತನ , ಸತ್ತನು.

(4) ನೋ ಮುಂತಾದ ಧಾತುಗಳ ದೀರ್ಘಕ್ಕೆ ಹ್ರಸ್ವಾದೇಶವೂ ದ ಪ್ರತ್ಯಯದ ಹಿಂದೆ ನಕಾರಾಗಮವೂ ಬರುವುವು.

ಉದಾ.

ನೋ+ದ+ಅನ =ನೊಂದನು. ಹೀಗೆಯೇ ಬೇ, ಮಾ.

(5) ಕೊಲ್ಲು ಮುಂತಾದ ಧಾತುಗಳ ಕೊನೆಯ ಸ್ವರಸಹಿತ ವರ್ಣಕ್ಕೆ ನಕಾರಾದೇಶ ಬರುವುದು.

ಉದಾ.

ಕೊಲ್ಲು+ದ+ಅನು=ಕೊಂದನು. ಹೀಗೆಯೇ, ಸಲ್ಲು, ನಿಲ್ಲು, ತಿನ್ನು, ಎನ್ನು, ತರು, ಬರು.

ನಿಲ್ಲು ಎಂಬ ಧಾತುವಿಗೆ ಪರವಾದ ದ ಪ್ರತ್ಯಯಕ್ಕೆ ತಕಾರಾದೇಶವೂ ಬರುವುದು.

ಉದಾ.

ನಿಲ್ಲು+ದ+ಅನು=ನಿಂತನು.

(6) ಕಲಿ ಮುಂತಾದ ಧಾತುಗಳ ಮುಂದಿನ ದ ಪ್ರತ್ಯಯಕ್ಕೆ ತಕಾರಾದೇಶ ಬರುವುದು.

ಉದಾ.

ಕಲಿ+ದ+ಅನು=ಕಲಿತನು. ಹೀಗೆಯೇ ಬಲಿ, ಹುಳಿ, ಕುರಿ, ಕಳಿ, ಕೀ, ಬೀ, ಮರೆ, ಕೊಳೆ, ಮೊಳೆ.

(7) ಆಗು, ಹೋಗು, ಈನು ಎಂಬ ಧಾತುಗಳ ಕೊನೆಯ ಸ್ವರಸಹಿತವರ್ಣಕ್ಕೆ ಲೋಪಬರುವುದು. ಆಗು, ಹೋಗು, ಎಂಬ ಧಾತುಗಳಿಗೆ "ಇತು" ಪ್ರತ್ಯಯ ಸೇರುವಾಗಲೂ ಲೋಪಬರುವುದು.

ಉದಾ.

ಆದನು, ಹೋದನು, ಈದುವು ; ಆಯಿತು, ಹೋಯಿತು.

5. ಕೃದಂತ ಪ್ರಕರಣ

28. ಧಾತುವಿನಮೇಲೆ ಕೃತ್ಪ್ರತ್ಯಯಗಳು ಸೇರಿದರೆ ಕೃದಂತ ಶಬ್ದಗಳಾಗುವುವು. ಅವುಗಳಲ್ಲಿ ಕೃದಂತನಾಮ, ಕೃದಂತಭಾವನಾಮ, ಕೃದಂತಾವ್ಯಯ ಎಂದು ಮೂರು ವಿಧ.

29. ಕೃದಂತನಾಮ.—ಧಾತುವಿನಮೇಲೆ ಕರ್ತೃ ಮೊದಲಾದ ಅರ್ಥಗಳಲ್ಲಿ "ಅ" ಎಂಬ ಕೃತ್ಪ್ರತ್ಯಯ ಬರುವುದು; ಆಗ ನಡುವೆ ಭೂತಕಾಲದಲ್ಲಿ "ದ," ವರ್ತಮಾನ ಭವಿಷ್ಯತ್ಕಾಲಗಳಲ್ಲಿ "ವ," ನಿಷೇಧದಲ್ಲಿ "ಅದ" ಎಂಬ ಪ್ರತ್ಯಯಗಳು ಸೇರಿ, ಕೃದಂತನಾಮ ಪ್ರಕೃತಿಗಳಾಗುವುವು.

ಉದಾ.

ಭೂತರೂಪಕ್ಕೆ	ವರ್ತಮಾನಭವಿಷ್ಯತ್ತುಗಳಿಗೆ	ನಿಷೇಧಕ್ಕೆ
ಮಾಡಿದ	ಮಾಡುವ	ಮಾಡದ
ಕರೆದ	ಕರೆವ	ಕರೆಯದ

(i) ಕೃದಂತನಾಮ ಪ್ರಕೃತಿಗಳಿಗೆ ಪುಂಸ್ತ್ರೀನಪುಂಸಕೈಕವಚನ ಬಹುವಚನಗಳಲ್ಲಿ ಕ್ರಮವಾಗಿ ಅವನು, ಅವಳು, ಉದು,* ಅವರು, ಉವು,* ಎಂಬ ಪ್ರತ್ಯಯಗಳು ಸೇರುವುವು.

ಉದಾ.

ಭೂತಕ್ಕೆ—ಮಾಡಿದವನು, ಮಾಡಿದವಳು, ಮಾಡಿದುದು; ಮಾಡಿದವರು, ಮಾಡಿದುವು.

---

* ಉದು, ಉವು ಎಂಬ ಪ್ರತ್ಯಯಗಳಿಗೆ "ಅದು;" "ಅವು" ಎಂಬುವೇ ವಾಡಿಕೆಯಲ್ಲಿವೆ. ಉದಾ.—ಮಾಡುವದು, ಮಾಡುವವು; ಮಾಡಿದದು, ಮಾಡದದು ಎಂಬುವದಕ್ಕೆ ಮಾಡಿದ್ದು, ಮಾಡದ್ದು ಎಂದೇ ವಾಡಿಕೆ. ತೃತೀಯಾ ವಿಭಕ್ತಿಯಿಂದ ಮುಂದಕ್ಕೆ ಮಾಡುವವುಗಳಿಂದ, ಮಾಡುವವಕ್ಕೆ, ಎಂಬುದಾಗಿ ಅವು ಪ್ರತ್ಯಯವೇ ರೂಢಿಯಲ್ಲಿದೆ.

ವರ್ತಮಾನಭವಿಷ್ಯತ್ತುಗಳಿಗೆ—ಮಾಡುವವನು, ಮಾಡುವವಳು, ಮಾಡುವುದು ; ಮಾಡುವವರು, ಮಾಡುವುವು.

ನಿಷೇಧಕ್ಕೆ—ಮಾಡದವನು, ಮಾಡದವಳು, ಮಾಡದುದು ; ಮಾಡದವರು, ಮಾಡದುವು.

(2) ಮನೆಮುರಕ, ಬಾಯಿಬಡುಕ, ಹೊಟ್ಟೆಹೊರಕ, ಬಾಳುಹರಕ, ತಿರುಕ, ಹರುಕ, ಕುಡುಕ, ನೋಟಕ, ತುಂಟ, ಕಳ್ಳ ಮುಂತಾದ ಕೆಲವು ಶಬ್ದಗಳು ಕೃದಂತನಾಮಗಳಾಗುತ್ತವೆ.

ಉದಾ.

ತಿರುಕ=ತಿರಿಯುವವನು.

30. ಕೃದಂತಭಾವನಾಮ.

(1) ಎಲ್ಲಾ ಧಾತುಗಳಮೇಲೂ ಸಾಮಾನ್ಯವಾಗಿ ಭಾವಾರ್ಥದಲ್ಲಿ "ವುದು" ಪ್ರತ್ಯಯ ಬರುವುದು. ಕೆಲವು ಧಾತುಗಳು ಧಾತುಸ್ವರೂಪದಲ್ಲೇ ಇರುವುವು. ಮತ್ತೆ ಕೆಲವು ಧಾತುಗಳ ಆದಿ ಸ್ವರವು ದೀರ್ಘವಾಗುವುದು.

ಉದಾ.

* "ವುದು" ಪ್ರತ್ಯಯಕ್ಕೆ—ಹುಟ್ಟುವುದು, ನಡೆವುದು, ಕರೆವುದು, ಮಾಡುವುದು, ಕೇಳುವುದು, ಹೇಳುವುದು.

ಧಾತುಸ್ವರೂಪಕ್ಕೆ—ಹುಟ್ಟು, ನಡೆ, ನುಡಿ, ಓದು, ತಪ್ಪು, ಬೆಳೆ, ಕಟ್ಟು, ಗುದ್ದು, ಬೀಳು, ಬದುಕು, ಉರಿ.

ದೀರ್ಘಕ್ಕೆ—ಕೆಡು, ಕೇಡು ; ಬಿಡು, ಬೀಡು.

(2) ಇತರ ಪ್ರತ್ಯಯಗಳು.--

† ಇಕೆ—ಬಾಳಿಕೆ, ನಂಬಿಕೆ, ಹೊಗಳಿಕೆ, ಹೋಲಿಕೆ, ಎಚ್ಚರಿಕೆ, ಆಳಿಕೆ, ಅಂಜಿಕೆ, ನಾಚಿಕೆ, ಬಳಲಿಕೆ, ಬೆದರಿಕೆ.

---

* ಓಣ ಎಂಬ ಪ್ರತ್ಯಯವು ವಾಡಿಕೆಯಲ್ಲಿ ಉಂಟು, ಉದಾ.—ಕರೆಯೋಣ, ಓಡೋಣ. ವುದು ಎಂಬುದಕ್ಕೆ ಉವದು ಎಂಬುದು ವಾಡಿಕೆ. ಉದಾ.—ಕರೆಯುವುದು, ನುಡಿಯುವುದು.

† ಕೆಲವರು ಬಾಳುವಿಕೆ, ಆಳುವಿಕೆ ನಿಲ್ಲುವಿಕೆ ಬರುವಿಕೆ ಎಂಬಂತೆ ವಿಕೆ ಪ್ರತ್ಯಯವನ್ನೂ ಸೇರಿಸುತ್ತಾರೆ.

ಇಗೆ—ಉಡಿಗೆ, ತೊಡಿಗೆ, ಅಡಿಗೆ, ಹೆಂಗೆ, ಮುತ್ತಿಗೆ, ಹಾಸಿಗೆ.
ಅವು—ಕಳವು, ಬರವು, ಸೆಳವು, ಮರವು, ಗೆಲವು, ನಿಲವು, ಒಲವು.
ವು—ಸಾವು, ನೋವು, ಮೇವು, ಸುಳಿವು, ದಣಿವು, ಅರಿವು.
ತ—ಕುಣಿತ, ತಿವಿತ, ಇರಿತ, ಒಗೆತ, ನೆಗೆತ, ಮೆರೆತ.
ವಳಿ—ನಡೆವಳಿ, ಸಲುವಳಿ, ಕೊಡುವಳಿ, ತರುವಳಿ, ಹಿಡುವಳಿ.
*ಟ—ಆಟ, ನೋಟ, ಓಟ, ಮಾಟ, ಕಾಟ, ಊಟ.
ಅಲು—ಮುಗ್ಗಲು, ಬಿಕ್ಕಲು, ಒಣಗಲು, ಜಾರಲು.
ಎ—ನಗೆ, ಹೊರೆ.
ಅತೆ—ಅಳತೆ, ನಡತೆ.
ಅಪು—ನೆನಪು, ಹೊಳಪು.
ಅ—ಎಚ್ಚರ, ಬೇಸರ, ಸಾಲ, ಸೋಲ.
ಅಕೆ—ಮೊಳಕೆ, ಬೆರಕೆ.
ವಳಿಕೆ—ಬೆಳೆವಳಿಕೆ, ತಿಳಿವಳಿಕೆ.
ವಣಿಗೆ—ಮೆರೆವಣಿಗೆ, ಬರೆವಣಿಗೆ.
ಇತ—ಒಪ್ಪಿತ, ತಪ್ಪಿತ.
ಗೆ—ಬೇಗೆ, ನಂಬುಗೆ.
ಅಣಿ—ಒಕ್ಕಣಿ, ಹರಗಣಿ.

(3) ಹಳಗನ್ನಡದ ಕೆಲವು ಕೃದಂತಭಾವನಾಮಗಳು ಹೊಸಗನ್ನಡದಲ್ಲಿ ವ್ಯತ್ಯಾಸವನ್ನು ಹೊಂದಿರುವುವು.

ಉದಾ.

ಪಳ್ಗೆ- ಪಳಿಗೆ, ಸಲ್ಗೆ-ಸಲಿಗೆ, ನೋಂಪಿ-ನೋಹಿ, ಕಾಣ್ಕೆ-ಕಾಣಿಕೆ, ಒಲ್ಮೆ-ಒಲುಮೆ.

31. ಕೃದಂತಾವ್ಯಯ.—ಧಾತುವಿನ ಮೇಲೆ ದು, ಉತ್ತ, ಅದೆ, ಅಲು, ದರೆ, ಅ ಎಂಬ ಪ್ರತ್ಯಯಗಳು ಸೇರಿದರೆ ಅವ್ಯಯ ಕೃದಂತಗಳಾಗುವುವು. ಅವುಗಳು ಪೂರ್ಣಕ್ರಿಯೆಗೆ ವಿಶೇಷಣವಾಗಿರುವುವು. ಅವುಗಳಲ್ಲಿ ಕೆಲವು ಏಕಕರ್ತೃಕಗಳು ; ಕೆಲವು ಭಿನ್ನಕರ್ತೃಕಗಳು.

---

* ಇಲ್ಲಿ ಆಡು ಮೊದಲಾದ ಧಾತುಗಳ ಡುಕಾರಕ್ಕೆ ಲೋಪಬರುತ್ತದೆ.

(1) ಏಕಕರ್ತೃಕಗಳು.—ಒಂದು ಕರ್ತೃವಿನಿಂದ ಎರಡು ಕ್ರಿಯೆಗಳುಂಟಾದಾಗ ಮೊದಲುಹೇಳುವ ಕ್ರಿಯೆಯಲ್ಲಿ ಪೂರ್ವಕಾಲ ತೋರಿದರೆ ಆ ಧಾತುವಿನಮೇಲೆ "ದು" ಪ್ರತ್ಯಯವೂ, ಏಕಕಾಲ ತೋರಿದರೆ "ಉತ್ತ"* ಎಂಬ ಪ್ರತ್ಯಯವೂ, ನಿಷೇಧವು ತೋರಿದರೆ "ಅದೆ" ಎಂಬ ಪ್ರತ್ಯಯವೂ, ಪ್ರಯೋಜನ ತೋರಿದರೆ "ಅಲು" ಅಥವಾ "ಅಲಿಕ್ಕೆ" ಎಂಬ ಪ್ರತ್ಯಯವೂ ಬರುವುವು. ದ್ವಿಲಘುವಲ್ಲದ ಉಕಾರಾಂತ ಧಾತುಗಳಮೇಲೆ "ದು" ಪ್ರತ್ಯಯಕ್ಕೆ "ಇ" ಪ್ರತ್ಯಯ ಬರುವುದು. "ದು" "ದರೆ" ಎಂಬ ಪ್ರತ್ಯಯಗಳು ಸೇರುವಾಗ "ದ" ಪ್ರತ್ಯಯದ ಕಾರ್ಯಗಳು ಬರುವುವು.

ಉದಾ.

† ಪೂರ್ವಕಾಲಕ್ಕೆ—ನಾನು ನುಡಿದು ಹೋದೆನು.
ಹಕ್ಕಿ ಹಾರಿ ಹೋಯಿತು.
ಏಕಕಾಲಕ್ಕೆ—ನಾನು ನುಡಿಯುತ್ತ ಹೋದೆನು.
ನಿಷೇಧಕ್ಕೆ—ನಾನು ನುಡಿಯದೆ ಹೋದೆನು.
ಪ್ರಯೋಜನಕ್ಕೆ—ನಾನು ನುಡಿಯಲು (ನುಡಿಯಲಿಕ್ಕೆ) ಹೋದೆನು.

(2) ಭಿನ್ನಕರ್ತೃಗಳು—ಬೇರೆ ಬೇರೆ ಕರ್ತೃಗಳಿಂದ ಎರಡು ಕ್ರಿಯೆಗಳುಂಟಾದಾಗ, ಮೊದಲು ಹೇಳುವ ಕ್ರಿಯೆಯಲ್ಲಿ ಕಾರಣತೋರಿದರೆ ಆ ಧಾತುವಿನಮೇಲೆ "ಅಲು" ಅಥವಾ "ದು" ಪ್ರತ್ಯಯವೂ, ಏಕಕಾಲ ತೋರಿದರೆ "ಉತ್ತ" "ದು" "ಅದೆ" ಎಂಬ ಪ್ರತ್ಯಯಗಳಮೇಲೆ "ಇರಲು" "ಇರಲಾಗಿ" ಎಂಬ ಪ್ರತ್ಯಯಗಳೂ, ಆಗತಾನೇ ನಡೆಯಿತೆಂಬ ಅರ್ಥ ತೋರಿದರೆ "ವುದೂ" ಎಂಬ ಪ್ರತ್ಯಯವೂ ಪಕ್ಷಾರ್ಥ ತೋರಿದರೆ "ದರೆ" ಎಂಬ ಪ್ರತ್ಯಯವೂ, ಭಾವಾರ್ಥ ತೋರಿದರೆ "ಅ" ಎಂಬ ಪ್ರತ್ಯಯವೂ ಬರುವುವು.

---

* ಉತ್ತ ಎಂಬುದಕ್ಕೆ ಉತ್ತಾ ಎಂತಲೂ, ವುದೂ ಎಂಬುದಕ್ಕೆ ವುತ್ತಲೂ ಎಂತಲೂ, ವಾಡಿಕೆಯುಂಟು.

† ವಾಕ್ಯದಲ್ಲಿ ಅನೇಕ ಕ್ರಿಯೆಗಳು ಇದ್ದರೆ ಎರಡೆರಡು ಕ್ರಿಯೆಗಳನ್ನೇ ಹಿಡಿಸಿಕೊಂಡು ಅನ್ವಯಿಸಿಕೊಳ್ಳಬೇಕು. ಉದಾ.—ನಾನು ಬರೆದುಕೊಟ್ಟು ಕಳುಹಿಸುತ್ತಾ ಇದ್ದೆನು.

ಕಾರಣಕ್ಕೆ—ಗುರು ಬೋಧಿಸಲು ಶಿಷ್ಯನು ಕಲಿತನು.
ಮಳೆ ಬಿದ್ದು ಹೊಳೆ ಹೆಚ್ಚಿತು.
ಅವನು ಕಾಲುಜಾರಿ ಬಿದ್ದನು.

ಏಕಕಾಲಕ್ಕೆ—ಅವನು ಬರುತ್ತಿರಲು (ಬರುತ್ತಿರಲಾಗಿ) ನಾನು ಕಂಡೆನು.
ನಾನು ತಡೆದಿರಲು (ತಡೆದಿರಲಾಗಿ) ಅವನು ಮೇಲೆ ಬಿದ್ದನು.
ನೀನು ನುಡಿಯದಿರಲು (ನುಡಿಯದಿರಲಾಗಿ) ನನಗೆ ಕೋಪ ಬಂದಿತು.

ಆಗತಾನೇ ನಡೆದುದಕ್ಕೆ.*—ನಾನು ಕೇಳುವುದೂ (ಕೇಳುತ್ತಲೂ) ಅವನು ಕೊಟ್ಟನು.

ಪಕ್ಷಾರ್ಥಕ್ಕೆ*—ನೀನು ಹೇಳಿದರೆ ನಾನು ಕೊಡುತ್ತೇನೆ,

ಭಾವಾರ್ಥಕ್ಕೆ*—ಅವನು ನನ್ನನ್ನು ಹೋಗಹೇಳಿದನು, ಬರಮಾಡಿದನು, ಮಾಡಗೊಡಿಸನು (ಕೊಡಿಸು ಎಂಬ ಕಡೆ ಗಕಾರಾದೇಶ ಬರುವುದು.)

---

* ವುದೂ, ಉತ್ತಲೂ, ದರೆ, ಅ ಎಂಬ ಪ್ರತ್ಯಯಗಳು ಏಕ ಕರ್ತೃಕಗಳಾಗಿಯೂ ಇರುವುದುಂಟು, ಉದಾ.—ನಾನು ಹೋಗುವುದೂ ಅವನನ್ನು ಕಂಡೆನು. ಅವನು ಏಳುತ್ತಲೂ ಮುಖವನ್ನು ತೊಳೆದನು. ನಾನು ಬಂದರೆ ನಿನ್ನನ್ನು ಕಾಣುವೆನು. ನನಗೆ ಅವನು ಹೇಳಬಂದನು. ಅವನು ಕೆಲಸವನ್ನು ಮಾಡತೊಡಗಿದನು.

6. ತದ್ಧಿತಾಂತ ಪ್ರಕರಣ.

32. ನಾಮಪದಗಳಮೇಲೆ ಬೇರೆಬೇರೆ ಅರ್ಥಗಳಲ್ಲಿ ತದ್ಧಿತ ಪ್ರತ್ಯಯಗಳು ಸೇರಿದರೆ ತದ್ಧಿತಾಂತಗಳಾಗುವುವು. ಅವು ಸೇರುವಾಗ ವಿಭಕ್ತಿಪ್ರತ್ಯಯಗಳಿಗೆ ಪ್ರಾಯಶಃ ಲೋಪ ಬರುವುದು.

ತದ್ಧಿತಾಂತಗಳಲ್ಲಿ ತದ್ಧಿತಾಂತನಾಮ, ತದ್ಧಿತಾಂತಭಾವನಾಮ, ತದ್ಧಿತಾಂತಾವ್ಯಯ ಎಂದು ಮೂರುವಿಧ.

33. ತದ್ಧಿತಾಂತನಾಮ.—ನಾಮಪದಗಳಮೇಲೆ "ವಂತ" "ಇಗ" ಗಾರ" ಮುಂತಾದ ಪ್ರತ್ಯಯಗಳು ಸೇರಿದರೆ ತದ್ಧಿತಾಂತ ನಾಮಗಳಾಗುವುವು.

ಉದಾ.

ಪ್ರತ್ಯಯ.	ಉದಾ.	ವಿಗ್ರಹವಾಕ್ಯ ಅಥವಾ ಅರ್ಥ.*
(1) ಪ್ರಥಮಾಂತದಮೇಲೆ ವಂತ ಆಳಿ	ಗುಣವಂತ, ಹಣವಂತ, ಮಾತಾಳಿ,	ಗುಣವು ಇವನಲ್ಲಿ ಉಂಟು. ಮಾತು ಸ್ವಭಾವವಾಗಿ ಉಳ್ಳವನು.
(2) ದ್ವಿತೀಯಾಂತದಮೇಲೆ ಇಗ	ಕೇಡಿಗ, ದವಸಿಗ, ಗಂದಿಗ, ಕನ್ನಡಿಗ.	ಕೇಡನ್ನ ಮಾಡುವವನು. ದವಸವನ್ನು ಮಾರುವವನು. ಕನ್ನಡವನ್ನು ತಿಳಿದವನು.
(3) ದ್ವಿತೀಯಾಂತದಮೇಲೆ ಗಾರ	ಕಂಚುಗಾರ, ಬಳೆಗಾರ, ಮೋಸಗಾರ, ಹಣಗಾರ, ಬಲಗಾರ, ಬೇಟೆಗಾರ, ಪಾಲುಗಾರ.	ಸಂದರ್ಭಾನುಸಾರ ಅರ್ಥ ಹೇಳಬೇಕು.

* ವಿಗ್ರಹವಾಕ್ಯವೆಂದರೆ, ತದ್ಧಿತಾಂತ ಮತ್ತು ಸಮಾಸಗಳಲ್ಲಿ ಸೇರಿರುವ ಪದಗಳನ್ನು ಅರ್ಥ ತೋರುವಂತೆ ಬಿಡಿಸಿ ಹೇಳುವುದು.

ಪ್ರತ್ಯಯ.	ಉದಾ.	ವಿಗ್ರಹವಾಕ್ಯ ಅಥವಾ ಅರ್ಥ.
(4) ದ್ವಿತೀಯಾಸಪ್ತಮ್ಯಂತಗಳಮೇಲೆ ಕಾರ	ಕೋಲುಕಾರ, ಓಲೆಕಾರ, ಹರಿಕಾರ, ಗುರಿಕಾರ.	ಸಂದರ್ಭಾನುಸಾರ ಅರ್ಥಹೇಳಬೇಕು.
(5) ದ್ವಿತೀಯಾಂತದಮೇಲೆ ಆಡಿಗ, ವಾಳ	ಹೂವಾಡಿಗ, ಹಾವಾಡಿಗ. ಮಡಿವಾಳ.	
(6) ದ್ವಿತೀಯಾಂತದಮೇಲೆ ಅನೆಯ	ಒಂದನೆಯ, ಹತ್ತನೆಯ, ಅಷ್ಟನೆಯ, ಇಷ್ಟನೆಯ, ಮೊದಲನೆಯ.	ಸ್ಥಾನನಿರ್ದೇಶ.
(7) ಸಪ್ತಮ್ಯಂತದಮೇಲೆ ಅ	ಮೂಡಲ, ಪಡವಲ, ಅಲ್ಲಿಯ, ಎಲ್ಲಿಯ, ಅತ್ತಲ, ಇತ್ತಲ, ಕಡೆಯ.	ಸ್ಥಾನನಿರ್ದೇಶ.
(8) ಸಪ್ತಮ್ಯಂತದಮೇಲೆ ಇನ (ಅಥವಾ ಅಣ)	ಮೇಲಿನ, ಕೆಳಗಿನ, ಹೊರಗಿನ, ಹಿಂದಿನ, ಮುಂದಿನ ಅಂದಿನ, ಆಗಿನ, ಮೇಲಣ, ಕೆಳಗಣ, ಮುಂತಾದುವು.	ಸ್ಥಾನ, ಕಾಲ ನಿರ್ದೇಶ.

ಅನೆಯ, ಅ, ಇನ, ಅಣ—ಈ ಪ್ರತ್ಯಯಗಳ ಮೇಲೆ ಪುಂಸ್ತ್ರೀ ನಪುಂಸಕೈಕವಚನ ಬಹುವಚನಗಳಲ್ಲಿ ಅವನು ಮುಂತಾದ ಪ್ರತ್ಯಯಗಳು ಸೇರಿ ಪ್ರಾತಿಪದಿಕಗಳಾಗುವುವು.

ಉದಾ.

ಹತ್ತನೆಯವನು, ಮೂಡಲವಳು, ತೆಂಕಲದು, ಹಿಂದಿನವರು, ಅಲ್ಲಿಯವು, ಮೇಲಣವನು.

(9) ಷಷ್ಠ್ಯಂತದಮೇಲೆ ಇತಿ.

ಉದಾ.

ಅರಸಿತಿ (=ಅರಸನ ಹೆಂಡತಿ), ಬೀಗಿತಿ, ಹೆಗ್ಗಡಿತಿ, ತಳವಾರಿತಿ.

(10) ಪ್ರಾತಿಪದಕಗಳ ಮೇಲೆ ಸೇರುವ ಸ್ತ್ರೀ ಪ್ರತ್ಯಯಗಳು:—

ಇತಿ, ಇತ್ತಿ, ಗಿತ್ತಿ, ಎ, ಇ—ಬ್ರಾಹ್ಮಣಿತಿ, ಕುಂಬಾರಿತಿ ;

ಒಕ್ಕಲಗಿತ್ತಿ, ಗಾಣಿಗಿತ್ತಿ, ಹೂವಾಡಿಗಿತ್ತಿ; ಬೆಸ್ತಗಿತ್ತಿ, ಅರಸಗಿತ್ತಿ, ಸೂಲಗಿತ್ತಿ; ಗುಣವಂತೆ, ಜಾಣೆ, ಹೆಡ್ಡೆ, ಚದುರೆ; ಮುದುಕಿ, ಹುಡುಗಿ, ಕರಿಗಿ.

34, ತದ್ಧಿತಾಂತ ಭಾವನಾಮ.—

(1) ಷಷ್ಠೀವಿಭಕ್ತ್ಯಂತದಮೇಲೆ ಭಾವಾರ್ಥದಲ್ಲಿ ತನ್ನ, ಇಕೆ, ಉ, ಎಂಬ ಪ್ರತ್ಯಯಗಳು ಸೇರಿದರೆ ತದ್ಧಿತಾಂತ ಭಾವನಾಮಗಳಾಗುವುವು.

ಉದಾ.

ಜಾಣನ ಭಾವ=ಜಾಣತನ; ಹೀಗೆಯೇ ಹೆಡ್ಡತನ, ಶೂರತನ, ಅರಸುತನ; ಗೌಡಿಕೆ, ಬ್ರಾಹ್ಮಣಿಕೆ; ಕಿವುಡು, ಕುರುಡು, ಸೊತ್ತು, ಕುಳ್ಳು ಹೆಡ್ಡು, ಮುಂತಾದುವು.

(2) ಗುಣವಾಚಕಗಳಿಗೆ " ತನ " ಪ್ರತ್ಯಯವು ಸೇರುವಾಗ ಕೊನೆಯ ಅಕ್ಷರಕ್ಕೂ ಲಿಂಗತ್ರಯದಲ್ಲಿ ಬರುವ ಪ್ರತ್ಯಯಗಳಿಗೂ ಲೋಪ ಬರುವುದು. ಆಗ ಕಡೆಯಲ್ಲಿ ಇಕಾರವಿದ್ದರೆ ನಡುವೆ ಅಕಾರಾಗಮ ಬರುವುದು.

ಉದಾ.

ದೊಡ್ಡವನ ಭಾವ=ದೊಡ್ಡತನ; ಹೀಗೆಯೇ ಚಿಕ್ಕತನ, ಸಣ್ಣತನ.
ಹಿರಿಯವನ ಭಾವ=ಹಿರಿ+ಅ+ತನ=ಹಿರಿಯತನ; ಹೀಗೆಯೇ ಕಿರಿಯತನ

(3) ಹಳಗನ್ನಡದ ಕೆಲವು ತದ್ಧಿತಾಂತ ಭಾವನಾಮಗಳು ಹೊಸಗನ್ನಡದಲ್ಲಿ ವಿಕಾರವನ್ನು ಹೊಂದುವುವು.

ಉದಾ.

ಕರ್ಪು=ಕಪ್ಪು; ತೆಳ್ಪು=ತೆಳುವು; ತಣ್ಪು=ತಂಪು; ನುಣ್ಪು=ನುಣುಪು; ಪೆರ್ಮೆ=ಹೆಮ್ಮೆ,

35. ತದ್ಧಿತಾಂತಾವ್ಯಯ.—ನಾಮಪದಗಳ ಮೇಲೆ " ಅಂತೆ " ಮೊದಲಾದ ಪ್ರತ್ಯಯಗಳು ಸೇರಿದರೆ ತದ್ಧಿತಾಂತಾವ್ಯಯಗಳಾಗುವುವು. ಈ ಪ್ರತ್ಯಯಗಳು ಸೇರುವಾಗ ವಿಭಕ್ತಿ ಪ್ರತ್ಯಯಕ್ಕೆ ಲೋಪವಿಲ್ಲ.

(1) ಹೋಲಿಸುವಾಗ ಷಷ್ಠ್ಯಂತದಮೇಲೆ ಅಂತೆ ಮೊದಲಾದ ಪ್ರತ್ಯಯಗಳು ಬರುವುವು.

ಉದಾ.

ಚದ್ರನಂತೆ, ಅವನಂತೆ, ಸೂರ್ಯನಹಾಗೆ, ಚಂದ್ರನೋಪಾದಿಯಲ್ಲಿ.

(2) ಅವಧಿಯನ್ನು ಹೇಳುವಾಗ, ಷಷ್ಠ್ಯಂತದಮೇಲೆ ವರೆಗೆ, ತನಕ ಎಂಬ ಪ್ರತ್ಯಯಗಳು ಬರುವುವು.

ಉದಾ.

ಊರಿನವರೆಗೆ, ಸಂಜೆಯವರೆಗೆ, ಊರಿನತನಕ, ಸಂಜೆಯತನಕ.

(3) ಪ್ರಯೋಜನಾರ್ಥದಲ್ಲಿ ಓಸುಗ ಮುಂತಾದುವೂ ತಾರತಮ್ಯದಲ್ಲಿ ಇಂತ ಎಂಬ ಪ್ರತ್ಯಯವೂ ಚತುರ್ಥೀವಿಭಕ್ತ್ಯಂತದ ಮೇಲೆ ಬರುವುವು.

ಉದಾ.

ಅವನಿಗೋಸುಗ, ಅವನಿಗೋಸ್ಕರ ; ಅದಕ್ಕೆ ಸಲುವಾಗಿ, ಅದಕ್ಕಾಗಿ ; ಇದಕ್ಕಿಂತ ಅದು ದೊಡ್ಡದು ; ರಾಮನಿಗಿಂತ ಕೃಷ್ಣನು ಜಾಣನು.

7. ಸಮಾಸ ಪ್ರಕರಣ.

36. ಸಮಾಸ ಅದರ ವಿಭಾಗಗಳು.—ಎರಡು ಅಥವಾ ಅನೇಕ ಪದಗಳು ಅರ್ಥಕ್ಕನುಸಾರವಾಗಿ ಸೇರಿ ಒಂದು ಪದವಾಗುವುದೇ ಸಮಾಸ ವೆನಿಸುವುದು. ಸಮಾಸದಲ್ಲಿ ಸೇರಿದ್ದ ವಿಭಕ್ತಿ ಪ್ರತ್ಯಯಗಳಿಗೆ ಲೋಪ ಬರುವುದು ; ಮತ್ತು ಉತ್ತರಪದದ ಆದಿಯಲ್ಲಿರುವ ಕ, ತ, ಪ ಗಳಿಗೆ ಕ್ರಮವಾಗಿ ಗ, ದ, ಬ ಗಳು ಪ್ರಾಯಶಃ ಆದೇಶವಾಗಿ ಬರುವುವು.

ಉದಾ.

ವಿಗ್ರಹವಾಕ್ಯ.	ಸಮಾಸ.
ಮಳೆಯ ಕಾಲ	ಮಳೆಗಾಲ
ಬೆಟ್ಟದ ತಾವರೆ	ಬೆಟ್ಟದಾವರೆ
ಆಕಾಶದ ಪುಟ್ಟಿ	ಆಕಾಶಬುಟ್ಟಿ
ನೆರೆಯ ಮನೆಯ ಸುದ್ದಿ	ನೆರೆಮನೆಸುದ್ದಿ
ಕೆರೆಯೂ ಕಟ್ಟೆಯೂ ಬಾವಿಯೂ	ಕೆರೆಕಟ್ಟೆಬಾವಿ

ಕನ್ನಡದಲ್ಲಿ ತತ್ಪುರುಷ, ಕರ್ಮಧಾರಯ, ಅಂಶಿ, ದ್ವಂದ್ವ, ಬಹುವ್ರೀಹಿ ಎಂದು ಸಮಾಸಗಳು ಐದು ವಿಧ. *

37. ತತ್ಪುರುಷ ಸಮಾಸ.—ಪೂರ್ವಪದೋತ್ತರಪದಗಳಲ್ಲಿ ಉತ್ತರಪದದ ಅರ್ಥವು ಪ್ರಧಾನವಾಗಿದ್ದರೆ ತತ್ಪುರುಷ ಸಮಾಸವಾಗು ವುದು. ಈ ಸಮಾಸದಲ್ಲಿ ಯಾವ ವಿಭಕ್ತಿಗೆ ಲೋಪ ಬರುವುದೋ ಆ ವಿಭಕ್ತಿಯ ಹೆಸರು ಸಮಾಸಕ್ಕೆ ಬರುವುದು.

ಉದಾ.

ವಿಗ್ರಹವಾಕ್ಯ	ಸಮಾಸ	ಹೆಸರು.
ಹಣ್ಣನ್ನು ಮಾರುವವನು	ಹಣ್ಣುಮಾರುವವನು	ದ್ವಿತೀಯಾತತ್ಪುರುಷ †
ಪುಸ್ತಕವನ್ನು ಬರೆದವನು	ಪುಸ್ತಕಬರೆದವನು	
ಕೆಲಸವನ್ನು ಮಾಡಿ	ಕೆಲಸಮಾಡಿ	

* ಕ್ರಿಯಾಸಮಾಸ, ಗಮಕಸಮಾಸ, ಎಂಬ ಸಮಾಸಗಳೂ ಇವುಗಳಲ್ಲಿಯೇ ಸೇರು ತ್ತವೆ.

† ದ್ವಿತೀಯಾತತ್ಪುರುಷಸಮಾಸವನ್ನು ಕೆಲವರು ಕ್ರಿಯಾಸಮಾಸವೆನ್ನುವರು.

ವಿಗ್ರಹವಾಕ್ಯ.	ಸಮಾಸ.	ಹೆಸರು.
ಮಲ್ಲಿಗೆಯ ಹೂ	ಮಲ್ಲಿಗೆಹೂ	ಷಷ್ಠೀತತ್ಪುರುಷ
* ಬೇಲದ ಮರ	ಬೇಲದಮರ	
* ಮಾವಿನ ಮರ	ಮಾವಿನಮರ	
ಅಣಿಯಲ್ಲಿ ಜಾಣ	ಅಣಿಜಾಣ	ಸಪ್ತಮೀತತ್ಪುರುಷ
ಹರಟೆಯಲ್ಲಿ ಮಲ್ಲ	ಹರಟೆಮಲ್ಲ	

ತತ್ಪುರುಷಸಮಾಸದಲ್ಲಿ ಇವು ಮೂರೇ ಕನ್ನಡದಲ್ಲಿ ಪ್ರಸಿದ್ಧ ; ಮಿಕ್ಕ ವಿಭಕ್ತಿಗಳಲ್ಲಿ ತತ್ಪುರುಷವು ಅಪೂರ್ವ.

38. ಕರ್ಮಧಾರಯಸಮಾಸ.—ಲಿಂಗ, ವಿಭಕ್ತಿ, ವಚನಗಳಲ್ಲಿ ಸಮಾನವಾದ ವಿಶೇಷಣವು ವಿಶೇಷ್ಯದೊಡನೆ ಸಮಾಸವಾಗುವುದು ಕರ್ಮಧಾರಯಸಮಾಸವೆನಿಸುವುದು. ಇದರಲ್ಲಿಯೂ ಉತ್ತರಪದದ ಅರ್ಥವು ಪ್ರಧಾನವಾಗಿರುವುದು. ಪೂರ್ವಪದವು ಗುಣವಾಚಕ, ಸಂಖ್ಯಾವಾಚಕ, † ಸರ್ವನಾಮ † ಕೃದಂತಗಳಲ್ಲಿ ಒಂದಾಗಿರುವುದು. ಉತ್ತರಪದವು ಸಂಸ್ಕೃತ ಪದವೂ ಆಗಿರಬಹುದು.

(1) ಕರ್ಮಧಾರಯದಲ್ಲಿ ಪೂರ್ವಪದವು ಗುಣವಾಚಕವಾಗಿದ್ದರೆ ಅದರ ಲಿಂಗಸೂಚಕವಾದ ಪ್ರತ್ಯಯಗಳಿಗೆ ಲೋಪವೂ, ಕೊನೆಯಲ್ಲಿ ಉಳಿವ ಸ್ವರವು ಇಕಾರವಾಗಿದ್ದರೆ ಅಕಾರಾಗಮವೂ ಬರುವುವು. ಎಳದು, ಹಳದು, ಎಂಬ ಶಬ್ದಗಳು ಎಳೆಯ, ಹಳೆಯ ಎಂಬ ರೂಪಗಳನ್ನು ಹೊಂದುವುವು.

(2) ಅದು, ಇದು, ಯಾವುದು ಎಂಬ ಸರ್ವನಾಮಗಳ ಲಿಂಗತ್ರಯ ರೂಪಗಳು ಕ್ರಮವಾಗಿ ಆ, ಈ, ಯಾವ ಎಂಬ ರೂಪಗಳನ್ನು ಹೊಂದುವುವು. ಆಗ ಉತ್ತರಪದದ ಆದಿಸ್ವರವು ಅ, ಆ, ಐ, ಔ ವರ್ಣಗಳಲ್ಲಿ ಒಂದಾಗಿದ್ದರೆ ಪ್ರಕೃತಿಭಾವವೂ, ಇ, ಈ, ಎ, ಏ, ವರ್ಣಗಳಲ್ಲಿ ಒಂದಾಗಿದ್ದರೆ ಯಕಾರಾಗಮವೂ, ಉ, ಊ, ಒ, ಓ, ವರ್ಣಗಳಲ್ಲಿ ಒಂದಾ

* ಹೀಗೆ ವಿಭಕ್ತಿಗೆ ಲೋಪವಿಲ್ಲದೆ ಇರುವುದೂ ಉಂಟು.

† ಪೂರ್ವಪದವು ಸಂಖ್ಯಾವಾಚಕವಾಗಿದ್ದರೆ ದ್ವಿಗುಸಮಾಸವೆಂದೂ, ಸರ್ವನಾಮ ಅಥವಾ ಕೃದಂತವಾಗಿದ್ದರೆ ಗಮಕ ಸಮಾಸವೆಂದೂ ಕೆಲವರು ಹೇಳುತ್ತಾರೆ.

ಗಿದ್ದರೆ ವಕಾರಾಗಮವೂ, ಋ ವರ್ಣವಾಗಿದ್ದರೆ ರುಕಾರಾದೇಶವೂ ಬರುವುವು ಎಲ್ಲ ಎಂಬ ಶಬ್ದಕ್ಕೆ ಎಲ್ಲಾ ಎಂದು ದೀರ್ಘವೂ ಬರುವುದುಂಟು.

ಉದಾ.

ಗುಣವಾಚಕಕ್ಕೆ—ದೊಡ್ಡವನು (ಆದ) ಹುಡುಗನು=ದೊಡ್ಡಹುಡುಗನು
ಹೊಸದು (ಆದ) ಕನ್ನಡವು=ಹೊಸಗನ್ನಡವು
ಕಿರಿಯವಳು ಮಗಳು=ಕಿರಿಯಮಗಳು
ಹಿರಿಯವರು ಮಕ್ಕಳು=ಹಿರಿಯಮಕ್ಕಳು
ಎಳದು ಗಿಡವು=ಎಳೆಯ ಗಿಡವು
ಹಳದು ಬಟ್ಟೆ=ಹಳೆಯಬಟ್ಟೆ

ಸಂಖ್ಯಾವಾಚಕಕ್ಕೆ—ಮೂರುದಿಕ್ಕುಗಳು *
ನಾಲ್ಕು ಆನೆಗಳು=ನಾಲ್ಕಾನೆಗಳು *

ಸರ್ವನಾಮಕ್ಕೆ—ಅದು ಆಟ=ಆ ಆಟ
ಅವನು ಮನುಷ್ಯ=ಆ ಮನುಷ್ಯ
ಇದು ಪುಸ್ತಕ=ಈ ಪುಸ್ತಕ
ಇವಳು ಹೆಂಗಸು=ಈ ಹೆಂಗಸು
ಯಾವುದು ಕೆಲಸ=ಯಾವಕೆಲಸ
ಯಾರು ಜನರು=ಯಾವಜನರು
ಎಲ್ಲರು ಜನರು=ಎಲ್ಲ ಜನರು, ಎಲ್ಲಾ ಜನರು

ಕೃದಂತಕ್ಕೆ—ಓದುವವನು ಹುಡುಗ=ಓದುವ ಹುಡುಗನು
ಮಾಡಿದುದು ಕಾರ್ಯ=ಮಾಡಿದ ಕಾರ್ಯ
ಬರುವವರು ಜನರು=ಬರುವ ಜನರು

39. ಅಂಶಿಸಮಾಸ. †—ಪೂರ್ವಪದವು ಅಂಶವನ್ನೂ, ಉತ್ತರ ಪದವು ಅಂಶವುಳ್ಳ ವಸ್ತುವನ್ನೂ ತಿಳಿಸುತ್ತಿದ್ದರೆ ಅಂಶಿಸಮಾಸವೆನಿಸುವುದು. ಇದರಲ್ಲಿ ಪೂರ್ವಪದದ ಅರ್ಥವು ಪ್ರಧಾನವಾಗಿರುವುದು.

---

* ಒಟ್ಟು ತೋರುವಂತೆ ಹೇಳುವಾಗ ಮೂರು ದಿಕ್ಕು. ನಾಲ್ಕಾನೆ ಎಂಬಂತೆ ಬಹುವಚನ ಪ್ರತ್ಯಯಕ್ಕೆ ಲೋಪ ಬರುವುದೂ ಉಂಟು.

† ಇದನ್ನು ಕೆಲವರು ಅವ್ಯಯೀಭಾವವೆಂದು ಕರೆಯುತ್ತಾರೆ.

ಅಂಶಿಸಮಾಸದಲ್ಲಿ ಅಡಿ ಎಂಬ ಶಬ್ದದ ಕೊನೆಯ ಅಕ್ಷರಕ್ಕೆ ಬಿಂದುವೂ, ಮೇಗು, ಮುಂದು, ಹಿಂದು ಮೊದಲಾದ ಶಬ್ದಗಳ ಕೊನೆಯ ಅಕ್ಷರಕ್ಕೆ ಲೋಪವೂ ಬರುವುವು. ವಿಗ್ರಹವಾಕ್ಯದಲ್ಲಿ ಮೊದಲು ಹೇಳುವ ಪದವು ಸಮಾಸದಲ್ಲಿ ಉತ್ತರಪದವಾಗುವುದು.

ಉದಾ.

ಕಾಲು ಅಡಿ=ಅಂಗಾಲು	ಕೈಯ ಅಡಿ=ಅಂಗೈ
ಕೈಯ ಮೇಗು=ಮೇಗೈ	ಕಾಲ ಮೇಗು=ಮೇಗಾಲು
ಕೈಯ ಮುಂದು=ಮುಂಗೈ	ಕಾಲ ಮುಂದು=ಮುಂಗಾಲು
ಕಾರ ಹಿಂದು=ಹಿಂಗಾರು	ಕೆರೆಯ ಒಳಗು=ಒಳಗೆರೆ

40. ದ್ವಂದ್ವಸಮಾಸ.—ಸಹಯೋಗ ತೋರುವಂತೆ ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾಗುವುದು ದ್ವಂದ್ವ ಸಮಾಸವೆನಿಸುವುದು. ಈ ಸಮಾಸದಲ್ಲಿ ಉಭಯಪದಗಳ ಅರ್ಥಗಳೂ ಪ್ರಧಾನವಾಗಿರುವುವು. ಒಟ್ಟು ತೋರುವಂತೆ ಹೇಳಿದಾಗ ಸಮಾಸವು ಏಕವಚನಾಂತವಾಗುವುದು.

ಉದಾ.

ಆನೆಯೂ, ಕುದುರೆಯೂ=ಆನೆಕುದುರೆಗಳು
ಮರವೂ, ಗಿಡವೂ, ಬಳ್ಳಿಯೂ=ಮರಗಿಡ ಬಳ್ಳಿಗಳು
ಹಣ್ಣು, ಕಾಯಿ (ಇವುಗಳ ಒಟ್ಟು)=ಹಣ್ಣುಕಾಯಿ
ಹತ್ತು, ಒಂಭತ್ತು (ಇವುಗಳ ಒಟ್ಟು)=ಹತ್ತೊಂಬತ್ತು

41. ಬಹುವ್ರೀಹಿಸಮಾಸ.—ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾಗುವಾಗ ಅನ್ಯಪದಾರ್ಥವು ತೋರಿದರೆ ಆ ಸಮಾಸವು ಬಹುವ್ರೀಹಿ ಎನಿಸುವುದು. ಸಮಾನಾಧಿಕರಣ, ವ್ಯಧಿಕರಣ, ಸಂಖ್ಯೋಭಯಪದ, ವ್ಯತಿಹಾರಲಕ್ಷಣ ಎಂದು ಬಹುವ್ರೀಹಿ ನಾಲ್ಕುವಿಧ.

(1) ಸಮಾನಾಧಿಕರಣ ಬಹುವ್ರೀಹಿಯಲ್ಲಿ ಪೂರ್ವಪದದ ಅರ್ಥವು ಉತ್ತರಪದದ ಅರ್ಥಕ್ಕೆ ವಿಶೇಷಣವಾಗಿಯೂ, ಎರಡು ಪದಗಳೂ ಸಮಾನ ವಿಭಕ್ತ್ಯಂತಗಳಾಗಿಯೂ ಇರುವುವು.

ಉದಾ.

ಒರೆ (ಆದ) ಕಣ್ಣು (ಯಾರಿಗುಂಟೋ ಅವನು)=ಒರೆಗಣ್ಣ
ಸೊತ್ತು (ಆದ) ಕೈ (ಯಾರಿಗುಂಟೋ ಅವನು)=ಸೊತ್ತುಗೈಯ್ಯ

(2) ವ್ಯಧಿಕರಣಬಹುವ್ರೀಹಿಯಲ್ಲಿ ಪೂರ್ವಪದೋತ್ತರಪದಗಳು ಬೇರೆಬೇರೆ ವಿಭಕ್ತಿಗಳಿಂದ ಕೂಡಿರುವುವು.

ಉದಾ.

ಹೂ ಕಣ್ಣಿನಲ್ಲಿ ಯಾರಿಗುಂಟೋ ಅವನು=ಹೂಗಣ್ಣ
ಹಣೆಯಲ್ಲಿ ಕಣ್ಣು (ಯಾರಿಗುಂಟೋ ಅವನು)=ಹಣೆಗಣ್ಣ

(3) ಸಂಖ್ಯೋಭಯಪದಬಹುವ್ರೀಹಿಯಲ್ಲಿ ಎರಡು ಸಂಖ್ಯೆಗಳ ವಿಕಲ್ಪವಾಗಲಿ ಸಂಶಯವಾಗಲಿ ತೋರುತ್ತಿರುವುದು.

ಉದಾ.

ವಿಕಲ್ಪಕ್ಕೆ—ಎರಡು (ಅಥವಾ) ಮೂರು=ಎರಡುಮೂರು
ನಾಲ್ಕು (ಅಥವಾ) ಐದು=ನಾಲ್ಕಯ್ದು
ಸಂಶಯಕ್ಕೆ—ಎರಡೋ ? ಮೂರೋ ?=ಎರಡುಮೂರು
ನಾಲ್ಕೋ ? ಐದೋ ?=ನಾಲ್ಕಯ್ದು

(4) ವ್ಯತಿಹಾರಬಹುವ್ರೀಹಿಯಲ್ಲಿ ಒಂದೇ ವಿಧವಾದ ಕ್ರಿಯೆಯಿಂದ ಒಬ್ಬರಿಗೊಬ್ಬರು ಹೊಡೆದಾಡಿ ಮಾಡುವ ಜಗಳವು ತೋರುವುದು. ಇದರಲ್ಲಿ ಪೂರ್ವಪದದ ಕಡೆಯ ಸ್ವರಕ್ಕೆ ಆಕಾರವೂ, ಉತ್ತರಪದದ ಕಡೆಯ ಸ್ವರಕ್ಕೆ ಇಕಾರವೂ ಬರುವುವು.

ಉದಾ.

ಕೋಲಿನಿಂದ ಕೋಲಿನಿಂದ ಒಬ್ಬರನ್ನೊಬ್ಬರು ಹೊಡೆದಾಡುವುದು ಯಾವ ಜಗಳದಲ್ಲೋ ಅದು=ಕೋಲಾಕೋಲಿ.

ಹಣೆಯಿಂದ ಹಣೆಯಿಂದ ಒಬ್ಬರನ್ನೊಬ್ಬರು ಚಚ್ಚುವುದು ಯಾವ ಜಗಳದಲ್ಲೋ ಅದು=ಹಣಾಹಣಿ.

42. ಅರಿಸಮಾಸ.—ಮೇಲೆ ಹೇಳಿದ ಸಮಾಸಗಳಲ್ಲಿ ಸಾಮಾನ್ಯವಾಗಿ ಕನ್ನಡದ ಪದಕ್ಕೂ, ಸಂಸ್ಕೃತಪದಕ್ಕೂ ಸಮಾಸ ಮಾಡ

ಕೂಡದು. ಆದರೆ ಕ್ರಿಯಾಸಮಾಸ, ಕರ್ಮಧಾರಯಸಮಾಸಗಳಲ್ಲಿ ದೋಷವಿಲ್ಲ. ಬಿರುದಾವಳಿಯಲ್ಲಿ ಮತ್ತು ಪೂರ್ವಕವಿಗಳ ಕೆಲವು ಪ್ರಯೋಗಗಳಲ್ಲಿ ಮೇಲೆ ಹೇಳಿದ ಎಲ್ಲಾ ಸಮಾಸಗಳ ಅರಿಸಮಾಸವು ಕಂಡುಬರುವುದು.

ಉದಾ.

ಬಿರುದಾವಳಿಗೆ—ರಾಯಕೋಲಾಹಲ, ದಳಮುಖಾದಿತ್ಯ.

ಪೂರ್ವಕವಿಪ್ರಯೋಗಕ್ಕೆ—ದಳಪತಿ, ಮಂಗಳಾರತಿ, ಮಳೆಗಾಲ.

43. ಹಳಗನ್ನಡದ ಸಮಾಸ ಶಬ್ದಗಳು.—ಹಳಗನ್ನಡದ ಸಮಾಸ ಶಬ್ದಗಳಲ್ಲಿ ಕೆಲವು ವಿಕಾರವನ್ನು ಹೊಂದಿಯೂ, ಕೆಲವು ಹೊಂದದೆಯೂ, ಹೊಸಗನ್ನಡದಲ್ಲಿ ವಾಡಿಕೆಯಾಗಿರುವುವು.

ಉದಾ.

ಕೆಮ್ಮಣ್ಣು, ಕೇಸಕ್ಕಿ, ಕೆಂಜೆಡೆ, ನಿಟ್ಟುಸಿರು, ನಟ್ಟಡವಿ, ಕಟ್ಟಿರುವೆ, ಮನೆವಾರ್ತೆ, ಮೂಗಾವುದ, ಮುಕ್ಕೂಟ, ಮುಕ್ಕಣ್ಣ, ಒಕ್ಕಣ್ಣ, ಇತ್ತಂಡ, ಒಪ್ಪತ್ತು, ಅರಮನೆ, ಬೆಂಬೂದಿ, ಬಿರುಗಾಳಿ, ತೆಮ್ಮೊಡಲು, ಹನ್ನೊಂದು, ಹದಿಮೂರು, ಇಪ್ಪತ್ತು, ಎಂಬತ್ತು, ತೊಂಬತ್ತು, ಹೆಬ್ಬಾವು, ಒಳಬಾಗಿಲು, ತಣ್ಣೀರು, ಕಂಬನಿ, ಸುಡುಗಾಡು, ಉರಿಬಿಸಿಲು, ಹುರಿಗಡಲೆ, ಮುಂತಾದುವು.

44. ಸಂಸ್ಕೃತ ಸಮಾಸ ಶಬ್ದಗಳು.—ಸಂಸ್ಕೃತಸಮಾಸಶಬ್ದಗಳನ್ನು ಕನ್ನಡದ ಗ್ರಂಥಗಳಲ್ಲಿ ಸಾಮಾನ್ಯವಾಗಿ ಪ್ರಯೋಗಿಸುವುದರಿಂದ ಇಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟಿದೆ.

ಉದಾ.

(1) ತತ್ಪುರುಷ ಸಮಾಸಕ್ಕೆ—

ದ್ವಿತೀಯಾ—ಕಾಲಾತೀತ.	ಪಂಚಮೀ—ಚೋರಭಯ.
ತೃತೀಯಾ—ಹರಿತ್ರಾತ.	ಷಷ್ಠೀ—ರಾಜಬಲ.
ಚತುರ್ಥೀ—ಕುಂಡಲಹಿರಣ್ಯ.	ಸಪ್ತಮೀ—ರಣಧೀರ.

(2) ಕರ್ಮಧಾರಯ ಸಮಾಸಕ್ಕೆ—

ವಿಶೇಷಣಪೂರ್ವಪದ—ನೀಲಘಟ.

ವಿಶೇಷಣೋತ್ತರಪದ—ವೈಯ್ಯಾಕರಣಖಸೂಚಿ.

ವಿಶೇಷಣೋಭಯಪದ—ಭೋಜ್ಯೋಷ್ಣ.
ಉಪಮಾನಪೂರ್ವಪದ—ಮೇಘಶ್ಯಾಮ.
ಉಪಮಾನೋತ್ತರಪದ—ಪುರುಷವ್ಯಾಘ್ರ.
ಅವಧಾರಣಪೂರ್ವಪದ—ವಿದ್ಯಾಧನ.
ಸಂಭಾವನಾಪೂರ್ವಪದ—ವಿಂಧ್ಯಪರ್ವತ.
ಲುಪ್ತಮಧ್ಯಮಪದ—ದೇವಬ್ರಾಹ್ಮಣ.

(3) ಅವ್ಯಯೀಭಾವಸಮಾಸಕ್ಕೆ—
ನಿರ್ಮಕ್ಷಿಕ, ಅನುರೂಪ, ಪ್ರತಿವೃಕ್ಷ, ಯಥಾಶಕ್ತಿ.

(4) ದ್ವಿಗುಸಮಾಸಕ್ಕೆ—
ಪಂಚೇಂದ್ರಿಯಾಣಿ, ಸಪ್ತಾಂಗಾನಿ, ಪಂಚವಟಿ. ತ್ರಿಲೋಕಿ.

(5) ದ್ವಂದ್ವಸಮಾಸಕ್ಕೆ—
ರಾಮರಾವಣೌ, ಧನಕನಕವಸ್ತ್ರಾಣಿ, ಶೀತೋಷ್ಣ, ಅಶ್ವರಥ, ಸುಖ ದುಃಖ.

(6) ಬಹುವ್ರೀಹಿಸಮಾಸಕ್ಕೆ—
ಸಮಾನಾಧಿಕರಣ—ಪೀತಾಂಬರ, ದಿವ್ಯಸುಂದರಮೂರ್ತಿ.
ವ್ಯಧಿಕರಣ—ಚಕ್ರಪಾಣಿ, ಫಾಲಾಕ್ಷ.
ವ್ಯತಿಹಾರ—ಕೇಶಾಕೇಶಿ, ದಂಡಾದಂಡಿ.
ಸಹಪೂರ್ವಪದ—ಸಕುಟುಂಬ, ಸಪರಿವಾರ.
ದಿಗಂತರಾಳ—ದಕ್ಷಿಣಪೂರ್ವ, ಪಶ್ಚಿಮೋತ್ತರ.

8. ಅವ್ಯಯ ಪ್ರಕರಣ.

45. ನಾಮಪದಕ್ರಿಯಾಪದಗಳಂತೆ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಶಬ್ದಗಳಿಗೆ ಅವ್ಯಯಗಳೆಂದು ಹೆಸರು.

ಅವ್ಯಯಗಳಲ್ಲ ಸಂಪೂರ್ಣವಾದ ಅಥವಾ ಅಸಂಪೂರ್ಣವಾದ ಕ್ರಿಯೆಯನ್ನು ತಿಳಿಸುವ ಕ್ರಿಯಾರ್ಥಕಾವ್ಯಯಗಳೆಂದೂ, ಕ್ರಿಯಾಪದದ ಕಾಲ, ಸ್ಥಾನ, ರೀತಿ, ಅನುಕರಣ ಇವುಗಳನ್ನು ತಿಳಿಸುವ ಕ್ರಿಯಾವಿಶೇಷಣಾವ್ಯಯಗಳೆಂದೂ, ಎರಡು ಶಬ್ದಗಳ ಅಥವಾ ವಾಕ್ಯಗಳ ಸಂಬಂಧವನ್ನು ಸೂಚಿಸುವ ಸಂಬಂಧಸೂಚಕಾವ್ಯಯಗಳೆಂದೂ, ಸಂತೋಷ, ವ್ಯಸನ ಮುಂತಾದ ಮನೋಭಾವಗಳನ್ನು ಸೂಚಿಸುವ ಭಾವಸೂಚಕಾವ್ಯಯಗಳೆಂದೂ ನಾಲ್ಕು ವಿಧ.

ಕೃದಂತಾವ್ಯಯಗಳು ಕ್ರಿಯಾರ್ಥಕಾವ್ಯಯಗಳಲ್ಲಿಯೂ, ತದ್ಧಿತಾಂತಾವ್ಯಯಗಳು ಕ್ರಿಯಾವಿಶೇಷಣಾವ್ಯಯಗಳಲ್ಲಿಯೂ ಸೇರುತ್ತವೆ.

ಉದಾ.

ಸಂಪೂರ್ಣಕ್ರಿಯಾರ್ಥಕಾವ್ಯಯಕ್ಕೆ—ಉಂಟು, ಯಿಲ್ಲ; ಅಹುದು, ಅಲ್ಲ; ಬೇಕು, ಬೇಡ; ಸಾಕು.

ಅಸಂಪೂರ್ಣಕ್ರಿಯಾರ್ಥಕಾವ್ಯಯಕ್ಕೆ—ಹೇಳಿ, ಮಾಡಿ, ಕಂಡು, ಬಂದು, ನೋಡುತ್ತ, ತೋರುತ್ತ; ಪಡೆಯದೆ, ಕೊಡದೆ; ಅಡಿದರೆ, ಬೇಡಿದರೆ; ಹೋಗಲು, ಬರಲು; ಓದಲಿಕ್ಕೆ, ಬರೆಯಲಿಕ್ಕೆ; ಹೋಗ, ಬರ.

ಕ್ರಿಯಾವಿಶೇಷಣಾವ್ಯಯಕ್ಕೆ—

ಕಾಲಕ್ಕೆ—ಬಳಿಕ, ತರುವಾಯ, ಇನ್ನು, ಒಡನೆ, ಕೂಡಲೆ, ಬೇಗ.
ಸ್ಥಾನಕ್ಕೆ—ಸುತ್ತಲು.
ರೀತಿಗೆ—ಹಾಗೆ, ಹೀಗೆ, ಹೇಗೆ, ಅಂತು, ಇಂತು, ಎಂತು, ಅಂತೆ, ಬೇರೆ, ಕೆಂಪಗೆ, ಬೆಳ್ಳಗೆ, ಮೆಲ್ಲನೆ, ಮೆಲ್ಲಗೆ, ಸುಮ್ಮನೆ, ಸುಮ್ಮಗೆ.

ಅನುಕರಣಕ್ಕೆ—ಛಗ್ಗನೆ, ಧೊಪ್ಪನೆ, ಥಟ್ಟನೆ, ಫಳಫಳನೆ, ಛಟಛಟನೆ.

ಸಂಬಂಧಸೂಚಕಾವ್ಯಯಕ್ಕೆ—ಮತ್ತು, ಊ, ಆದರೆ, ಆದರೂ, ಒಂದಿಗೆ, ಸಂಗಡ, ಹೊರತು, ಅಲ್ಲದೆ, ಇಲ್ಲದೆ, ಇಲ್ಲವೇ, ಅಥವಾ, ಆದುದರಿಂದ

ಭಾವಸೂಚಕಾವ್ಯಯಕ್ಕೆ—ಅಃ, ಆಃ, ಅಹಹ, ಎ, ಏ, ಒ, ಓ, ಅ, ಆ, ಓಹೋ, ಹೋ, ಹೋಹೋ, ಅಯ್ಯೋ, ಎಲೆಲಾ, ಛೀ, ಅಕ್ಕಟಾ, ಫಡಫಡ, ಅಷ್ಟೇ, ಅಲ್ಲವೇ.

9. ತದ್ಭವ ಪ್ರಕರಣ

46. ಹೊಸಗನ್ನಡದಲ್ಲಿ ಅನೇಕ ಶಬ್ದಗಳು ಅಚ್ಚಗನ್ನಡವಾಗಿರುತ್ತವೆ. ಇವಕ್ಕೆ ದೇಶ್ಯಗಳೆಂದು ಹೆಸರು. ಇನ್ನೂ ಅನೇಕ ಶಬ್ದಗಳು ಪೂರ್ವಕಾಲದಿಂದಲೂ ಕನ್ನಡಕ್ಕೆ ಸಂಸ್ಕೃತಭಾಷೆಯಿಂದ ಬಂದು ಬೆರೆದಿರುತ್ತವೆ. ಈಚೀಚೆಗೆ ಹಿಂದುಸ್ಥಾನಿ, ಮಹಾರಾಷ್ಟ್ರ, ಇಂಗ್ಲಿಷ್ ಮುಂತಾದ ಅನ್ಯಭಾಷೆಗಳಿಂದಲೂ ಕೆಲವು ಶಬ್ದಗಳು ಸೇರಿವೆ.

ಉದಾ.

ದೇಶ್ಯಕ್ಕೆ—ತಂದೆ, ತಾಯಿ, ನೆಲ, ಹೊಲ, ಒಳ್ಳೆಯುದು, ನಾಲ್ಕು, ಹೇಳು, ಕೇಳು, ಬೆಳೆ, ನಡೆ, ಮುಂತಾದುವು.

ಸಂಸ್ಕೃತದಿಂದ ಬಂದ ಶಬ್ದಗಳಿಗೆ—ಮಾತೆ, ಭೂಮಿ, ಪಟ್ಟಣ, ನದಿ, ಪರ್ವತ, ಅಜ್ಜ, ದಯೆ, ವಿಪತ್ತು, ಸಂಜೆ, ರಾತ್ರಿ, ಕಥೆ, ಬಸದಿ, ಸಂತೆ, ಸಿದ್ದಿ, ಹುಣ್ಣಿಮೆ, ಮುಂತಾದುವು.

ಹಿಂದುಸ್ಥಾನಿಯಿಂದ—ಬದಲು, ಬದಲಾವಣೆ, ಚಾನಾಯಿಸು, ಜಮಿನು, ಜಮೀನ್‌ದಾರ್, ರೈತ, ಗುಲಾಮ, ಸಲಾಮು, ಮಶೀತಿ, ಬಾಜಿ, ಸುಬೇದಾರ, ಕಛೇರಿ, ಕಾನೂನು, ಸರ್ಕಾರ, ರೂಪಾಯಿ, ಕಾಗದ, ಗಡಿಯಾರ, ಬಂದೂಕ, ಸವಾರ.

ಮಹಾರಾಷ್ಟ್ರದಿಂದ—ಬತ್ತೀಸ, ತೆತ್ತೀಸ. ಚಪ್ಪನ್ನ, ಜೀಯ, ರಾವುತ.

ಇಂಗ್ಲಿಷಿನಿಂದ—ರೈಲು, ಕೋರ್ಟು, ಲಾಯರು, ಕಂದೀಲು, ಗುಳೋಪು, ಬಿಟೀಲು, ಸಾಬೂನು, ಬೆಂಚು, ಬ್ಯಾಂಕು, ಎಕರೆ, ಪ್ಲೇಗು, ಮೈಲಿ, ಪೊಲೀಸು, ಕಾರ್ಡು, ಗಿಲೀಟು, ಹೋಟಲು.

47. ಹಳಗನ್ನಡದಿಂದ ಶಬ್ದಗಳು ಹೊಸಕನ್ನಡಕ್ಕೆ ಬರುವಾಗ ಕೆಲವು ವ್ಯತ್ಯಾಸಗಳಾಗುವುವು. ಯಾವುವೆಂದರೆ—

(1) ವ್ಯಂಜನಾಂತಗಳಿಗೆ ಉಕಾರ ಸೇರುವುದು ; ಹ್ರಸ್ವೈಕಾಕ್ಷರವಾಗಿದ್ದರೆ ವ್ಯಂಜನಕ್ಕೆ ದ್ವಿತ್ವವೂ ಬರುವುದು.

ಉದಾ.

ಉಕಾರಕ್ಕೆ—ಕೋಲ್—ಕೋಲು

ಕೋಲ್—ಕೋಲು	ನರಲ್—ನರಳು
ಆಳ್—ಆಳು	ಕೊರಲ್—ಕೊರಳು
ನೇಣ್—ನೇಣು	ಪವಣ್—ಹವಣು
ಊರ್—ಊರು	ತೊದಳ್—ತೊದಳು
ನಾರ್—ನಾರು	ತೊಟ್ಟಿಲ್—ತೊಟ್ಟಿಲು.
ಪೇಳ್—ಹೇಳು	

ಉಕಾರ ಮತ್ತು ದ್ವಿತ್ವಕ್ಕೆ—ಪುಲ್—ಹುಲ್ಲು

ಪುಲ್—ಹುಲ್ಲು	ಮುಳ್—ಮುಳ್ಳು
ಪೆಣ್—ಹೆಣ್ಣು	ತಿನ್—ತಿನ್ನು
ಪೊನ್—ಹೊನ್ನು	ಕೊಳ್—ಕೊಳ್ಳು
ಕಣ್—ಕಣ್ಣು	ನಿಲ್—ನಿಲ್ಲು.

(2) ಯಕಾರಾಂತಕ್ಕೆ ಇಕಾರ ಸೇರುವುದು.

ಉದಾ.

ಬಾಯ್—ಬಾಯಿ	ನಾಯ್—ನಾಯಿ
ತಾಯ್—ತಾಯಿ	ಕಾಯ್—ಕಾಯಿ.

(3) ಪಕಾರಕ್ಕೆ ಹಕಾರವು ಪ್ರಾಯಶಃ ಬರುವುದು.

ಉದಾ.

ಪಾಲ್—ಹಾಲು	ಪಾಡು—ಹಾಡು
ಪಾವು—ಹಾವು	ಪೊರಗು—ಹೊರಗು
ಪಳದು—ಹಳದು	ಪಕ್ಕಿ—ಹಕ್ಕಿ
ಪಸಿವು—ಹಸಿವು	ಪಗೆ—ಹಗೆ.

(4) ಸಂಯುಕ್ತಾಕ್ಷರಗಳ ಮೊದಲಿನ ರೇಫ, ಳಕಾರ, ಣಕಾರಗಳಿಗೆ ಮುಂದಿನ ವ್ಯಂಜನವು ಆದೇಶವಾಗಿ ಬರುವುದು.

ಉದಾ.

ಪರ್ಬ್ಬ—ಹಬ್ಬ	ಎಳ್ಚರು—ಎಚ್ಚರು
ಕರ್ಬ್ಬ—ಕಬ್ಬು	ಪೊಣ್ಮು—ಹೊಮ್ಮು
ಕಳ್ತಲೆ—ಕತ್ತಲೆ	ಎಳ್ತರ—ಎತ್ತರ
ಕಳ್ತೆ—ಕತ್ತೆ	ತಿರ್ದ್ದು—ತಿದ್ದು.

(5) ಹೀಗೆಯೇ ಬೇರೆಬೇರೆ ವಿಕಾರವನ್ನು ಹೊಂದಿದ ಶಬ್ದಗಳು ಇನ್ನೂ ಕೆಲವಿರುವುವು.

ಉದಾ.

ಬರ್ದುಕು—ಬದುಕು	ಇಹಗೆ—ಹೀಗೆ
ಕಿಮುಳ್ಚು—ಕಿವುಚು	ಎಹಗೆ—ಹೇಗೆ
ನಾಣ್ಚು—ನಾಚು	ಅವುಂಕು—ಔಕು
ಪೊರವಡು—ಹೊರಡು	ಕವುಂಕುಳ್—ಕಂಕುಳು
ಬೇಳ್ಕುಂ—ಬೇಕು	ಪೊಸಂತಿಲ್—ಹೊಸಲು
ಇರುಂಪೆ—ಇರುವೆ	ಒಲ್ಮೆ—ಒಲುಮೆ
ಅಂತಹ—ಅಂಥ	ಪೆರ್ಮೆ—ಹೆಮ್ಮೆ
ಇಂತಹ—ಇಂಥ	ಒರ್ಮೆ—ಒಮ್ಮೆ
ಎಂತಹ—ಎಂಥ	ಬಾರ್ಚು—ಬಾಚು
ಅಹಗೆ—ಹಾಗೆ	ಅಣ್ಮು—ಹಮ್ಮು.

48. ಸಂಸ್ಕೃತದಿಂದ ಬಂದ ಶಬ್ದಗಳಲ್ಲಿ ವಿಕಾರವಿಲ್ಲದ ಶಬ್ದಗಳಿಗೆ ತತ್ಸಮಗಳೆಂತಲೂ, ವಿಕಾರವನ್ನು ಹೊಂದಿದ ಶಬ್ದಗಳಿಗೆ ತದ್ಭವಗಳೆಂತಲೂ ಸಂಜ್ಞೆ.

ಉದಾ.

ತತ್ಸಮಕ್ಕೆ—ರಾಮ, ಭೀಮ, ಕಾಮ, ವಸಂತ, ಚಂದ್ರ, ಕರ್ತೃ, ಶತ್ರು, ಶ್ರೀ, ಸ್ತ್ರೀ, ಮಧು, ವನ, ಮುಖ, ಕಮಲ, ಭುವನ, ಭವನ, ಶಯನ, ಶ್ರುತಿ, ಸ್ಮೃತಿ, ಶುದ್ಧಿ, ಸಿದ್ಧಿ, ಕವಿ, ರವಿ, ಗಿರಿ, ಲಿಪಿ, ಮುಂತಾದುವು.

ತದ್ಭವಕ್ಕೆ—ವೀಣಾ-ವೀಣೆ ; ಆರ್ಯಾ-ಅಜ್ಜ ; ವಂಧ್ಯಾ-ಬಂಜೆ ; ಮುಂತಾದುವು.

49. ತದ್ಭವಗಳು.—ಸಂಸ್ಕೃತ ಶಬ್ದಗಳು ತದ್ಭವಗಳಾಗುವಾಗ ಅಂತ್ಯದಲ್ಲಿ ಮಾತ್ರ ವಿಕಾರವನ್ನು ಹೊಂದಬಹುದು ; ಅಥವಾ ಒಳಭಾಗದಲ್ಲಿಯೂ ವಿಕಾರವನ್ನು ಹೊಂದಬಹುದು.

I. ಅಂತ್ಯದಲ್ಲಿ ವಿಕಾರವನ್ನು ಹೊಂದುವುದು ಹೇಗೆಂದರೆ *—

(1) ಕೊನೆಯ ದೀರ್ಘಸ್ವರವು ಹ್ರಸ್ವವಾಗುವುದು.

* ಅಂತ್ಯದಲ್ಲಿ ವಿಕಾರವನ್ನು ಹೊಂದಿದ ತದ್ಭವಗಳು ಪ್ರಾಯಶಃ ಅಚ್ಚಗನ್ನಡದ ಶಬ್ದಗಳೊಡನೆ ಸಮಾಸವಾಗುವುದಿಲ್ಲ.

ಉದಾ.

ದಯಾ—ದಯ	ನದೀ—ನದಿ
ಕರುಣಾ—ಕರುಣ	ವಧೂ—ವಧು
ನಾರೀ—ನಾರಿ	ಸ್ವಯಂಭೂ—ಸ್ವಯಂಭು,

(2) ಕೊನೆಯ ಆಕಾರಕ್ಕೆ ಎಕಾರಾದೇಶ ಬರುವುದು.

ಉದಾ.

ಮಾಲಾ—ಮಾಲೆ	ಗಂಗಾ—ಗಂಗೆ
ಬಾಲಾ—ಬಾಲೆ	ನಿಂದಾ—ನಿಂದೆ
ದಯಾ—ದಯೆ	ಶಾಲಾ—ಶಾಲೆ

(3) ಕೊನೆಯ ಅಕಾರಕ್ಕೆ ಎಕಾರವಾಗಲಿ, ಉಕಾರವಾಗಲಿ, ಬರುವುದು.

ಉದಾ.

ಅಕ್ಷತ—ಅಕ್ಷತೆ	ರೂಪ—ರೂಪು
ಅಭಿಲಾಷ—ಅಭಿಲಾಷೆ	ನೀರ—ನೀರು
ಊಹ—ಊಹೆ	ಮೀನ—ಮೀನು
ಪ್ರಶ್ನ—ಪ್ರಶ್ನೆ	ಕೀಲ—ಕೀಲು.

(4) ಕೊನೆಯ ಋಕಾರಕ್ಕೆ ಅ, ಆರ, ಎಂಬ ಆದೇಶಗಳು ಬರುವುವು.

ಉದಾ.

ಕರ್ತೃ—ಕರ್ತ, ಕರ್ತಾರ
ದಾತೃ—ದಾತ, ದಾತಾರ

ಪಿತೃ, ಮಾತೃ ಶಬ್ದಗಳು ಪಿತ, ಮಾತೆ ಎಂದಾಗುವುವು.

(5) ಕೊನೆಯ ನಕಾರಕ್ಕೆ ಲೋಪ ಬರುವುದು.

ಉದಾ.

ರಾಜನ್—ರಾಜ, ಕರಿನ್—ಕರಿ, ಆತ್ಮನ್—ಆತ್ಮ.

(6) ವ್ಯಂಜನಾಂತವಾದ ಕೆಲವು ಶಬ್ದಗಳ ಕೊನೆಯ ವ್ಯಂಜನಕ್ಕೆ ಲೋಪವಾಗಲಿ, ಉಕಾರದೊಡನೆ ದ್ವಿತ್ವವಾಗಲಿ ಬರುವುದು.

ಉದಾ.

ಧನುಸ್—ಧನು, ಧನುಸ್ಸು	ಮನಸ್—ಮನ, ಮನಸ್ಸು
ಶಿರಸ್—ಶಿರ, ಶಿರಸ್ಸು	ತೇಜಸ್—ತೇಜ, ತೇಜಸ್ಸು
ಯಶಸ್—ಯಶ, ಯಶಸ್ಸು	ಜಗತ್—ಜಗ, ಜಗತ್ತು

(7) ಕೆಲವು ವ್ಯಂಜನಾಂತಶಬ್ದಗಳ ಪ್ರಥಮೈಕವಚನರೂಪಗಳು ಕಡೆಯ ವ್ಯಂಜನದಮೇಲೆ ಉಕಾರದೊಡನೆ ದ್ವಿತ್ವವನ್ನು ಹೊಂದುವುವು.

ಉದಾ.

ಪ್ರತಿಪತ್—ಪ್ರತಿಪತ್ತು	ದಿಕ್—ದಿಕ್ಕು
ಕ್ಷುತ್—ಕ್ಷುತ್ತು	ತ್ವಕ್—ತ್ವಕ್ಕು
ಸಂಪತ್—ಸಂಪತ್ತು	ವಾಕ್—ವಾಕ್ಕು
ವಿಪತ್—ವಿಪತ್ತು	ಸಮಿತ್—ಸಮಿತ್ತು

(8) "ವಿದ್ವಸ್" ಮೊದಲಾದ ಕೆಲವು ಪುಲ್ಲಿಂಗ ವ್ಯಂಜನಾಂತ ಶಬ್ದಗಳ ಬಹುವಚನರೂಪಗಳು ವಿಸರ್ಗಲೋಪವನ್ನು ಹೊಂದುವುವು.

ಉದಾ.

ವಿದ್ವಾಂಸಃ—ವಿದ್ವಾಂಸ	ಹನುಮಂತಃ—ಹನುಮಂತ
ಭಗವಂತಃ—ಭಗವಂತ	ಶ್ರೀಮಂತಃ—ಶ್ರೀಮಂತ.

II. ಸಂಸ್ಕೃತಶಬ್ದಗಳು ಅಂತ್ಯಭಾಗದಲ್ಲಲ್ಲದೆ, ಒಳಭಾಗದಲ್ಲಿಯೂ ವಿಕಾರವನ್ನು ಹೊಂದುವುವು. ಹೇಗೆಂದರೆ:—

(1) ಶಕಾರ ಷಕಾರಗಳಿಗೆ ಸಕಾರ ಬರುವುದು.

ಉದಾ.

ಶಿಶು—ಸಿಸು	ಶಶಿನ್—ಸಸಿ
ಆಶಾ—ಆಸೆ	ಮಷೀ—ಮಸಿ
ದಿಶಾ—ದೆಸೆ	ಸ್ನುಷಾ—ಸೊಸೆ

(2) ಯಕಾರಕ್ಕೆ ಜಕಾರ ಬರುವುದು.

ಉದಾ.

ಯೌವನ—ಜವ್ವನ	ಯುವ—ಜವ
ಯೋಗಿನ್—ಜೋಗಿ	ಯಾತ್ರಾ—ಜಾತ್ರೆ.

(3) ಮಹಾಪ್ರಾಣಾಕ್ಷರಗಳಿಗೆ ಅಲ್ಪಪ್ರಾಣಗಳು ಬರುವುವು.

ಉದಾ.

ಖಂಡ—ಕಂಡ	ಶುಂಠಿ—ಸುಂಟಿ	ಫಲ—ಪಲ
ಘಂಟಾ—ಗಂಟೆ	ಕಥಾ—ಕತೆ	ಭೂತ—ಬೂತ
ಛಲ—ಚಲ	ಕಂಥಾ—ಕಂತೆ	
ಅಚ್ಛ—ಅಚ್ಚ	ರೂಢಿ—ರೂಡಿ	

(4) ವರ್ಗಪ್ರಥಮಾಕ್ಷರಗಳಿಗೆ ಆಯಾ ವರ್ಗದ ತೃತೀಯಾಕ್ಷರಗಳು ಬರುವುವು,

ಉದಾ.

ಮಲ್ಲಿಕಾ—ಮಲ್ಲಿಗೆ	ತಟ—ದಡ	ವಸತಿ—ಬಸದಿ
ಸೂಚಿ—ಸೂಜಿ	ಅಟವೀ—ಅಡವಿ	ಚತುರ—ಚದುರ
ವಜ್ರಾ—ಬಜೆ		

(5) ಪಕಾರ, ಬಕಾರ, ಮಕಾರಗಳಿಗೆ ವಕಾರ ಬರುವುದು.

ಉದಾ.

ದೀಪಕಾ—ದೀವಿಗೆ	ಕಬಳ—ಕವಳ	ಯಾಮ—ಜಾವ
ವಾಪೀ—ಬಾವಿ	ಶಿಬಿಕಾ—ಸಿವಿಗೆ	ಕುಮಾರ—ಕುವರ

(6) ವಕಾರಕ್ಕೆ ಬಕಾರ ಬರುವುದು.

ಉದಾ.

ವೇಗ—ಬೇಗ, ವಸತಿ—ಬಸದಿ, ವಾಲ—ಬಾಲ, ವೀಧಿ—ಬೀದಿ.

(7) ಸಂಯುಕ್ತಾಕ್ಷರಗಳಲ್ಲಿ ವ್ಯಂಜನಗಳ ನಡುವೆ ಅ, ಇ, ಉ, ಎಂಬ ಸ್ವರಗಳು ಸೇರುವುವು.

ಉದಾ.

ಯತ್ನ—ಜತನ	ಶ್ರೀ—ಸಿರಿ	ಮುಕ್ತಿ—ಮುಕುತಿ
ಪ್ರಾಣ—ಹರಣ	ಚಂದ್ರ—ಚಂದಿರ	ಯುಕ್ತಿ—ಯುಕುತಿ

(8) ಸಂಯುಕ್ತಾಕ್ಷರಗಳ ಆದಿಯ ಸಕಾರಕ್ಕೆ ಲೋಪಬರುವುದು ; ಕೆಲವುವೇಳೆ ಸಕಾರದ ಮುಂದಿನ ವಕಾರಕ್ಕೆ ಲೋಪಬರುವುದು.

ಉದಾ.

ಸಂಸ್ಥಾ—ಸಂತೆ	ತಪಸ್ವಿ—ತಪಸಿ
ಸ್ಥಾನ—ತಾಣ	ಸ್ವಾಮಿ—ಸಾಮಿ
ಸ್ಥಲ—ತಳ	ಸ್ವರ—ಸರ
ಸ್ಫಟಿಕ—ಪಟಿಕ	

(9) ಸಂಯುಕ್ತಾಕ್ಷರಗಳ ಪೂರ್ವದ ರೇಫಕ್ಕೆ ಮುಂದಿನ ವ್ಯಂಜನವು ಆದೇಶವಾಗುವುದು.

ಉದಾ.

ವರ್ತಿ—ಬತ್ತಿ. ಕರ್ತರೀ—ಕತ್ತಿ.

(10) ಸಂಧ್ಯಾ, ವಂಧ್ಯಾ, ಧ್ಯಾನ, ಶಬ್ದಗಳ ಧಕಾರಕ್ಕೆ ಲೋಪಬರುವುದು.

ಉದಾ.

ಸಂಧ್ಯಾ—ಸಂಜೆ. ವಂಧ್ಯಾ—ಬಂಜೆ, ಧ್ಯಾನ—ಜ್ಞಾನ.

(11) ವ್ಯಂಜನದ ಮುಂದಿರುವ ರೇಫಕ್ಕೆ ಲೋಪವೂ ಕೆಲವುಕಡೆ ಅದರ ಹಿಂದಿನಕ್ಷರದ ಆದೇಶವೂ ಬರುವುವು.

ಉದಾ.

ದ್ರೋಣಿ—ದೋಣಿ	ನಿದ್ರೆ—ನಿದ್ದೆ
ಕ್ರೇಣಿ—ಕೇಣಿ (ಬೆಲೆ)	ವೇತ್ರ—ಬೆತ್ತ

(12) ಕಕಾರದ ಮುಂದಿನ ಷಕಾರಕ್ಕೆ ಲೋಪವೂ ಕೆಲವುಕಡೆ ಅದರ ಹಿಂದಿನಕ್ಷರದ ಆದೇಶವೂ ಬರುವುವು.

ಉದಾ.

ಕ್ಷಾರ—ಕಾರ	ಪಕ್ಷ—ಪಕ್ಕ	ಲಕ್ಷ—ಲಕ್ಕ
ಕ್ಷೀರ—ಕೀರ	ರಕ್ಷಾ—ರಕ್ಕೆ	

(13) ಕೆಲವು ಶಬ್ದಗಳ ದೀರ್ಘಸ್ವರಕ್ಕೆ ಹ್ರಸ್ವಾದೇಶ ಬರುವುದು.

ಉದಾ.

ಕಾಂಚಿ—ಕಂಚಿ	ಆರ್ಯ—ಅಜ್ಜ	ವೇತ್ರ—ಬೆತ್ತ
ಕಾರ್ಯ—ಕಜ್ಜ	ರಾಕ್ಷಸ—ರಕ್ಕಸ	ಕಾವ್ಯ—ಕಬ್ಬ

(14) ಕೆಲವು ಶಬ್ದಗಳ ಉಕಾರಕ್ಕೆ ಒಕಾರಾದೇಶ ಬರುವುದು.

ಉದಾ.

ಕುಂಡ—ಕೊಂಡ	ತುವರಿ—ತೊವರಿ	ಮುಖ—ಮೊಗ
ಕುಂತ—ಕೊಂತ	ಸುಭಗ—ಸೊಬಗ	ತುಲಸಿ—ತೊಳಸಿ

(15) ಋಕಾರಕ್ಕೆ ಕೆಲವು ಕಡೆ ಇಕಾರಾದೇಶವೂ. ಕೆಲವು ಕಡೆ ರಿಕಾರಾದೇಶವೂ ಬರುವುವು.

ಉದಾ.

ಶೃಂಗಾರ—ಸಿಂಗರ	ಋಷಿ—ರಿಸಿ
ಋತು—ರಿತು	ಋಣ—ರಿಣ

(16) ಇನ್ನೂ ಅನೇಕವಿಧವಾಗಿ ವಿಕಾರವನ್ನು ಹೊಂದುವ ಶಬ್ದಗಳು ಇರುವುವು ; ಅವುಗಳಲ್ಲಿ ಕೆಲವನ್ನು ಆಯಾ ತದ್ಭವಗಳೊಡನೆ ಇಲ್ಲಿ ಕೊಟ್ಟಿದೆ.

ಉದಾ.

ಪ್ರಗ್ರಹ—ಹಗ್ಗ	ಅರ್ಗಳಾ—ಅಗುಳಿ
ಕಾಂಸ್ಯ—ಕಂಚು	ಕಾಚ—ಗಾಜು
ಸಿಂಹ—ಸಿಂಗ	ಕುಂಭಕಾರ—ಕುಂಬಾರ
ಪುಸ್ತಕ—ಹೊತ್ತಗೆ	ಖನಿ—ಗಣಿ
ಕನ್ಯಕಾ—ಕನ್ನಿಕೆ	ದ್ಯೂತ—ಜೂಜು.

ಶಷ್ಕುಲಿ—ಚಕ್ಕುಲಿ
ಮೃತ್ತ್ಯ—ಮಿತ್ತು
ಪಾದುಕಾ—ಹಾವಿಗೆ
ಪಾಟಲಿ—ಪಾದರಿ
ಇಷ್ಟಕಾ—ಇಟ್ಟಿಗೆ
ವಿಜ್ಞಾಪನಾ—ಬಿನ್ನಹ
ಕುಕ್ಕುಟ—ಕೋಳಿ
ವಿನಾಯಕ—ಬೆನಕ
ಆಜ್ಞಾ—ಆಣೆ
ಅಕ್ಷ—ಅಚ್ಚು
ಶಯ್ಯಾ—ಸಜ್ಜೆ
ಮಾಣಿಕ್ಯ—ಮಾಣಿಕ
ದಂಷ್ಟ್ರಾ—ದಾಡೆ
ವೈಶಾಖ—ಬೇಸಗೆ
ಗೋಧೂಮ—ಗೋದುವ
ಲೇಪ್ಪ—ಲೆಪ್ಪ
ದಂತ—ಜಂತ
ಶೃಂಖಲಾ—ಸಂಕಲೆ
ಶೂನ್ಯ—ಸೊನ್ನೆ
ಸೌಭಾಗ್ಯ—ಸೊಬಗು
ಶಲಾಕಾ—ಸಲಿಗೆ
ಶ್ಮಶಾನ—ಮಸಣ
ಜ್ಯೋತಿಷ—ಜೋಯಿಸ
ಆಯುಷ್ಯ—ಆಯಿಸ
ಮಹಿಮಾ—ಮೈಮೆ
ಸಂಸ್ಕೃತ—ಸಕ್ಕದ
ಸಂತೋಷ—ಸಂತಸ
ಚೂರ್ಣ—ಸುಣ್ಣ
ವಿಜ್ಞಾನ—ಬಿನ್ನಣ
ಸ್ಫೋಟಕ—ಹೋಳಿಗೆ
ಗ್ರಂಥಿ—ಗಂಟು
ಕೂಶ್ಮಾಂಡ—ಕುಂಬಳ
ದ್ವಿತೀಯಾ—ಬಿದಿಗೆ
ಚತುರ್ಥೀ—ಚೌತಿ
ಧ್ವನಿ—ದನಿ
ಪ್ರಯಾಣ—ಪಯಣ
ಕಾಷ್ಠ—ಕಡ್ಡಿ
ದಾಡಿಮ—ದಾಳಿಂಬ
ಯುಗ—ನೊಗ
ಘಟಿಕಾ—ಗಳಿಗೆ
ಘುಟಿಕಾ—ಗುಳಿಗೆ
ಕುಠಾರ—ಕೊಡಲಿ
ವರ್ಧಕಿ—ಬಡಗಿ
ಆಶ್ಚರ್ಯ—ಅಚ್ಚರಿ
ಹಂಸ—ಅಂಚೆ
ಅಮೃತ—ಅಮರ್ದು
ಉದ್ಯೋಗ—ಉಜ್ಜುಗ
ಕೋಕಿಲ—ಕೋಗಿಲೆ
ಕುಟೀ—ಗುಡಿ
ನಿತ್ಯ—ನಿಚ್ಚ
ಪಶು—ಹಸು
ವಿದ್ಯಾ—ಬಿಜ್ಜೆ
ಪದ್ಯಾ—ಹಜ್ಜೆ
ಪ್ರಮಾಣ—ಹವಣು
ಪ್ರಾಯ—ಹರಯ
ರತ್ನ—ರನ್ನ

10. ಪ್ರಯೋಗ ಪ್ರಕರಣ.

50. ವಾಕ್ಯ.—ಸಂಪೂರ್ಣಾರ್ಥವನ್ನು ಕೊಡುವ ಪದಗಳ ಸಮೂಹವು ವಾಕ್ಯವೆನಿಸುವುದು. ವಾಕ್ಯದಲ್ಲಿ ಕರ್ತೃಪದವೂ ಕ್ರಿಯಾಪದವೂ ಪ್ರಾಯಶಃ ಇರುವುವು ; ಕೆಲವುಕಡೆ ಅವನ್ನು ಅಧ್ಯಾಹಾರ ಮಾಡಬೇಕು. ಕ್ರಿಯಾಪದವು ಸಕರ್ಮಕವಾಗಿದ್ದರೆ ಕರ್ಮಪದವೂ ಇರುವುದು. ವಾಕ್ಯದಲ್ಲಿ ಪದಗಳು ಇರತಕ್ಕ ಕ್ರಮಕ್ಕೆ ಅನ್ವಯವೆಂದು ಹೆಸರು. ಈ ಅನ್ವಯಕ್ರಮ ಹೇಗೆಂದರೆ—ಮೊದಲು ಕರ್ತೃಪದವೂ, ಅಮೇಲೆ ಕರ್ಮಪದವೂ, ಕಡೆಯಲ್ಲಿ ಕ್ರಿಯಾಪದವೂ ಇರುವುವು ; ವಿಶೇಷಣಗಳು ವಿಶೇಷ್ಯಗಳ ಹಿಂದೆ ಬರುವುವು.

51. ನಾಮಪದಪ್ರಯೋಗ.—ಲಿಂಗ: ವಿಶೇಷ್ಯದ ಲಿಂಗವೇ ವಿಶೇಷಣಕ್ಕೂ ಬರುವುದು ; ಆದರೆ ವಿಧೇಯವಿಶೇಷಣಕ್ಕೆ ಈ ನಿಯಮವಿಲ್ಲ.

ಉದಾ.

ಒಳ್ಳೆಯವನು ರಾಮನು, ಒಳ್ಳೆಯವಳು ಸೀತೆ, ಒಳ್ಳೆಯದು ಹಸು.
ವಿಧೇಯವಿಶೇಷಣಕ್ಕೆ *—ಸತ್ಪುರುಷರು ಲೋಕಕ್ಕೆ ಭೂಷಣ.

52. ವಚನ.—

(i) ಗೌರವಾರ್ಥದಲ್ಲಿಯೂ, ಹಾಸ್ಯದಲ್ಲಿಯೂ, ನಿಂದೆಯಲ್ಲಿಯೂ ಏಕವಚನಕ್ಕೆ ಪ್ರತಿಯಾಗಿ ಬಹುವಚನ ಬರುವುದು.

ಉದಾ.

ಗೌರವಕ್ಕೆ—ಸ್ವಾಮಿಗಳು ದಯಮಾಡಿದರು.
ಹಾಸ್ಯಕ್ಕೆ—ಏನು ಶೆಟ್ಟರೇ, ನೀವೂ ತಿರುಪಕ್ಕೆ ಬಂದಿರಾ?
ನಿಂದೆಗೆ—ತಾವು ದೊಡ್ಡವರು, ನನ್ನ ಸಹವಾಸ ತಮಗೆ ಬೇಡ.

---

* ಸತ್ಪುರುಷರ ವಿಷಯದಲ್ಲಿ ಭೂಷಣವೆಂದು ವಿಧಿಸಿ ಹೇಳುವುದರಿಂದ ವಿಧೇಯವಿಶೇಷಣವಾಯಿತು.

(2) ಗೌರವಾರ್ಥದಲ್ಲಿ ಪ್ರಥಮೈಕವಚನಾಂತಗಳಾದ ಕೆಲವು ಪುಂಸ್ತ್ರೀವಾಚಕಗಳಮೇಲೆ "ಅವರು" ಎಂಬ ಶಬ್ದವನ್ನು ಸೇರಿಸುವುದುಂಟು.

ಉದಾ.

ಅಣ್ಣನವರು, ಅಮ್ಮನವರು, ಸೋಮಯ್ಯನವರು.

(3) ವಿಶೇಷ್ಯದ ವಚನವೇ ವಿಶೇಷಣಕ್ಕೂ ಬರುವುದು. ಆದರೆ ವಿಶೇಷ್ಯವು ಬಹುವಚನವಾಗಿದ್ದರೂ, ವಿಧೇಯವಿಶೇಷಣವು ಏಕವಚನವಾಗಿರಬಹುದು.

ಉದಾ.

ಬುದ್ಧಿವಂತನಾದ ಬಾಲಕನು
ಬುದ್ಧಿವಂತರಾದ ಬಾಲಕರು
ಒಳ್ಳೆಯದಾದ ಕುದುರೆ
ಒಳ್ಳೆಯವಾದ ಕುದುರೆಗಳು

ವಿಧೇಯವಿಶೇಷಣಕ್ಕೆ—ಅವನ ಮಾತುಗಳೆಲ್ಲಾ ಸುಳ್ಳು.
ಶಾಸ್ತ್ರಗಳೇ ಪ್ರಮಾಣವು.

(4) ಬಹುವಚನ ಸಂಖ್ಯಾವಾಚಕವು ವಿಶೇಷಣವಾಗಿದ್ದರೆ ವಿಶೇಷ್ಯವು ವಿಕಲ್ಪವಾಗಿ ಏಕವಚನವಾಗುವುದು.

ಉದಾ.

ನಾಲ್ಕು ದಿಕ್ಕುಗಳಿಗೂ ಹೋದರು.
ನಾಲ್ಕು ದಿಕ್ಕಿಗೂ ಹೋದರು.

(5) ಹಲವು ಏಕವಚನ ಕರ್ತೃಗಳು ಒಂದೇ ಕ್ರಿಯೆಯಲ್ಲಿ ಅನ್ವಯಿಸುವಾಗ ಅವುಗಳ ವಿಶೇಷಣವು ಬಹುವಚನವಾಗಿರುವುದು.

ಉದಾ.

ಅಣ್ಣನೂ ತಮ್ಮನೂ ಗುಣವಂತರಾಗಿದ್ದಾರೆ.
ಅವಿವೇಕಿಗಳಾದ ಅಣ್ಣನೂ ತಮ್ಮನೂ ಸ್ನೇಹದಿಂದ್ದಾರೆ.

53. ವಿಭಕ್ತಿ.—ಪ್ರಥಮಾವಿಭಕ್ತಿ.

(1) ಧಾತುವಿನ ಮೇಲೆ ಆಖ್ಯಾತಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಾಗ ಕರ್ತೃವನ್ನು ತಿಳಿಸುವ ಪ್ರಾತಿಪದಕದಮೇಲೆಯೂ, ಕರ್ಮಾರ್ಥದಲ್ಲಿ ಬಂದಾಗ ಕರ್ಮವನ್ನು ತಿಳಿಸುವ ಪ್ರಾತಿಪದಿಕದಮೇಲೆಯೂ ಪ್ರಥಮಾ ವಿಭಕ್ತಿ ಬರುವುದು. ಕರ್ತೃವೆಂದರೆ ಕೆಲಸವನ್ನು ಮಾಡುವವನು ; ಕರ್ಮವೆಂದರೆ ಆ ಕೆಲಸಕ್ಕೆ ವಿಷಯವಾದದು.

ಉದಾ.

ಕರ್ತ್ರರ್ಥಕ್ಕೆ—ಅರಸನು ದೇಶವನ್ನು ಆಳುತ್ತಾನೆ.
ಕರ್ಮಾರ್ಥಕ್ಕೆ—ಅರಸನಿಂದ ದೇಶವು ಆಳಲ್ಪಡುತ್ತದೆ.

(2) ಪ್ರಥಮಾಂತ ಕರ್ತೃಪದದ ವಿಭಕ್ತಿಗೆ ವಿಕಲ್ಪವಾಗಿ ಲೋಪ ಬರುವುದು.

ಉದಾ.

ಹುಡುಗ ಬಂದನು ; ಮರ ಬೆಳೆಯಿತು.

54. ದ್ವಿತೀಯಾ ವಿಭಕ್ತಿ.—

(1) ಕರ್ಮಾರ್ಥದಲ್ಲಿ ದ್ವಿತೀಯಾ ವಿಭಕ್ತಿ ಬರುವುದು. ಕೆಲವು ಕ್ರಿಯೆಗಳಿಗೆ ಎರಡು ಕರ್ಮಗಳಿರಬಹುದು.

ಉದಾ.

ಬಡಗಿ ಮನೆಯನ್ನು ಕಟ್ಟಿದನು.
ಶಿಲ್ಪಿ ವಿಗ್ರಹವನ್ನು ಮಾಡಿದನು.
ದ್ವಿಕರ್ಮಕಕ್ಕೆ—ಶಿಷ್ಯನು ಗುರುವನ್ನು ಜ್ಞಾನವನ್ನು ಯಾಚಿಸಿದನು.
ಆಳು ಹಸುವನ್ನು ಹಾಲನ್ನು ಕರೆದನು.

(2) ಅಕರ್ಮಕಧಾತುಗಳು ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವನ್ನು ಹೊಂದಿದಾಗ, ಪ್ರೇರ್ಯಕರ್ತೃವಾಚಕದಮೇಲೆ ದ್ವಿತೀಯಾ ವಿಭಕ್ತಿ ಬರುವುದು.

ಉದಾ.

ತಾಯಿ ಕೂಸನ್ನು ಮಲಗಿಸಿದಳು.
ಹಾವಾಡಿಗನು ಹಾವನ್ನು ಆಡಿಸಿದನು.

55. ತೃತೀಯಾ ವಿಭಕ್ತಿ.—

(1) ಕರಣಾರ್ಥದಲ್ಲಿಯೂ, ಕಾರಣಾರ್ಥದಲ್ಲಿಯೂ, ಕರ್ಮಣಿ ಪ್ರಯೋಗದಲ್ಲಿ ಕರ್ತ್ರರ್ಥದಲ್ಲಿಯೂ ತೃತೀಯಾ ವಿಭಕ್ತಿ ಬರುವುದು. ಕರಣವೆಂದರೆ ಕೆಲಸಕ್ಕೆ ಮುಖ್ಯ ಸಾಧನವು.

ಉದಾ.

ಕರಣಕ್ಕೆ—ಕೊಡಲಿಯಿಂದ ಮರವನ್ನು ಕಡಿದನು.
ಕಾರಣಕ್ಕೆ—ವಿದ್ಯೆಯಿಂದ ಯಶಸ್ಸುಂಟಾಗುವುದು.
ಕರ್ಮಣಿಪ್ರಯೋಗಕ್ಕೆ—ಅರಸನಿಂದ ಹಗೆಗಳು ಗೆಲ್ಲಲ್ಪಟ್ಟರು.

(2) ಎಡೆಬಿಡದೆ ಕ್ರಿಯೆ ನಡೆಯಿತೆಂಬ ಅರ್ಥವು ತೋರಿದರೆ ಕಾಲವಾಚಕ, ಮಾರ್ಗವಾಚಕಗಳಮೇಲೆ ತೃತೀಯಾ ವಿಭಕ್ತಿ ಬರುವುದು.

ಉದಾ.

ಮೂರು ಹರಿದಾರಿಯಿಂದ ನಡೆದು ಬಂದನು.
ಒಂದು ತಿಂಗಳಿಂದ ವ್ಯಾಕರಣವನ್ನು ಓದುತ್ತಾನೆ.

(3) ಸಕರ್ಮಕಧಾತುಗಳು ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವನ್ನು ಹೊಂದಿದಾಗ, ಪ್ರೇರ್ಯಕರ್ತೃವಾಚಕದಮೇಲೆ ತೃತೀಯಾ ವಿಭಕ್ತಿ ಬರುವುದು.

ಉದಾ.

ಅರಸನು ಶಿಲ್ಪಿಗಳಿಂದ ಗುಡಿಯನ್ನು ಕಟ್ಟಿಸಿದನು.
ಉಪಾಧ್ಯಾಯನು ಹುಡುಗನಿಂದ ಭಾರತವನ್ನು ಓದಿಸಿದನು.

(4) ಸಹಾರ್ಥಕವಾದ ಶಬ್ದಗಳ ಯೋಗವನ್ನು ಹೊಂದಿರುವ ಶಬ್ದಗಳಮೇಲೆ ತೃತೀಯಾ ವಿಭಕ್ತಿ ಬರುವುದು. "ಒಡನೆ" ಎಂಬ ಅವ್ಯಯವಿದ್ದರೆ ಬರುವುದಿಲ್ಲ.

ಉದಾ.

ಮಕ್ಕಳಿಂದ ಕೂಡಿ ತಾಯಿ ಬಂದಳು ; ಮಕ್ಕಳೊಡನೆ ಬಂದಳು.
ಸೈನ್ಯದಿಂದ ಬೆರಸಿ ರಾಜನು ನಡೆದನು ; ಸೈನ್ಯದೊಡನೆ ನಡೆದನು.

56. ಚತುರ್ಥೀ ವಿಭಕ್ತಿ.—

(1) ಸಂಪ್ರದಾನಾರ್ಥದಲ್ಲಿ ಚತುರ್ಥೀ ವಿಭಕ್ತಿ ಬರುವುದು. ಸಂಪ್ರದಾನವೆಂದರೆ ಕೊಡಲ್ಪಡುವ ವಸ್ತು ಯಾವುದನ್ನು ಸೇರುವುದೋ ಅದು.

ಉದಾ.

ಬಡವನಿಗೆ ಹಣವನ್ನು ಕೊಟ್ಟನು.
ಯಾಚಕನಿಗೆ ಭಿಕ್ಷವನ್ನು ಹಾಕಿದನು.

(2) ಉದ್ದೇಶಾರ್ಥದಲ್ಲಿಯೂ, ಕಾರಣಾರ್ಥದಲ್ಲಿಯೂ ಇರುವ ಶಬ್ದಗಳಮೇಲೆ ಚತುರ್ಥೀ ವಿಭಕ್ತಿ ಬರುವುದು.

ಉದಾ.

ಉದ್ದೇಶಕ್ಕೆ—ಯಾಚಕರು ಭಿಕ್ಷಕ್ಕೆ ಹೋಗುತ್ತಾರೆ.
ಗುರು ಶಿಷ್ಯನಿಗೆ ಆಶೀರ್ವಾದ ಮಾಡುತ್ತಾನೆ.
ತೇರಿಗೆ ಮರ, ಬಳೆಗೆ ಚಿನ್ನ.
ಕಾರಣಕ್ಕೆ—ಕೇಡಿಗೆ ದುರ್ಬುದ್ಧಿ, ಮೋಕ್ಷಕ್ಕೆ ತತ್ವಜ್ಞಾನ.

(3) ಅಸಹನ, ದ್ರೋಹ, ಮತ್ಸರ, ಭೀತಿ, ಆಧಿಕ್ಯ, ಸ್ವಭಾವ, ನಮಸ್ಕಾರ, ಹಿತ, ಅಹಿತ, ಸಾದೃಶ್ಯ, ಪ್ರತಿನಿಧಿ ಮೊದಲಾದ ಅರ್ಥವುಳ್ಳ ಶಬ್ದಗಳ ಸಂಬಂಧವನ್ನು ಪಡೆದಿರುವ ಶಬ್ದಗಳಮೇಲೆ ಚತುರ್ಥೀ ವಿಭಕ್ತಿ ಬರುವುದು.

ಉದಾ.

ಅಸಹನಕ್ಕೆ—ಕವಿ ಕವಿಗೆ ಹೊಟ್ಟೆಕಿಚ್ಚು ಪಡುತ್ತಾನೆ.
ದ್ರೋಹಕ್ಕೆ—ದುರ್ಜನರು ಉಪಕಾರಿಗಳಿಗೆ ದ್ರೋಹಮಾಡುತ್ತಾರೆ.
ಮತ್ಸರಕ್ಕೆ—ಸವತಿ ಸವತಿಗೆ ಮತ್ಸರಿಸುತ್ತಾಳೆ.
ಭೀತಿಗೆ—ಮಹಾತ್ಮರು ಪಾಪಕ್ಕೆ ಅಂಜುತ್ತಾರೆ.

ಆಧಿಕ್ಯಕ್ಕೆ—ಅದು ಇದಕ್ಕೆ ದೊಡ್ಡದು.
ಸ್ವಭಾವಕ್ಕೆ—ಚೇಷ್ಟೆ ಕಪಿಗೆ ಸಹಜವು.
ನಮಸ್ಕಾರಕ್ಕೆ—ದೇವರಿಗೆ ನಮಸ್ಕಾರ ಮಾಡು
ಹಿತಕ್ಕೆ—ಔಷಧವು ರೋಗಿಗೆ ಹಿತವಾದುದು.
ಅಹಿತಕ್ಕೆ—ಬರವು ಲೋಕಕ್ಕೆ ಅಹಿತವಾದುದು.
ಸಾದೃಶ್ಯಕ್ಕೆ—ಇವನು ಅವನಿಗೆ ಸಮಾನನು.
ಪ್ರತಿನಿಧಿಗೆ—ಇದು ಅದಕ್ಕೆ ಬದಲು.

(4) ಅಶನ, ಬೋಧನ ಈ ಅರ್ಥಗಳ ಧಾತುಗಳು ಪ್ರೇರಣಾರ್ಥದಲ್ಲಿ "ಇಸು" ಪ್ರತ್ಯಯವನ್ನು ಹೊಂದಿದಾಗ ಪ್ರೇರ್ಯ ಕರ್ತೃವಾಚಕದ ಮೇಲೆ ಚತುರ್ಥೀ ವಿಭಕ್ತಿ ಬರುವುದು.

ಉದಾ.

ತಾಯಿ ಕೂಸಿಗೆ ಅನ್ನವನ್ನು ತಿನ್ನಿಸಿದಳು.
ವೈದ್ಯನು ರೋಗಿಗೆ ಔಷಧವನ್ನು ಕುಡಿಸಿದನು.
ಗುರು ಶಿಷ್ಯನಿಗೆ ವಿದ್ಯೆಯನ್ನು ಕಲಿಸಿದನು.

57. ಪಂಚಮೀ ವಿಭಕ್ತಿ.—

ಅಪಾದಾನಾರ್ಥದಲ್ಲಿಯೂ, ಕಾರಣಾರ್ಥದಲ್ಲಿಯೂ ಪಂಚಮೀ ವಿಭಕ್ತಿ ಬರುವುದು. ಅಪಾದಾನವೆಂದರೆ ಅಗಲಿಕೆ ತೋರುವಾಗ ಅವಧಿಯಾಗಿರುವುದು.

ಉದಾ.

ಅಪಾದಾನಕ್ಕೆ—ಮರದದೆಸೆಯಿಂದ ಎಲೆಗಳು ಉದುರಿದವು.
ಕಾರಣಕ್ಕೆ—ಹುಲಿಯ ದೆಸೆಯಿಂದ ಹೆದರಿದನು.

58. ಷಷ್ಠೀ ವಿಭಕ್ತಿ.—

(1) ಅವಯವ, ಕುಲ, ಜಾತಿ ಮೊದಲಾದ ಯಾವುದಾದರೂ ಒಂದು ಸಂಬಂಧದಲ್ಲಿ ಪ್ರಕೃತಿಯಮೇಲೆ ಷಷ್ಠೀ ವಿಭಕ್ತಿ ಬರುವುದು.

ಉದಾ.

ಅವಯವಸಂಬಂಧಕ್ಕೆ—ಮರದ ಕೊಂಬೆ.
ಕುಲಸಂಬಂಧಕ್ಕೆ—ನಮ್ಮ ತಮ್ಮ.

ಜಾತಿಯಸಂಬಂಧಕ್ಕೆ—ಆನೆಯ ಹಿಂಡು
ಸ್ವಾಮಿಸಂಬಂಧಕ್ಕೆ—ನಮ್ಮ ಅರಸನು
ಸನ್ನಿಧಾನಸಂಬಂಧಕ್ಕೆ—ಊರ ಮುಂದು
ಸಂಸ್ಪರ್ಶಸಂಬಂಧಕ್ಕೆ—ಕಾಲ ಕಡಗವು
ವಿಕಾರಸಂಬಂಧಕ್ಕೆ—ಬೆಳ್ಳಿಯ ಕೋಲು
ಲಕ್ಷಣಸಂಬಂಧಕ್ಕೆ—ಪಾಗಿನ ಮುದುಕನು,

(2) ಕೃದಂತಭಾವನಾಮದೊಡನೆ ಯೋಗವಿದ್ದಾಗ ಕರ್ತೃ, ಕರ್ಮಗಳನ್ನು ತಿಳಿಸುವ ಶಬ್ದಗಳಮೇಲೆ ಷಷ್ಠೀ ವಿಭಕ್ತಿ ಬರುವುದು.

ಉದಾ.

ರಾಮನ ಆಳಿಕೆ, ದೊಡ್ಡವರ ನಡತೆ, ಗಿಡಿಗೆಯ ಮಾತು, ಧರ್ಮದ ಆಚರಣೆ.

(3) ಒಡನೆ ಎಂಬ ಅವ್ಯಯದ ಯೋಗವಿದ್ದಾಗ ಷಷ್ಠೀ ವಿಭಕ್ತಿ ಬರುವುದು.

ಉದಾ.

ರಾಮನೊಡನೆ.

59. ಸಪ್ತಮೀ ವಿಭಕ್ತಿ.

(1) ಅಧಿಕರಣಾರ್ಥದಲ್ಲಿ ಸಪ್ತಮೀ ವಿಭಕ್ತಿ ಬರುವುದು. ಅಧಿಕರಣವೆಂದರೆ ಆಧಾರವು.—

ಉದಾ.

ಎಳ್ಳಿನಲ್ಲಿ ಎಣ್ಣೆ ಇರುವುದು.
ತೊಟ್ಟಿಲಲ್ಲಿ ಕೂಸು ಮಲಗಿರುವುದು.
ನೀರಿನಲ್ಲಿ ಮೀನುಗಳು ವಾಸಮಾಡುತ್ತವೆ.

(2) ಸಮುದಾಯದಿಂದ ಒಂದನ್ನು ಬೇರ್ಪಡಿಸಿ ಹೇಳುವಾಗ ಆ ಸಮುದಾಯವಾಚಕ ಶಬ್ದದಮೇಲೆ ಸಪ್ತಮೀ ವಿಭಕ್ತಿ ಬರುವುದು.

ಉದಾ.

ಪುರುಷರಲ್ಲಿ ಕ್ಷತ್ರಿಯನು ಶೂರನು.
ಹಣ್ಣುಗಳಲ್ಲಿ ತಾನಾಗಿ ಬೀಳುವುದು ಪಕ್ವವಾದುದು.
ಅವರಲ್ಲಿ ಈತನು ನಮ್ಮವನು.

(3) ನಿಪುಣಾರ್ಥಕವಾದ ಶಬ್ದಗಳ ಸಂಬಂಧವಿದ್ದರೆ ಸಪ್ತಮೀ ವಿಭಕ್ತಿ ಬರುವುದು.

ಉದಾ.

ವ್ಯಾಪಾರದಲ್ಲಿ ಚತುರನು, ವಿದ್ಯೆಯಲ್ಲಿ ಜಾಣನು,
ಚಿತ್ರದಲ್ಲಿ ಕುಶಲನು, ಸಂಗೀತದಲ್ಲಿ ಬುದ್ಧಿವಂತನು.

60. ಸಂಬೋಧನವಿಭಕ್ತಿ.—ಸಮೀಪದಲ್ಲಾಗಲಿ, ದೂರದಲ್ಲಾಗಲಿ ಇರುವವರನ್ನು ಕರೆಯುವುದರಲ್ಲಿ ಸಂಬೋಧನ ವಿಭಕ್ತಿ ಬರುವುದು.

ಉದಾ.

ರಾಮಾ, ಏಳು; ರಾಮಾ, ಇಲ್ಲಿ ಬಾ.

ಮೇಲೆ ಹೇಳಿದ ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ—ಇವುಗಳಿಗೆ ಕಾರಕಗಳೆಂದು ಸಂಜ್ಞೆ.

61. ವಿಭಕ್ತಿಪಲ್ಲಟ.—ಒಂದು ವಿಭಕ್ತಿಗೆ ಪ್ರತಿಯಾಗಿ ಕೆಲವುಕಡೆ ಮತ್ತೊಂದನ್ನು ಪ್ರಯೋಗಿಸುವುದುಂಟು. ಹೇಗೆಂದರೆ—

(1) ದ್ವಿತೀಯೆಗೆ ಚತುರ್ಥೀ—

ಉದಾ.

ಊರನ್ನು ಸೇರಿದನು; ಊರಿಗೆ ಸೇರಿದನು.
ಬೆಟ್ಟವನ್ನು ಹತ್ತಿದನು; ಬೆಟ್ಟಕ್ಕೆ ಹತ್ತಿದನು.

(2) ತೃತೀಯೆಗೆ ಸಪ್ತಮೀ—

ಉದಾ.

ಕೊಡಲಿಯಿಂದ ಕಡಿದನು; ಕೊಡಲಿಯಲ್ಲಿ ಕಡಿದನು.
ಕಿವಿಯಿಂದ ಕೇಳಿದನು; ಕಿವಿಯಲ್ಲಿ ಕೇಳಿದನು.

(3) ಪಂಚಮಿಗೆ ತೃತೀಯೆ—

ಉದಾ.

ಹುಲಿಯುದೆಸೆಯಿಂದ ಹೆದರಿದನು; ಹುಲಿಯಿಂದ ಹೆದರಿದನು.
ಆನೆಯುದೆಸೆಯಿಂದ ಕೇಡಾಯಿತು; ಆನೆಯಿಂದ ಕೇಡಾಯಿತು.

(4) ಷಷ್ಠಿಗೆ ಚತುರ್ಥೀ—

ಉದಾ.

ಮನೆಯ ಯಜಮಾನ ; ಮನೆಗೆ ಯಜಮಾನ.
ನಮ್ಮ ಗುರು ; ನಮಗೆ ಗುರು.

(5) ಸಪ್ತಮಿಗೆ ಪ್ರಥಮೆ (ಕಾಲವಾಚಕ ಸ್ಥಾನವಾಚಕಗಳಲ್ಲಿ)

ಉದಾ.

ರಾತ್ರಿಯಲ್ಲಿ ಬಂದನು ; ರಾತ್ರಿ ಬಂದನು.
ಆ ಕಡೆಯಲ್ಲಿ ಇದ್ದನು ; ಆಕಡೆಯಿದ್ದನು.

(6) ಸಪ್ತಮಿಗೆ ಚತುರ್ಥೀ—

ಉದಾ.

ಹಳ್ಳದಲ್ಲಿ ಬಿದ್ದನು ; ಹಳ್ಳಕ್ಕೆ ಬಿದ್ದನು.
ಅವನಲ್ಲಿ ಶಕ್ತಿಯಿಲ್ಲ ; ಅವನಿಗೆ ಶಕ್ತಿಯಿಲ್ಲ.

62. ಕ್ರಿಯಾಪದ ಪ್ರಯೋಗ—ಕರ್ತರಿ, ಕರ್ಮಣಿ ಪ್ರಯೋಗಗಳು : *

ಧಾತುವಿನಮೇಲೆ ಆಖ್ಯಾತಪ್ರತ್ಯಯವು ಕರ್ತ್ರರ್ಥದಲ್ಲಿಯೂ, ಸಕರ್ಮಕಧಾತುಗಳಮೇಲೆ ಕರ್ಮಾರ್ಥದಲ್ಲಿಯೂ ಬರುವುದು. ಅದು ಕರ್ತ್ರರ್ಥದಲ್ಲಿ ಬಂದಾಗ ಕರ್ತರಿಪ್ರಯೋಗವೆಂದೂ, ಕರ್ಮಾರ್ಥದಲ್ಲಿ ಬಂದಾಗ ಕರ್ಮಣಿಪ್ರಯೋಗವೆಂದೂ ಹೆಸರು. ಕರ್ಮಾರ್ಥದಲ್ಲಿ ಧಾತುವಿಗೂ ಆಖ್ಯಾತಪ್ರತ್ಯಯಕ್ಕೂ ನಡುವೆ "ಅಲ್ಪಡು" ಎಂಬ ಪ್ರತ್ಯಯವು ಬರುವುದು.

ಉದಾ.

ಕರ್ತರಿ ಪ್ರಯೋಗಕ್ಕೆ—ಕುದುರೆ ಓಡಿತು.
ಹುಡುಗನು ಪುಸ್ತಕವನ್ನು ಓದುತ್ತಾನೆ.
ಕರ್ಮಣಿ ಪ್ರಯೋಗಕ್ಕೆ—ಹುಡುಗನಿಂದ ಪುಸ್ತಕವು ಓದಲ್ಪಡುತ್ತದೆ.

---

* ಕನ್ನಡದಲ್ಲ ಕರ್ಮಣಿಪ್ರಯೋಗವು ವಿಶೇಷವಾಗಿ ಬಳಕೆಯಲ್ಲಿಲ್ಲ. ಅದನ್ನು ಸ್ವೇಚ್ಛೆಯಾಗಿ ಉಪಯೋಗಿಸಬಾರದು.

63. ಲಿಂಗ, ವಚನ.—

(1) ಕ್ರಿಯಾಪದಕ್ಕೆ ಕರ್ತರಿಪ್ರಯೋಗದಲ್ಲಿ ಕರ್ತೃವಿನ ಲಿಂಗ, ವಚನಗಳೂ, ಕರ್ಮಣಿಪ್ರಯೋಗದಲ್ಲಿ ಕರ್ಮದ ಲಿಂಗ, ವಚನಗಳೂ ಬರುವುವು.

ಉದಾ.

ಕರ್ತರಿಪ್ರಯೋಗಕ್ಕೆ—ಉಪಾಧ್ಯಾಯನು ಪಾಠವನ್ನು ಹೇಳುತ್ತಾನೆ.
ಹೆಂಗಸು ಭಕ್ಷ್ಯಗಳನ್ನು ಮಾಡುತ್ತಾಳೆ.
ಹಸುಗಳು ಹುಲ್ಲನ್ನು ಮೇಯುತ್ತವೆ.
ಕರ್ಮಣಿಪ್ರಯೋಗಕ್ಕೆ—ಉಪಾಧ್ಯಾಯನಿಂದ ಪಾಠವು ಹೇಳಲ್ಪಡುತ್ತದೆ.
ಹೆಂಗಸಿನಿಂದ ಭಕ್ಷ್ಯಗಳು ಮಾಡಲ್ಪಡುತ್ತವೆ.
ಹಸುಗಳಿಂದ ಹುಲ್ಲು ಮೇಯಲ್ಪಡುತ್ತದೆ.

(2) ಭಿನ್ನಲಿಂಗಗಳಾದ ಅನೇಕ ಕರ್ತೃಗಳಿರುವಾಗ ಕೊನೆಯಲ್ಲಿರುವ ಕರ್ತೃವಿನ ಲಿಂಗವೇ ಕ್ರಿಯಾಪದಕ್ಕೆ ಬರುವುದು.

ಉದಾ.

ಸೈನಿಕರೂ, ರಥಗಳೂ ಬಂದುವು.
ಬಂಡಿಗಳೂ, ಆಳುಗಳೂ ಬಂದರು.

(3) ಜಾತ್ಯೇಕವಚನದ ಕರ್ತೃವಿನ ಕ್ರಿಯಾಪದವು ವಿಕಲ್ಪವಾಗಿ ಬಹುವಚನಾಂತವಾಗುವುದು.

ಉದಾ.

ಕುದುರೆ ಬಂದಿತು ; ಕುದುರೆ ಬಂದುವು.
ಜೇನುಹುಳು ಮುತ್ತಿತು ; ಜೇನುಹುಳು ಮುತ್ತಿದುವು.

64. ಪುರುಷ.—

(1) "ನೀನು" ಎಂಬ ಸರ್ವನಾಮವೂ, ಪ್ರಥಮಪುರುಷದ ಇತರ ಶಬ್ದಗಳೂ ಸೇರಿ ಕರ್ತೃವಾದಾಗ ಧಾತುವಿಗೆ ಮಧ್ಯಮಪುರುಷವು ಬರುವುದು.

ಉದಾ.

ಅವನೂ ನೀನೂ ಬಂದಿರಿ.
ನೀನೂ ರಾಮನೂ ಬಂದಿರಿ.

(2) "ನಾನು" ಎಂಬ ಸರ್ವನಾಮವೂ, ಇತರ ಶಬ್ದಗಳೂ ಸೇರಿ ಕರ್ತೃವಾದಾಗ ಧಾತುವಿಗೆ ಉತ್ತಮಪುರುಷವು ಬರುವುದು.

ಉದಾ.

ಅವನೂ, ನಾನೂ ನೋಡಿದೆವು.
ನಾನೂ, ರಾಮನೂ ನೋಡಿದೆವು.

"ನೀನು" "ನಾನು" ಎಂಬ ಸರ್ವನಾಮಗಳೂ ಇತರ ಶಬ್ದಗಳೂ ಸೇರಿ ಕರ್ತೃವಾದಾಗ ಧಾತುವಿಗೆ ಉತ್ತಮಪುರುಷವು ಬರುವುದು.

ಉದಾ.

ನೀನೂ, ನಾನೂ, ಆತನೂ ಇದ್ದೆವು.
ರಾಮನೂ, ನೀನೂ, ನಾನೂ ಇದ್ದೆವು.

65. ವಿಶೇಷಾರ್ಥವನ್ನು ಕೊಡುವ ಧಾತುಗಳು.—ಕೆಲವು ಧಾತುಗಳು ಕೃದಂತಾವ್ಯಯಗಳಮೇಲೆ ಸೇರಿ ಕ್ರಿಯೆಗೆ ವಿಶೇಷಾರ್ಥವನ್ನು ಕೊಡುವುವು.

(1) "ಬಿಡು," "ಹಾಕು" ಎಂಬ ಧಾತುಗಳು ಸೇರಿ, ಕ್ರಿಯೆ ಸಂಪೂರ್ಣವಾಗಿ ನಡೆಯಿತು ಎಂಬ ಅರ್ಥವನ್ನು ಕೊಡುವುವು.

ಉದಾ.

ಸಾಲವನ್ನು ತೀರಿಸಿಬಿಟ್ಟನು.
ಮರವನ್ನು ಕಡಿದುಹಾಕಿದನು.

(2) "ಕೊಡು" ಧಾತು ಸೇರಿ, ಕ್ರಿಯೆ ಪರಾರ್ಥವಾಗಿ ನಡೆಯಿತು ಎಂಬ ಅರ್ಥವನ್ನು ಕೊಡುವುದು.

ಉದಾ.

ನಾನು ಅವನಿಗೆ ಅದರ ಅರ್ಥವನ್ನು ಹೇಳಿಕೊಟ್ಟೆನು.
ರಾಮನು ಕೃಷ್ಣನಿಗೆ ದಾರಿಯನ್ನು ತೋರಿಸಿಕೊಟ್ಟನು.

(3) "ಕೊಳ್ಳು" ಎಂಬ ಧಾತು ಸೇರಿ ಕ್ರಿಯೆ ಸ್ವಾರ್ಥವಾಗಿ ನಡೆಯಿತು ಎಂಬ ಅರ್ಥವನ್ನು ಕೊಡುವುದು.

ಉದಾ.

ನಾನು ವರವನ್ನು ಬೇಡಿಕೊಂಡೆನು.
ಅವನು ಸಾಲವನ್ನು ತೆಗೆದುಕೊಂಡನು.

(4) " ಆಡು " ಎಂಬ ಧಾತು ಸೇರಿ ಕ್ರಿಯೆ ಅನೇಕಾವೃತ್ತಿ ನಡೆಯಿತು ಎಂಬ ಅರ್ಥವನ್ನೂ ಪರಸ್ಪರ ಕರ್ತೃ, ಕರ್ಮಭಾವವನ್ನೂ ತೋರಿಸುವುದು.

ಉದಾ.

ಹುಡುಗನು ಓಡಾಡುತ್ತಾನೆ; ಹಾವು ಹರಿದಾಡುತ್ತಿದೆ.
ಇವರು ಹೊಡೆದಾಡಿದರು ; ಅವರು ಬಯ್ದಾಡಿದರು.

(5) " ಬರು " ಎಂಬ ಧಾತು ವರ್ತಮಾನ ಕೃದಂತಾವ್ಯಯ್ಯದ ಮೇಲೆ ಸೇರಿ ಕ್ರಿಯೆ ಬಹುಕಾಲದಿಂದ ನಡೆಯಿತು ಎಂಬ ಅರ್ಥವನ್ನು ಕೊಡುವುದು. ಭೂತಕೃದಂತಾವ್ಯಯದ ಮೇಲೆ " ಕೊಂಡು " ಎಂಬ ಶಬ್ದವೂ ಸೇರುವುದು.

ಉದಾ.

ಹಣವನ್ನು ಕೊಡುತ್ತಾ ಬಂದನು.
ಹಣವನ್ನು ಕೊಟ್ಟುಕೊಂಡು ಬಂದನು.
ಸ್ನೇಹವನ್ನು ಬೆಳೆಸುತ್ತಾ ಬಂದನು.
ಸ್ನೇಹವನ್ನು ಬೆಳೆಯಿಸಿಕೊಂಡು ಬಂದನು.

66. ಕ್ರಿಯಾಪದಗಳ ರೂಪಪಲ್ಲಟ.—ನಾಮಪದಗಳಲ್ಲಿ ಒಂದು ವಿಭಕ್ತಿಗೆ ಮತ್ತೊಂದನ್ನು ಪ್ರಯೋಗಿಸುವಹಾಗೆ, ಕ್ರಿಯಾಪದಗಳಲ್ಲಿಯೂ ಒಂದು ರೂಪಕ್ಕೆ ಮತ್ತೊಂದನ್ನು ಪ್ರಯೋಗಿಸುವುದುಂಟು.

(1) ಭವಿಷ್ಯದ್ರೂಪಕ್ಕೆ ವರ್ತಮಾನರೂಪ ಬರುವುದು.

ಉದಾ.

ನಾಳೆ ಬರುತ್ತೇನೆ. ಒಂದು ತಿಂಗಳಲ್ಲಿ ಬರುತ್ತೇನೆ.

(2) ವರ್ತಮಾನರೂಪಕ್ಕೆ ಭವಿಷ್ಯದ್ರೂಪ ಬರುವುದು.

ಉದಾ.

ಈಗ ಇಲ್ಲಿರುವೆನು ; ಅದೋ ಅವನು ಬರುವನ .

(3) ತ್ವರೆಯೂ, ನಿಶ್ಚಯವೂ ತೋರುವಾಗ ವರ್ತಮಾನ ಭವಿಷ್ಯದ್ರೂಪಗಳಿಗೆ ಭೂತರೂಪ ಬರುವುದು.

ಉದಾ.

ಇದೋ ಬಂದೆನು, ನೀನು ನಿಜವನ್ನು ಹೇಳಿದರೆ ಬದುಕಿದೆ ; ಇಲ್ಲದಿದ್ದರೆ ಕೆಟ್ಟೆ.

(4) ಭೂತಕಾಲದ ಕ್ರಿಯೆಯನ್ನು ವರ್ತಮಾನಕಾಲದಲ್ಲಿ ನಡೆದಂತೆ ಭಾವಿಸಿಕೊಂಡು ಹೇಳುವಾಗ ಭೂತರೂಪಕ್ಕೆ ವರ್ತಮಾನ, ಭವಿಷ್ಯದ್ರೂಪಗಳು ಬರುವುವು.

ಉದಾ.

ಅಷ್ಟುಹೊತ್ತಿಗೆ ಸರಿಯಾಗಿ ಕರ್ಣನ ರಥದ ಚಕ್ರವು ನೆಲದಲ್ಲಿ ಹೂಸುಕೊಳ್ಳುತ್ತದೆ. ಆಗ ಕರ್ಣನು ಅರ್ಜುನನನ್ನು ನೋಡಿ "ಎಲೈ ಅರ್ಜುನಾ, ನನ್ನ ರಥದ ಚಕ್ರವನ್ನು ಎತ್ತಿ ಸರಿಪಡಿಸಬೇಕು ; ಅದುವರೆಗೂ ಸ್ವಲ್ಪ ಸುಮ್ಮನಿರು" ಎಂದು ಹೇಳುವನು. ಆದರೆ ಕೃಷ್ಣನು "ಅರ್ಜುನನೇ, ಇದೇ ಸಮಯ, ಬೇಗ ಬಾಣವನ್ನು ಹೂಡು" ಎಂದು ತ್ವರೆಪಡಿಸುವನು.

67. ಕೃದಂತನಾಮ.—

(1) ಕೃದಂತನಾಮಗಳು ಎಲ್ಲಾ ಕಾರಕಾರ್ಥಗಳಲ್ಲಿಯೂ ಬರುವುವು.

ಉದಾ.

ಕರ್ತ್ರರ್ಥದಲ್ಲಿ—ಓದುವ ಹುಡುಗನು=ಯಾವ ಹುಡುಗನು ಓದುತ್ತಾನೋ ಆ ಹುಡುಗನು.

ಕರ್ಮಾರ್ಥದಲ್ಲಿ—ಓದುವ ಪುಸ್ತಕವು=ಯಾವ ಪುಸ್ತಕವನ್ನು ಓದುತ್ತೇವೆಯೋ ಆ ಪುಸ್ತಕ.

ಕರಣಾರ್ಥದಲ್ಲಿ—ಕಡಿವ ಕೊಡಲಿ=ಯಾವ ಕೊಡಲಿಯಿಂದ ಕಡಿಯುತ್ತೇವೆಯೋ ಆ ಕೊಡಲಿ.

ಸಂಪ್ರದಾನಾರ್ಥದಲ್ಲಿ—ಕೊಡುವ ಯತಿ=ಯಾವ ಯತಿಗೆ ಕೊಡಬೇಕೋ ಆ ಯತಿ.

ಅಪಾದಾನಾರ್ಥದಲ್ಲಿ—ಅಂಜುವ ಕೆಲಸ=ಯಾವ ಕೆಲಸದ ದೆಸೆಯಿಂದ ಅಂಜುತ್ತೇವೆಯೋ ಆ ಕೆಲಸ.

ಅಧಿಕರಣಾರ್ಥದಲ್ಲಿ—ಮಲಗುವ ಮನೆ=ಯಾವ ಮನೆಗಳಲ್ಲಿ ಮಲಗುತ್ತೇವೆಯೋ ಆ ಮನೆ.

(2) ಕೃದಂತನಾಮಗಳು ನಾಮಪದಗಳ ಪೂರ್ವದಲ್ಲಿ ಅವ್ಯವಹಿತವಾಗಿಯಾಗಲೀ ವ್ಯವಹಿತವಾಗಿಯಾಗಲೀ ಇದ್ದು ಅವುಗಳಿಗೆ ವಿಶೇಷಣಗಳಾಗುವುವು.

ಉದಾ.

ಅವ್ಯವಹಿತಕ್ಕೆ—ಹೇಳಿದ ಮಾತು ; ಉಳಿದ ಹಣ ; ಬೆಳೆವ ಪಯಿರು.

ವ್ಯವಹಿತಕ್ಕೆ—ಹೇಳಿದ ನನ್ನ ಮಾತು ; ಉಳಿಡ ನಿನ್ನ ಹಣ ; ಬೆಳೆವ ಹೊಲದ ಪಯಿರು.

(3) ಅನೇಕ ಕೃದಂತನಾಮಗಳು ಒಂದೇ ನಾಮಪದವನ್ನು ವಿಶೇಷಿಸಬಹುದು.

ಉದಾ.

ಕೊಡುವ, ತರುವ ಪದ್ಧತಿ ; ಹೋಗುವ, ಬರುವ ದಾರಿ.

(4) ಕೃದಂತನಾಮಗಳು ತಮ್ಮಲ್ಲಿ ಅನ್ವಯಿಸುವ ಕಾರಕ ಮತ್ತು ಕ್ರಿಯಾವಿಶೇಷಣಗಳೊಡನೆ ಕೂಡಿರಬಹುದು.

ಉದಾ.

ನಾವು ಮೊದಲು ವಾಸಮಾಡುತ್ತಿದ್ದ ಮನೆ.

ಬಾಲ್ಯದಲ್ಲಿ ವಿದ್ಯೆಯನ್ನು ಬಿಡದೆ ಕಲಿಯುವ, ಯೌವನದಲ್ಲಿ ಧನವನ್ನು ಕಷ್ಟ ಪಟ್ಟು ಆರ್ಜಿಸುವ ಮುಪ್ಪಿನಲ್ಲಿ ಪುಣ್ಯಕಾರ್ಯಗಳನ್ನು ಭಕ್ತಿಪೂರ್ವಕವಾಗಿ ಮಾಡುವ ಮನುಷ್ಯನು ಇಹಪರಗಳಲ್ಲಿ ಸುಖಪಡುವನು.

(5) ಕೃದಂತನಾಮಗಳ ಕೊನೆಯಲ್ಲಿ ಅಂಥ ಎಂಬ ಶಬ್ದವನ್ನು ಸೇರಿಸುವುದುಂಟು.

ಉದಾ.

ಓದುವಂಥ ಹುಡುಗ, ಹೇಳಿದಂಥ ಮಾತು.

(6) “ ಆದ ” ಎಂಬ ಕೃದಂತವು ಪ್ರಾಯಶಃ ಎಲ್ಲಾ ಶಬ್ದಗಳ ಪ್ರಥಮಾಂತದ ಮೇಲೂ ಸೇರಿ ವಿಶೇಷಣವಾಗುವುದು.

ಉದಾ.

ಜಾಣನಾದಹುಡುಗನು ; ಹೊಸಬನಾದ ವೈದ್ಯನು ; ಅಯ್ಯರಾದ ಪಾಂಡವರು ; ಓದಿದವರಾದ ಜಾಣರು ; ಕೆಂಪಾದ ಹೂಗಳು ; ನೀತಿವಂತರಾದ ಮಂತ್ರಿಗಳು ; ಅಂಧವರಾದ ರಾಜರು ; ಮುಕ್ಕಣ್ಣನಾದ ಈಶ್ವರನು.

(7) ಉಳ್ಳ ಎಂಬ ಕೃದಂತವು ಕೆಲವು ನಾಮವಾಚಕಗಳ ಮೇಲೆಯೂ, ಕೃದಂತ ತದ್ಧಿತಾಂತ ಭಾವನಾಮಗಳ ಮೇಲೆಯೂ ಸೇರಿ ವಿಶೇಷಣವಾಗುವುದು.

ಉದಾ.

ನಾಮವಾಚಕಕ್ಕೆ—ಹಣವುಳ್ಳ ಜನರು ; ಗುಣವುಳ್ಳ ವಿದ್ವಾಂಸರು.

ಕೃದಂತಭಾವನಾಮಕ್ಕೆ—ತಿಳಿವಳಿಕೆಯುಳ್ಳ ಹುಡುಗನು ; ತಾಳ್ಮೆಯುಳ್ಳ ಮನುಷ್ಯನು.

ತದ್ಧಿತಾಂತ ಭಾವನಾಮಕ್ಕೆ—ಹೆಡ್ಡತನವುಳ್ಳ ಹೆಂಗಸು ; ಧೈರ್ಯವುಳ್ಳ ಮನುಷ್ಯನು.

68. ಅವ್ಯಯ.—

(1) ಕೃದಂತಾವ್ಯಯಗಳೂ, ತದ್ಧಿತಾಂತಾವ್ಯಯಗಳೂ ; ಕೃದಂತನಾಮ, ಕೃದಂತಭಾವನಾಮ, ಕೃದಂತಾವ್ಯಯ ಇವುಗಳಲ್ಲಿರುವ ಕ್ರಿಯೆಯಲ್ಲಿಯೂ, ವಾಕ್ಯದ ಪೂರ್ಣಕ್ರಿಯೆಯಲ್ಲಿಯೂ ಅನ್ವಯಿಸುವುವು.

ಉದಾ.

ಕೃದಂತಾವ್ಯಯಕ್ಕೆ:—

ಕೃದಂತನಾಮಕ್ಕೆ—ಯಾವಾಗಲೂ ಓದುತ್ತಾ ಕಾಲವನ್ನು ಕಳೆಯುವವನು ವಿವೇಕಿಯಾಗುವನು.

ಕೃದಂತಭಾವನಾಮಕ್ಕೆ—ಶಕ್ತಿಯನ್ನು ಮೀರಿ ನಡೆಯುವುದರಿಂದ ಕೇಡು ಬರುವುದು.

ಕೃದಂತಾವ್ಯಯಕ್ಕೆ—ಮನುಷ್ಯನು ನೀತಿಯನ್ನು ತಿಳಿದು ನಡೆದರೆ ಸುಖಪಡುವನು

ಪೂರ್ಣಕ್ರಿಯೆಗೆ-ವಿವೇಕಿಗಳು ಕಾಲಸ್ಥಿತಿಯನ್ನು ಅನುಸರಿಸಿ ನಡೆಯುವರು.

ತದ್ಧಿತಾಂತಾವ್ಯಯಕ್ಕೆ—
ಕೃದಂತನಾಮಕ್ಕೆ—ಶಾಸ್ತ್ರವನ್ನು ಕೊನೆಯತನಕ ಓದುವವನು ವಿವೇಕಿಯಾಗುವನು.
ಕೃದಂತಭಾವನಾಮಕ್ಕೆ—ಈ ಹುಡುಗನು ಇಷ್ಟರವಟ್ಟಿಗೆ ಓದುವುದು ಆಶ್ಚರ್ಯವಾಗಿದೆ.
ಕೃದಂತಾವ್ಯಯಕ್ಕೆ—ನಾನು ಬೆಂಗಳೂರಿನವರೆಗೆ ಹೋಗಿ ಬಂದೆನು.
ಪೂರ್ಣಕ್ರಿಯೆಗೆ—ರತ್ನವು ದೀಪದಂತೆ ಹೊಳೆಯುತ್ತದೆ.

(2) ಕೆಲವು ಸಂಬಂಧಸೂಚಕಾವ್ಯಯಗಳು ಜೊತೆಜೊತೆಯಾಗಿಯೇ ಬರುವುವು.

ಉದಾ.

ರಾಮನೂ, ಲಕ್ಷ್ಮಣನೂ ಬಂದರು (ಊ–ಊ).
ನೀನಾಗಲಿ, ಅವನಾಗಲಿ ಕೆಲಸವನ್ನು ಮಾಡಿ (ಆಗಲಿ–ಆಗಲಿ).
ಹೇಗೆ ಗುರುವೋ ಹಾಗೆ ಶಿಷ್ಯನು (ಹೇಗೆ-ಹಾಗೆ).

69. ದ್ವಿರುಕ್ತಿ.—

(1) ಸಂಭ್ರಮ, ಅತಿಶಯ, ಆಧಿಕ್ಯ, ವಸ್ತುನಿರ್ಣಯ, ಬಾಧೆ, ತ್ವರೆ, ಆವೃತ್ತಿ, ವೀಪ್ಸೆ ಮೊದಲಾದ ಅರ್ಥಗಳು ತೋರುವಾಗ ಒಂದು ಪದವನ್ನು ಎರಡುಸಾರಿ ಪ್ರಯೋಗಿಸುವುದುಂಟು. ಇದಕ್ಕೆ ದ್ವಿರುಕ್ತಿಯೆಂದು ಹೆಸರು. ಕೆಲವುಕಡೆ ವಾಕ್ಯಕ್ಕೂ ದ್ವಿರುಕ್ತಿಯುಂಟು. *

ಉದಾ.

ಸಂಭ್ರಮಕ್ಕೆ— ಒಪ್ಪಿಸೊಪ್ಪಿಸು ; ನಾನುನಾನು ; ಗೆದ್ದೆಗೆದ್ದೆ.
ಅತಿಶಯಕ್ಕೆ— ಮಲ್ಲಿಗೆ ಮೊದಲುಮೊದಲು ಹೂವಾಯಿತು ; ಹುಲಿಯನ್ನು ಮೊದಲುಮೊದಲು ಮುತ್ತಿದರು.
ಆಧಿಕ್ಯಕ್ಕೆ—ನಮಸ್ಕಾರನಮಸ್ಕಾರ ; ಹಿಂಡುಹಿಂಡು ಆನೆಗಳು.
ವಸ್ತುನಿರ್ಣಯಕ್ಕೆ—ಇವರಿಗೆ ದುಡ್ಡುದುಡ್ಡುಕೊಡು ; ಅವರಿಗೆ ಕಾಸುಕಾಸು ಕೊಡು.
ಬಾಧೆ—ಹಳ್ಳಹಳ್ಳ ! ಮುಳುಗಿದನುಮುಳುಗಿದನು !

* ಕೆಲವುವೇಳೆ ಮೂರುಸಾರಿಯೂ ಪ್ರಯೋಗಿಸುವುದುಂಟು : ಕೊಡುಕೊಡುಕೊಡು, ನೋಡಿನೋಡಿನೋಡಿ ಸಾಕಾಯಿತು.

ತ್ವರೆಗೆ—ಬಂದೆಬಂದೆ ; ಮಾಡುತ್ತೇನೆಮಾಡುತ್ತೇನೆ.
ಅವೃತ್ತಿಗೆ—ಹೇಳಿಹೇಳಿ ಬೇಸತ್ತನು ; ನೋಡಿನೋಡಿ ನಕ್ಕನು.
ವೀಪ್ಸೆಗೆ*—ಕೇರಿಕೇರಿಯಲ್ಲಿ ; ಮನೆಮನೆಯಲ್ಲಿ.
ವಾಕ್ಯಕ್ಕೆ—ಇತ್ತಬಾ ಇತ್ತಬಾ ; ನನಗೆಬೇಕು ನನಗೆ ಬೇಕು ;
ಹೊರಟುಹೋಗು ; ಹೊರಟುಹೋಗು.

(2) ಕೋಪ, ಸಮ್ಮತಿ ಮೊದಲಾದ ಅರ್ಥಗಳಲ್ಲಿ ಸಂಬೋಧನೆಯ ಪದಕ್ಕೆ ದ್ವಿರುಕ್ತಿ ಬರುವುದು. ಆಗ ಮೊದಲು ಅಥವಾ ಕೊನೆಯ ಶಬ್ದದ ಅಂತ್ಯಸ್ವರಕ್ಕೆ ದೀರ್ಘಾದೇಶ ಬರುವುದು.

ಉದಾ.

ಕೋಪಕ್ಕೆ—ಎಲಎಲಾ, ನೀನು ಎಂಥಾ ಕೆಲಸಮಾಡಿದೆ !
ಸಮ್ಮತಿಗೆ—ಮಗನೆಮಗನೆ, ನೀನು ಒಳ್ಳೆಯ ಕೆಲಸಮಾಡಿದೆ.
ಗದರಿಕೆಗೆ—ದುರುಳಾದುರುಳಾ, ನಿನ್ನನ್ನು ಶಿಕ್ಷಿಸದೆ ಬಿಟ್ಟೇನೆ ?

(3) ಕಡೆ, ನಡು, ತುದಿ, ಮೊದಲು, ಬಯಲು ಇವಕ್ಕೆ ದ್ವಿರುಕ್ತಿ ಬಂದಾಗ ಕಟ್ಟಕಡೆ, ನಟ್ಟನಡು, ತುಟ್ಟತುದಿ, ಮೊಟ್ಟಮೊದಲು, ಬಟ್ಟಬಯಲು ಎಂಬ ರೂಪಗಳನ್ನು ಪಡೆಯುವುವು. ಅತಿಶಯಾರ್ಥದಲ್ಲಿ ಮೊದಲು ಎಂಬುದು ಮೊದಮೊದಲು ಎಂದಾಗುವುದು.

(4) ದ್ವಿರುಕ್ತಿಯಲ್ಲಿ ಬಹುಸ್ವರವುಳ್ಳ ಧಾತುಗಳ ಆದಿಶಬ್ದದ ಕೊನೆಯ ಅಕ್ಷರಕ್ಕೆ ವಿಕಲ್ಪವಾಗಿ ಲೋಪ ಬರುವುದು.

ಉದಾ.

ಕೆಣಕಿಕೆಣಕಿ ; ಕೆಣಕೆಣಕಿ.
ಮುಳುಗಿಮುಳುಗಿ ; ಮುಳುಮುಳುಗಿ.
ನರಳಿನರಳಿ ; ನರನರಳಿ.

(5) ಗುಣವಾಚಕ ಕ್ರಿಯಾವಿಶೇಷಣಾವ್ಯಯಗಳ ಆದಿಶಬ್ದದ ಕೊನೆಯ ಅಕ್ಷರಕ್ಕೆ ಲೋಪಬರುವುದು.

ಉದಾ.

ದೊಡ್ಡದು ದೊಡ್ಡದು—ದೊಡ್ಡದೊಡ್ಡದು.
ಚಿಕ್ಕದು ಚಿಕ್ಕದು—ಚಿಕ್ಕಚಿಕ್ಕದು.

---

* ವೀಪ್ಸೆ ಎಂದರೆ ಒಂದನ್ನೂ ಬಿಡದೆ ಇರುವುದು.

ಮೆಲ್ಲಗೆ ಮೆಲ್ಲಗೆ—ಮೆಲ್ಲಮೆಲ್ಲಗೆ
ಬೇಗನೆ ಬೇಗನೆ—ಬೇಗಬೇಗನೆ.

(6) ದ್ವಿರುಕ್ತಿಯಲ್ಲಿ ಆದಿಶಬ್ದದ ವಿಭಕ್ತಿಗೆ ಲೋಪ ಬರುವುದು. ಕೆಲವುಕಡೆ ವಿಭಕ್ತಿಯೊಡನೆ ಆದಿಶಬ್ದದ ಕೊನೆಯ ಅಕ್ಷರಕ್ಕೂ ವಿಕಲ್ಪವಾಗಿ ಲೋಪಬರುವುದು.

ಉದಾ.

ತಮ್ಮ ತಮ್ಮ ; ತಂತಮ್ಮ.
ಕೆಳಗೆಕೆಳಗೆ ; ಕೆಳಕೆಳಗೆ.

70. ವಾಕ್ಯಭೇದಗಳು.—ವಾಕ್ಯಗಳಲ್ಲಿ ಸಾಮಾನ್ಯವಾಕ್ಯ, ಸಂಯೋಜಿತವಾಕ್ಯ, ಮಿಶ್ರವಾಕ್ಯ ಎಂದು ಮೂರುವಿಧ.

(1) ಕರ್ತೃ ಮೊದಲಾದ ಕಾರಕಗಳೊಡನೆ ಕೂಡಿ ಒಂದು ಕ್ರಿಯಾಪದವುಳ್ಳ ಸ್ವತಂತ್ರವಾಕ್ಯವು ಸಾಮಾನ್ಯವಾಕ್ಯವೆನಿಸುವುದು.

ಉದಾ.

ಸತ್ಪುರುಷರು ಪರರಿಗೆ ಉಪಕಾರವನ್ನು ಮಾಡುತ್ತಾರೆ.
ಭಟರು ತಮ್ಮ ತಮ್ಮ ಶಕ್ತಿಸಾಹಸಗಳನ್ನು ಹೇಳಿಕೊಳ್ಳುತ್ತಿರಲು, ಅರಸನು ಸಿಂಹಾಸನದಲ್ಲಿ ಕುಳಿತಿದ್ದನು.

(2) ಎರಡು ಅಥವಾ ಅನೇಕ ಸ್ವತಂತ್ರವಾಕ್ಯಗಳು "ಮತ್ತು" "ಆದರೆ", "ಅಥವಾ" ಮುಂತಾದ ಸಂಬಂಧಸೂಚಕ ಶಬ್ದಗಳಿಂದ ಸೇರಿಸಲ್ಪಟ್ಟಿದ್ದರೆ, ಆ ವಾಕ್ಯಸಮುದಾಯವು ಸಂಯೋಜಿತವಾಕ್ಯವೆನಿಸುವುದು.

ಉದಾ.

ಮಳೆ ಬಂದಿತು ; ಆದುದರಿಂದ ಹೊಳೆಗಳು ಹೆಚ್ಚಿದುವು.

ಶಿಷ್ಟರನ್ನು ಅರಸರು ಸನ್ಮಾನಿಸುತ್ತಾರೆ ; ಮತ್ತು ಜನಗಳು ಹೊಗಳುತ್ತಾರೆ. ಜನರು ವ್ಯಾಪಾರದಿಂದ ಜೀವಿಸುತ್ತಾರೆ ; ಅಥವಾ ವ್ಯವಸಾಯದಿಂದ ಜೀವಿಸುತ್ತಾರೆ. ಭರತನು ರಾಮನನ್ನು ರಾಜ್ಯಭಾರ ಮಾಡಬೇಕೆಂದು ಪ್ರಾರ್ಥಿಸಿದನು ; ಆದರೆ ರಾಮನು ಒಪ್ಪಲಿಲ್ಲ.

ಎಲ್ಲಿ ತನಗೆ ಸೌಖ್ಯತೋರುವುದೋ, ಅಲ್ಲಿ ವಾಸವಾಡುವುದು ಉತ್ತಮ.

(3) ಒಂದು ವಾಕ್ಯವು ಮತ್ತೊಂದು ವಾಕ್ಯಕ್ಕೆ ಅಂಗವಾಗಿದ್ದರೆ ಆ ವಾಕ್ಯಸಮುದಾಯವು ಮಿಶ್ರವಾಕ್ಯವೆನಿಸುವುದು. ಅದರಲ್ಲಿ " ಎಂಬುದು " ಎಂಬ ಕೃದಂತಭಾವನಾಮದೊಡನೆ ಕೂಡಿದ ವಾಕ್ಯವು ಕರ್ತ್ರಾದಿ ಕಾರಕ ರೂಪವಾದ ಅಂಗವಾಗಿದ್ದರೆ ಕಾರಕಮಿಶ್ರವಾಕ್ಯವೆಂದೂ, " ಎಂಬ, " " ಎನ್ನುವ " ಎಂಬ ಕೃದಂತನಾಮಗಳೊಡನೆ ಕೂಡಿದ ವಾಕ್ಯವು ಯಾವುದಾದರೂ ಒಂದು ಕಾರಕಕ್ಕೆ ವಿಶೇಷಣವಾಗಿದ್ದರೆ ಕಾರಕವಿಶೇಷಣ ಮಿಶ್ರವಾಕ್ಯವೆಂದೂ, " ಎಂದು, " " ಎನ್ನುತ್ತಾ " ಮೊದಲಾದ ಕೃದಂತಾವ್ಯಯಗಳೊಡನೆ ಕೂಡಿದ ವಾಕ್ಯವು ಕ್ರಿಯೆಯಲ್ಲಿ ಅನ್ವಯಿಸುವುದಾಗಿದ್ದರೆ ಕ್ರಿಯಾವಿಶೇಷಣ ಮಿಶ್ರವಾಕ್ಯವೆಂದೂ ಮೂರುವಿಧ.

ಉದಾ.

ಕಾರಕಮಿಶ್ರವಾಕ್ಯಕ್ಕೆ—ಸೂರ್ಯನು ಪೂರ್ವದಿಕ್ಕಿನಲ್ಲಿ ಹುಟ್ಟುತ್ತಾನೆ ಎಂಬುದನ್ನು ಎಲ್ಲರೂ ಬಲ್ಲರು.

ಕಾರಕವಿಶೇಷಣ ಮಿಶ್ರವಾಕ್ಯಕ್ಕೆ—ತಾಳಿದವನು ಬಾಳಿಯಾನು ಎಂಬ ಗಾದೆ ಸತ್ಯವಾಗಿದೆ.

ಕ್ರಿಯಾವಿಶೇಷಣ ಮಿಶ್ರವಾಕ್ಯಕ್ಕೆ—ಐಶ್ವರ್ಯವು ಸ್ಥಿರವಾಗಿರುತ್ತದೆ ಎಂದು ಅಜ್ಞರು ಭಾವಿಸುತ್ತಾರೆ.

11. ಅನುಬಂಧ ಪ್ರಕರಣ

ಷಟ್ಪದಿಕಾವ್ಯಗಳಲ್ಲಿಬರುವ ರೂಪವಿಶೇಷಗಳು.—ಷಟ್ಪದಿಕಾವ್ಯಗಳಲ್ಲಿ ಈಗ ಬಳಕೆಯಲ್ಲಿಲ್ಲದ, ಆಗಿನ ಕಾಲದ ಕೆಲವು ರೂಪಗಳು ಪ್ರಯೋಗಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಕೆಲವು ಹಳಗನ್ನಡದ ರೂಪಗಳು; ಹಳಗನ್ನಡದ ವ್ಯಾಕರಣವನ್ನು ಓದಿ ಅವುಗಳನ್ನು ತಿಳಿಯಬೇಕು. ಹೊಸಗನ್ನಡಕ್ಕೆ ಬಲುಮಟ್ಟಿಗೆ ಸರಿಹೋಗುವ ರೂಪಗಳನ್ನು ಇಲ್ಲಿ ಮಾದರಿಗಾಗಿ ತೋರಿಸಿರುತ್ತದೆ.

1. ಅಕ್ಷರಗಳು.—

ಱ, ೞ, ಎಂಬ ಎರಡು ಅಕ್ಷರಗಳು ಹೆಚ್ಚಾಗಿರುತ್ತವೆ.

ಉದಾ.

ತೊಱೆ, ಮಱೆ, ಸುೞಿ, ಮೞೆ.

2. ನಾಮಪದ.—

(*a*) ಸರ್ವನಾಮಗಳು :—ಆವನು, ಆವಳು, ಆರು, ಆವುದು, ಆವುವು; ತಾನ್, ನೀನ್, ನಾನ್, (ಆನ್,); ತಾ, ನೀ, ನಾ; ತಾವ್, ನೀವ್, ನಾವ್; ಚತುರ್ಥಿಯಲ್ಲಿ ಅಪೂರ್ವವಾಗಿ ಪ್ರಾಸಸ್ಥಾನದಲ್ಲಿ ತವಗೆ, ನಿವಗೆ, ನವಗೆ; ಉತ್ತಮ ಪುರುಷದಲ್ಲಿ ಎನ್ನ, ಎಮ್ಮ, ಎಮಗೆ, ಎವಗೆ ಮೊದಲಾದುವು.

(*b*) ಬಹುವಚನ ಪ್ರತ್ಯಯಗಳು :—ಗಳ್, ಗಳು; ಈ ಪ್ರತ್ಯಯಗಳ ಹಿಂದೆ ಬಿಂದು ವಿಕಲ್ಪವಾಗಿ ಬರುವುದು.

ಉದಾ.

ಮರಂಗಳ್, ಮರಂಗಳು, ಮರಗಳು; ದೇಶಂಗಳ್, ದೇಶಂಗಳು, ದೇಶಗಳು.

ದಿರು ಪ್ರತ್ಯಯದ ಹಿಂದೆ ಬಿಂದು ವಿಕಲ್ಪವಾಗಿ ಬರುವುದು.

ಉದಾ.

ಅಣ್ಣಂದಿರು, ಅಣ್ಣದಿರು; ತಮ್ಮಂದಿರು, ತಮ್ಮದಿರು.

ಅರ್ ಪ್ರತ್ಯಯದ ಮೇಲೆ ಕಳ್, ಕಳು ಎಂಬ ಪ್ರತ್ಯಯಗಳು ಸೇರುವುವು.

ಉದಾ.

ಅರಸರ್ಕಳ್, ಬುಧರ್ಕಳು.

ಬರು ಎಂಬ ಪ್ರತ್ಯಯ ಸೇರಿದ ರೂಪಗಳು ಕೆಲವು ಉಂಟು.

ಉದಾ.

ಅನಿಬರು, ಇನಿಬರು, ಎನಿಬರು, ಹಲಬರು, ಕೆಲವರು.

(*c*) ವಿಭಕ್ತಿಪ್ರತ್ಯಯಗಳು :—

ಪ್ರಥಮೆ.—ಅಕಾರಾಂತಕ್ಕೆ ಬಿಂದು ; ಅಥವಾ ಆ ಬಿಂದುವಿಗೆ ಲೋಪ.

ಉದಾ.

ರಾಮಂ, ರಾಮ ; ನೆಲಂ, ನೆಲ.

ದ್ವಿತೀಯೆ.—ಅಂ, ಅನು, ಅ.

ಉದಾ.

ರಾಮನಂ, ರಾಮನನು, ರಾಮನ ; ನೆಲವಂ, ನೆಲವನು, ನೆಲವ ; ಹುಲಿಯಂ, ಹುಲಿಯನು, ಹುಲಿಯ.

ತೃತೀಯೆ.—ಇಂ, ಇಂದೆ, ಇಂದಂ ; ಅಕಾರಾಂತ ನಪುಂಸಕ ಲಿಂಗಕ್ಕೆ ವಿಕಲ್ಪವಾಗಿ ಎ, ಇ.

ಉದಾ.

ರಾಮನಿಂ, ರಾಮನಿಂದೆ, ರಾಮನಿಂದಂ ; ಮರದಿಂ, ಮರದಿಂದೆ, ಮರದಿಂದಂ, ಮರದೆ, ಮರದಿ.

ಚತುರ್ಥಿ.—ಅಕಾರಾಂತಕ್ಕೆ ಕೆ, ಗೆ, ಬಿಂದುಸಹಿತವಾದ ಗೆ; ಉಕಾರಾಂತಕ್ಕೆ ಏಕವಚನದಲ್ಲಿ ವಿಕಲ್ಪವಾಗಿ ಇಂಗೆ.

ಉದಾ.

ಮರಕೆ, ನೆಲಕೆ ; ರಾಮಗೆ, ರಾವಣಗೆ, ಅವಗೆ ; ರಾಮಂಗೆ, ರಾವಣಂಗೆ, ಅವಂಗೆ ; ಊರಿಂಗೆ, ಕಾಡಿಂಗೆ.

ಹೊಸಗನ್ನಡದ ಅಕ್ಕೆ ಎಂಬುದಕ್ಕೆ ಪ್ರತಿಯಾಗಿ ಅಕೆ ಎಂದು ಉಂಟು.

ಉದಾ.

ಮುಂದಕೆ, ಹಿಂದಕೆ.

ಒಳಯಿಂಕೆ, ಕೆಳಯಿಂಕೆ ಎಂಬುವು ಒಳಗಣ್ಗೆ, ಕೆಳಗಣ್ಗೆ ಎಂಬವುಗಳ ರೂಪಾಂತರಗಳು.

ಷಷ್ಠಿ.—ದಿಗ್ವಾಚಕಗಳಿಗೆ ಅಣಾಗಮ.

ಉದಾ.

ಹಿಂದಣ, ಮುಂದಣ, ಹೊರಗಣ, ಒಳಗಣ, ಅತ್ತಣ, ಇತ್ತಣ.

ಸಪ್ತಮಿ.—ಒಳ್, ಒಳು, ಅಲಿ; ಅಕಾರಾಂತ ನಪುಂಸಕದಲ್ಲಿ ಎ, ಇ.

ಉದಾ.

ರಾಮನೊಳ್, ರಾಮನೊಳು, ರಾಮನಲಿ; ಮರದೊಳ್, ಮರದೊಳು, ಮರದಲಿ, ಮರದೆ, ಮರದಿ.

3. ಕ್ರಿಯಾಪದ.—

(*a*) ಹೊಸಧಾತುಗಳು :—

" ಇಸು " ಪ್ರತ್ಯಯಕ್ಕೆ ಬದಲಾಗಿ " ಐಸು. "

ಉದಾ.

ಹಾರೈಸು, ಸೋಳೈಸು, ಮೇಳೈಸು, ಇವು ಹಾರಯಿಸು, ಸೋಳಯಿಸು ಮೇಳಯಿಸು, ಸೂಳವಿಸು, ಮೇಳವಿಸು ಎಂದೂ ಆಗುವುದುಂಟು.

ಹಳಗನ್ನಡಕ್ಕೆ ಸರಿಯಾಗುವ ಕೆಲವು ರೂಪಗಳುಂಟು.

ಉದಾ.

ತೀರ್ಚು, ಸಾರ್ಚು; ಅರಿಪು, ಕಳಿಪು; ಅರುಹು. ಕಳುಹು.

(*b*) ವರ್ತಮಾನಕಾಲದಲ್ಲಿ ಕಾಲವನ್ನು ಸೂಚಿಸುವ ಪ್ರತ್ಯಯ ವಿಲ್ಲದೆ ಧಾತುವಿನ ಮೇಲೆ ಕು, ಗು, ಎಂಬ ಪ್ರತ್ಯಯಗಳು ಸೇರುವುವು. (ಹಳಗನ್ನಡದಲ್ಲಿ ಕುಂ, ಗುಂ).

ಉದಾ.

ತೋರ್ಕು, ಸಾಲ್ಕು, ನುಡಿಗು, ಮಾಡುಗು, ಬೇಡುಗು, ಪೋಕು, ಅಕ್ಕು, ಬೇಡು, ಮಾಡು ಧಾತುಗಳಿಗೆ ಬೇಳ್ಕು, ಬೇಕು ಮಾಳ್ಕು ಎಂಬ ರೂಪಗಳೂ ಉಂಟು. ಸಾಲ್ಕು ಎಂಬುದು ಸಾಕು ಎಂದೂ ಆಗುವುದು (ಹಳಗನ್ನಡ— ತೋರ್ಕುಂ, ಸಾಲ್ಗುಂ, ಬೇಳ್ಕುಂ, ಮಾಳ್ಕುಂ).

(*c*) ಭೂತಕಾಲದಲ್ಲಿ ಪೊರಮಡು ಎಂಬ ಧಾತುವಿನ ಪೊರಮಟ್ಟ ಎಂಬ ರೂಪಕ್ಕೆ ಬದಲಾಗಿ ಹೊರವಂಟ ಎಂಬ ರೂಪವು ರೂಢಿಯಲ್ಲಿದೆ. ಹೀಗೆಯೇ ಕೃದಂತದಲ್ಲಿ ಪೊರಮಟ್ಟು ಎಂಬುದಕ್ಕೆ ಹೊರವಂಟು ಎಂದಾಗುತ್ತದೆ.

ಇಡು ಎಂಬ ಧಾತುವಿಗೆ ಅಯ್ದಾನೆ, ಅಯ್ದನೆ, ಅಯ್ದಳೆ, ಅಯ್ದರೆ ಮುಂತಾದ ರೂಪಗಳು ಇವೆ. ಗೆಲ್ಲು ಧಾತುವಿಗೆ ಗೆಲಿದನು, ಗೆಲದು, ಎಂಬ ಭೂತಕಾಲದ ರೂಪಗಳಿವೆ.

(*d*) ವಿಧಿರೂಪದಲ್ಲಿ.—

ಪ್ರಥಮಪುರುಷ, ಸಾಮಾನ್ಯವಾಗಿ—ಗೆ.

ಉದಾ.

ಮಾಡುಗೆ, ಕೇಳುಗೆ, ನಡೆಗೆ.

ಮಧ್ಯಮಪುರುಷ ಬಹುವಚನ—ಇ.

ಉದಾ.

ನುಡಿಯಿ, ಪೇಳಿ, ಮಾಡಿ.

ಉತ್ತಮಪುರುಷ ಬಹುವಚನ—ವ.

ಉದಾ.

ಮಾಡುವ, ನುಡಿವ, ಕೇಳುವ.

(*e*) ಕ್ರಿಯಾಪದದ ಕೊನೆಯಲ್ಲಿ ಪುರುಷಸೂಚಕವಾದ ಪ್ರತ್ಯಯದ ಬಿಂದುವಿಗೆ ಲೋಪವೂ, ಅಯ್ ಪ್ರತ್ಯಯಕ್ಕೆ ಏಕಾರಾದೇಶವೂ ವಿಕಲ್ಪವಾಗಿ ಬರುವುವು.

ಉದಾ.

ಬಂದಂ, ಬಂದ; ಬಂದೆಂ, ಬಂದೆ; ಬಂದಯ್, ಬಂದೆ.

4. ಕೃದಂತ —

(a) ಕೃದಂತನಾಮದ ವರ್ತಮಾನಕಾಲದ "ವ" ಪ್ರತ್ಯಯಕ್ಕೆ ಹಿಂದೆ ಹೊಸಗನ್ನಡದ ಧಾತುವಿನ ಉಕಾರಕ್ಕೆ ಲೋಪವುಂಟು.

ಉದಾ.

ಕೇಳುವ, ಕೇಳ್ವ; ನಿಲುವ, ನಿಲ್ವ; ಹೊಯ್ಯುವ, ಹೊಯ್ವ; ಸಾರುವ, ಸಾರ್ವ.

"ವ" ಪ್ರತ್ಯಯವು ಕೆಲವುಕಡೆ ಪ, ಪ್ಪ, ಹ, ಬ ಎಂಬ ರೂಪಾಂತರಗಳನ್ನು ಹೊಂದುವುದುಂಟು.

ಉದಾ.

ಮಾಡು—ಮಾಳ್ಪ; ಬೇಡು—ಬೇಳ್ಪ; ಬರು—ಬರ್ಪ; ಇರು—ಇರ್ಪ; ಪೋಗು—ಪೋಪ; ಆಗು—ಅಪ್ಪ, ಹೀಗೆಯೇ ಇಪ್ಪ, ಬಪ್ಪ, ತಪ್ಪ; ಅಹ, ಇಹ, ಬಹ, ತಹ; ಅಂತಹ, ಇಂತಹ, ಎಂತಹ; ಹೋಹ, ಬೇಹ; ಕೊಂಬ (=ಕೊಳ್ವ).

(b) ಕೃದಂತಾವ್ಯಯದ ವರ್ತಮಾನಕಾಲದಲ್ಲಿ ಎ, ಅಲ್ಕೆ, ಅಲಿಕೆ, ಉತೆ, ಉತ್ತೆ, ಉತುಂ ಉತ್ತುಂ ಎಂಬ ಪ್ರತ್ಯಯಗಳು ಸೇರುವುವು.

ಉದಾ.

ಬರೆ, ನೋಡ; ಬರಲ್ಕೆ, ನೋಡಲ್ಕೆ; ಬರಲಿಕೆ, ನೋಡಲಿಕೆ; ಬರುತೆ, ನೋಡುತೆ; ಬರುತ್ತೆ, ನೋಡುತ್ತೆ; ಬರುತುಂ, ನೋಡುತುಂ; ಬರುತ್ತುಂ, ನೋಡುತ್ತುಂ.

ಕೆಲವುಕಡೆ ಪ್ರಾಸಸ್ಥಾನದಲ್ಲಿ ವುತೆ ಎಂಬ ರೂಪವೂ ಕಾಣಬರುವುದು.

ಉದಾ.

ಸೀವುತೆ, ಹೊಯ್ಯುತೆ, ಬಯ್ಯುತೆ.

ಭೂತಕಾಲದಲ್ಲಿ ಹೊಸಕನ್ನಡದಲ್ಲಿ "ಇ" ಪ್ರತ್ಯಯ ಸೇರುವ ಕೆಲವು ಕಡೆ "ದು" ಅಥವಾ "ಇದು" ಪ್ರತ್ಯಯಗಳು ಸೇರುವುವು.

ಉದಾ.

ಬಳಲಿ, ಬಳಲ್ದು, ಬಳಲಿದು; ಕೇಳಿ, ಕೇಳ್ದು, ಕೇಳಿದು; ನೋಡಿ, ನೋಡಿದು; ಮುಟ್ಟಿ, ಮುಟ್ಟಿದು.

ಪಕ್ಷಾರ್ಥದಲ್ಲಿ ಭೂತಕಾಲದ "ದ" ವರ್ತಮಾನಕಾಲದ "ವ" ಪ್ರತ್ಯಯಗಳ ಮೇಲೆ ಒಡೆ, ಅಡೆ, ಅರೆ ಎಂಬ ಪ್ರತ್ಯಯಗಳು ಸೇರುವುವು.

ಉದಾ.

ಬಂದೊಡೆ, ಬಂದಡೆ, ಬಂದರೆ ; ಬರುವಡೆ, ಬರುವರೆ.

5. ತದ್ಧಿತಾಂತ.—

ಉಪಮಾನದಲ್ಲಿ ವೋಲ್, ಪ್ರೋಲ್, ವೊಲು, ಒಲು, ಎಂಬ ಪ್ರತ್ಯಯಗಳು ಸೇರುವುವು.

ಉದಾ.

ರಾಮನವೋಲ್, ಹರಿಪ್ರೋಲ್, ಸಿಂಗನವೋಲು, ಸಿಂಗನೊಲು ; ನಿನ್ನ ವೊಲು, ಬೆಳುದಿಂಗಳೊಲು.

ರಾಮಂ, ಚಂದ್ರಂ, ಎಂಬಂತೆ ಬಿಂದು ಕೊನೆಯಲ್ಲಿರುವ ನಾಮ ಪದಗಳ ಮೇಲೆ ವೋಲ್ ಮುಂತಾದ ಪ್ರತ್ಯಯಗಳು ಸೇರುವಾಗ ವಕಾರಕ್ಕೆ ಬಕಾರಾದೇಶ ಬರುವುದು.

ಉದಾ.

ರಾಮಂಬೋಲ್, ಇಂದ್ರಂಬೋಲ್, ಚಂದ್ರಂಬೊಲು, ಚಕೋರಂಬೊಲು

6. ಸಮಾಸ.—ಹಳಗನ್ನಡದ ಸಮಾಸಶಬ್ದಗಳು ಸ್ವಲ್ಪ ವಿಕಾರ ಹೊಂದಿ ಬಹಳವಾಗಿ ಪ್ರಯೋಗಿಸಲ್ಪಡುವುವು.

ಉದಾ.

ಕಣ್ಬನಿ—ಕಂಬನಿ ; ಒರ್ಬಿಡಿ—ಒಪ್ಪಿಡಿ ;
ಇರ್ಕೆಲ—ಇಕ್ಕೆಲ ; ಪೆರ್ಮರ—ಹೆಮ್ಮರ.

ವಿಕಾರವಿಲ್ಲದೆ ಪ್ರಯೋಗವಾಗುವುದೂ ಉಂಟು.

ಉದಾ.

ಮುಂಬಗಲು, ಇಂಗಡಲು, ತಂಬೆಲರು, ಮಾಂಬುಳು, ಎಣ್ದೆಸೆ, ತಣ್ಗದಿರು ; ಮುಪ್ಪುರಿ, ಬೀಳ್ಕೊಳು ಬೆಸಗೊಳು, ಅರಗುಲಿ, ಅಲರ್ಗಣ್ಣು, ಪೆರನೊಸಲು, ತನಿ ಗಂಪು, ಕುಡುಮಿಂಚು, ನಿಡುಮೂಗು, ನಳಿದೋಳು, ಬಿಸುನೆತ್ತರು, ನಗೆಗಣ್ಣು.

ಅರಿಸಮಾಸದ ಪ್ರಯೋಗ ವಿಶೇಷವಾಗಿರುತ್ತದೆ.

7. ಅವ್ಯಯ.—ಹೊಸಗನ್ನಡದಲ್ಲಿಲ್ಲದ ಕೆಲವು ಅವ್ಯಯಗಳುಂಟು.

ಉದಾ.

ಮೇಣ್ = ಅಥವಾ, ಮತ್ತು.
ಅಂ, ಉಂ, ಉ = ಊ.

ಉದಾ—ಆದೊಡಂ, ಆದೊಡೆಯುಂ, ಆದೊಡೆಯು.

"ಉಂ, ಉ" ಎಂಬಿವು ದ್ವಿತೀಯಾ ವಿಭಕ್ತಿಪ್ರತ್ಯಯದ ಹಿಂದೆ ಬರುವುದುಂಟು.

ಉದಾ.

ಎನ್ನುಮಂ = ಎನ್ನುವನು.
ಅನ್ನೆಗಂ, ಅನ್ನೆಗ, = ಅನಕ. ಅದುವರೆಗೆ, ತನಕ.
ನರೆ, ಉರೆ. ಮಿಗೆ, ಸಲೆ, ನಾಡೆ = ಹೆಚ್ಚಾಗಿ, ತುಂಬ.
ಗಡಂ, ಗಡ = ಹಾಗೋ, ಅಂತೆ, ಅಲ್ಲವೆ.